

ಸಂಚಯ

ಸಂಚಯದ ಪ್ರಕಟಣೆಗಳು

○ **ಗಾಜು** (ಕವಿತೆಗಳು)*	ವಿವಿಧ ಕವಿಗಳು	ರೂ. 8–00
○ **ಎ.ಕೆ. ರಾಮಾನುಜನ್ ಹೆಜ್ಜೆ ಗುರುತು***	ವಿವಿಧ ಲೇಖಕರು	ರೂ. 15–00
○ **ಸಿಕಾಡ** (ಕವಿತೆಗಳು)	ಜಿ. ಕೆ. ರವೀಂದ್ರಕುಮಾರ್	ರೂ. 35–00
○ **ಡ್ರೀಮರ್** (ಕವಿತೆಗಳು)	ಡಿ. ವಿ. ಪ್ರಹ್ಲಾದ್	ರೂ. 18–00
○ **ಅಭಿಮುಖ** (ಲೇಖನಗಳು)	ಎನ್.ಎಸ್. ಶ್ರೀಧರಮೂರ್ತಿ	ರೂ. 20–00
○ **ಬಗೆ ತೆರೆದಬಾನು** (ಸಾಹಿತಿಗಳ ಸಂದರ್ಶನಗಳು)	ಸಂ : ಡಿ. ವಿ. ಪ್ರಹ್ಲಾದ್	ರೂ. 60–00
○ **ಚೌಕಟ್ಟು** (ಸಮಕಾಲೀನ ದೃಶ್ಯಕಲೆ ಕುರಿತು)	ಸಂ : ಎಚ್.ಎ. ಅನಿಲ್‌ಕುಮಾರ್	ರೂ. 25–00

* ಪ್ರತಿಗಳು ಮುಗಿದಿವೆ.

ಸಂಚಯದ ಚಂದಾದಾರರಿಗೆ ಶೇ. 40 ರಿಯಾಯಿತಿ.

ಸಂಚಯ

ಸಾಂಸ್ಕೃತಿಕ ಪತ್ರಿಕೆ

ದ್ವೈಮಾಸಿಕ

ಸಂಪುಟ : ೮

ಸಂಚಿಕೆ : ೬

ನವೆಂಬರ್ – ೯೭

ಸಂಪಾದಕರು :

ಡಿ. ವಿ. ಪ್ರಹ್ಲಾದ್
ರವಿಕುಮಾರ ಕಾಶಿ

ಚಂದಾ ವಿವರ :

ವಾರ್ಷಿಕ : ರೂ. ೫೦/-
ಆಜೀವ : ರೂ. ೪೫೦/-

ಸಂಪರ್ಕ ವಿಳಾಸ :

೨೪/ಡಿ, ೧೭ನೇ ಮುಖ್ಯರಸ್ತೆ
ಮುನೇಶ್ವರ ಬ್ಲಾಕ್
ಜಿ.ಇ.ಎಫ್. ಅಂಚೆ
ಬೆಂಗಳೂರು - ೫೬೦ ೦೨೬
ಫೋನ್ : ೬೬೭೧೩೩೨

ಸಂಚಯ-೧೦

ಉತ್ತರವೇ ಇಲ್ಲ
ಬರಿಗೊಡಗಳಿಗೆ ಸಮಾಧಾನ ಹೇಳುತಿದೆ
ನೀರಿಲ್ಲದ ನಲ್ಲಿ
"ತುಂಬಿದ ಕೊಡ ತುಳುಕುವುದಿಲ್ಲ"

–ಕೆ.ಎಸ್.ನ

ಮುಖಪುಟ :

ಬಿ. ದೇವರಾಜ್‌ರ ಕಲಾಕೃತಿ
Forgotten Memory

ಮಾಧ್ಯಮ :

ಕಾಗದದ ಮೇಲೆ ಅಕ್ರಿಲಿಕ್ ವರ್ಣ

ನಿಮ್ಮೊಡನೆ

ಪ್ರಿಯ ಓದುಗರೆ,

ಎಲ್ಲಿಂದ ಹೇಗೆ ಬರೆಯಲು ಆರಂಭಿಸಬೇಕೆನ್ನುವುದೇ ಒಂದು ಸವಾಲು, ಸರ್ಕಾರಕ್ಕೆ ಸಮಾಜಕ್ಕೆ ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ಘಟನೆಗಳು ನಮ್ಮ ಕಣ್ಣೆದುರಿಗಿದೆ. ಲಂಕೇಶ್ ಬರೆದಿರುವ ಕೆಲವು ಸಾಲು ಹೀಗಿದೆ; "ಮಕ್ಕಳಿಗೆ ವಿದ್ಯೆ ಜನಕ್ಕೆ ಆಸ್ಪತ್ರೆ ಉದ್ಯೋಗಾವಕಾಶ ಉತ್ಪಾದನಾ ಸಾಮರ್ಥ್ಯ ಇವೆಲ್ಲವುಗಳ ಬಗ್ಗೆ ಏನೇನೂಗೊತ್ತಿಲ್ಲದ ಸರ್ಕಾರ ಸಂಸ್ಕೃತಿಯಂಥಾ ಕೋಮಲ ಮೌಲ್ಯದ ಮೇಲೆ ಸವಾರಿ ಮಾಡುವುದು ದುರಂತಕ್ಕೆ ಕಾರಣವಾಗಬಲ್ಲದು. ಇದು ಅನ್ನ ಬಟ್ಟೆ ವಸತಿಯ ವಲಯದ ದುರಂತೆಕ್ಕಿಂತ ಘೋರವಾದದ್ದು; ಯಾಕೆಂದರೆ ಇದು ಮನಸ್ಸಿನ ದುರಂತ". ನಿಜಕ್ಕೂ ಇದು ದುರಂತವೆ, ಸಂಸ್ಕೃತಿಯ-ಸಾಹಿತ್ಯದ ಕೆಲಸಗಳಿಗೆ ವ್ಯವಹರಿಸಲು ಬೇಕಾದ ಸೂಕ್ಷ್ಮತೆ ಸರ್ಕಾರಿ ಯಂತ್ರಕ್ಕೆ ಖಂಡಿತಾ ಇಲ್ಲ, ಸೀಲು ಜಪ್ತಿ ಮಾಡುವ ಪ್ರಾಧಿಕಾರ ಕನ್ನಡದ ಉದ್ಧಾರ ಮಾಡುವುದು ಯಾವ ರೀತಿಯ ನಿರೀಕ್ಷೆ ? ಅಧಿಕಾರದ ಒತ್ತಡದಿಂದ ಭಾಷೆಯೊಂದು ಬೆಳೆದ ಉದಾಹರಣೆ ಎಲ್ಲೂ ಇಲ್ಲ. ಸದಾ ರಾಜಕಾರಣಿಗಳ ಸರ್ಕಾರದ ಕೃಪಾ ಭಿಕ್ಷೆಗೆ ಕೈಯೊಡ್ಡುವ ಪರಿಷತ್ತಿಗೆ, ಸಾಹಿತ್ಯ ಸಮ್ಮೇಳನವೆಂಬ ವಾರ್ಷಿಕ ಜಾತ್ರೆ ಬಿಟ್ಟು ಅರ್ಥಪೂರ್ಣವಾದ ಯಾವ ಕೆಲಸವೂ ಗೋಚರಿಸುತ್ತಿಲ್ಲ. ಆದಕ್ಕೇ ಅದು (ಪರಿಷತ್ತು)ಕೊಜೆಂಟ್ರಿಕ್ಸ್‌ನಂಥಾ ಕಂಪೆನಿ ಎದುರು ನಮ್ಮೆಲ್ಲರ ಅಭಿಮಾನವನ್ನ ಅಡವಿಟ್ಟು ದೇಹಿ ಎನ್ನಬಲ್ಲದು. ಇನ್ನು ತೂಕಡಿಸುವ ಅಕಾಡೆಮಿಗಳಿಗೆ ಯಾವುದೂ ಬೇಕಿಲ್ಲ, ಅವು ಸರ್ಕಾರಿ ಶಿಬಿರಗಳನ್ನು ಯೋಜಿಸುವ ನಿರ್ವಹಿಸುವ ಯಂತ್ರಗಳಷ್ಟೇ. ಸಾಮಾಜಿಕ ಅಥವಾ ಇತರೆ ಕ್ಷೇತ್ರಕ್ಕೆ ಮೀಸಲಾತಿ ಅಗತ್ಯ ಆದರೆ ಮನುಷ್ಯನ ನಗು ಅಳು-ನೋವಿನಷ್ಟು ಸಹಜವಾದ ಕಲೆಗೆ-ಸಾಹಿತ್ಯಕ್ಕೆ ಯಾವ ಮೀಸಲಾತಿಯೂಬೇಕಿಲ್ಲ. ಯಾವ ಕವಿತೆಯಾಗಲೀ-ಕಲಾ ಕೃತಿಯಾಗಲೀ ಶಿಷ್ಟವೂ ಅಲ್ಲ ಪರಿಶಿಷ್ಟವೂ ಅಲ್ಲ. ಸರ್ಕಾರಿ ಕುರ್ಚಿಗಂಟಿದ ತಕ್ಷಣ ನಮ್ಮ ಬುದ್ಧಿಜೀವಿಗಳು ಮಹಾ ಪ್ರಸಾದ ಸ್ವೀಕರಿಸುವ ಭಿಕ್ಷಾಪಾತ್ರೆಗಳಾಗಿಬಿಡುವುದು ನಿಜವಾದ ದುರಂತ.

ನಿಜ, ಹಣ ಮತ್ತು ಅಧಿಕಾರಿವಿದ್ದೆಡೆ, ವಿವೇಚನೆ - ಸೂಕ್ಷ್ಮಜ್ಞತೆ ಜೊತೆಗೂಡಿದರೆ ಮಾತ್ರ ಕೆಲಮಟ್ಟದ ಕೆಲಸ ಸಾಧ್ಯ, ಆದರೆ ಹಣ ಮತ್ತು ಅಧಿಕಾರ ಇದ್ದ ಮಾತ್ರಕ್ಕೆ ಎಲ್ಲವನ್ನೂ ನಿಯಂತ್ರಿಸುವ ಎಲ್ಲವನ್ನೂ ನಿರ್ದೇಶಿಸುವ ಕ್ಷಮತೆ ಖಂಡಿತಾ ಬರಲಾರದು.

ಇನ್ನು ಸಂಚಯದ ಬಗ್ಗೆ ; ಇದು ಎಂಟನೇ ಸಂಪುಟದ ಕೊನೆಯ ಸಂಚಿಕೆ. ವರ್ಷವೊಂದಕ್ಕೆ ಆರು ಸಂಚಿಕೆ ಕೊಡಬೇಕಿದ್ದ ನಮ್ಮ ಒಪ್ಪಂದ ಸುಮಾರು ಇಪ್ಪತ್ತೆರಡು ತಿಂಗಳು ಎಳೆದಿದೆ. ವಿಶೇಷ ಸಂಚಿಕೆಗಳು, ದಶಮಾನೋತ್ಸವ ನೂರಾ ಎಂಟು ತರಲೆ ತಾಪತ್ರಯಗಳು, ಬಹುಪಾಲು ಏಕವ್ಯಕ್ತಿ ಪ್ರದರ್ಶನಗಳೇ ಆಗಿರುವ ನಮ್ಮ ಸಾಹಿತ್ಯ ಪತ್ರಿಕೆಗಳಿಗೆ, ಎಷ್ಟೇ ಆಗಿಬಾರದು ಎಂದುಕೊಂಡರೂ ಸಂಪಾದಕರ ಏಳುಬೀಳುಗಳು ಪತ್ರಿಕೆಗಳದ್ದೂ ಆಗಿಬಿಡುತ್ತವೆ. ಮತ್ತೆ ಹೊಸ ವರ್ಷದ ಜನವರಿ ತಿಂಗಳಿನಿಂದ ಹೊಸ ಸಂಪುಟ ಪ್ರಾರಂಭಿಸುತ್ತೇವೆ. ಎಷ್ಟೇ ಕಷ್ಟವಾಗಲಿ ನಿಯತ್ತಿನಿಂದ ಎರಡು ತಿಂಗಳಿಗೊಂದು ಸಂಚಿಕೆ ಹೊಸ ರೀತಿಯಲ್ಲಿ ಕೊಡುವ ವಾಗ್ದಾನ ಮಾಡುತ್ತಿರುವೆ. ಚಂದಾ ಅವಧಿ ಮುಗಿದವರು ನವೀಕರಿಸಿ, ಇನ್ನಷ್ಟು ಜನ ಹೊಸಬರನ್ನು ನಮ್ಮ ಓದುಗ ಬಳಗಕ್ಕೆ ಸೇರಿಸಿ ಸಹಕರಿಸಿ.

ನಿಮ್ಮ

ಸಂಪಾದಕ



ಒಳಗುದಿ

○ ○

ಎಸ್. ಕೆ. ಹನುಮಂತಯ್ಯ

ಎತ್ತೆತ್ತಲು ಕತ್ತಲು
ರಕ್ಕಸಿಯು ಮೂಗು ನತ್ತುಗಳು
ಮಿಂಚುಹುಳು
ಕಾದ ನೆಲ ಪಕ್ಕೆಯಲಿ
ಕಪ್ಪೆ, ಕೀಟದ ನಿದ್ದೆ
ಬಿಸಿಲ ಕದನದಿ ಮುಗಿಲು
ಸುಡುಗಾಡು
ಧೂಳು ದುಃಖದ ಕಾಳು
ನೆಲದಬಾಳು.
ಇರುಳಲೆ ಮೇಲೆ ತೇಲುವ ನಾವೆ
ಜಗರೋಸಿ, ಕೈಬೀಸಿ
ನೀರಿರದ ಕಣ್ಣಲ್ಲಿ ಬಿರುಗಾಳಿ ಬೀಸಿ
ಬುದ್ಧನೂರಿಗೆ ಸಿದ್ಧ ಪ್ರಯಾಣ.

○ ○ ○

ಗಿಡ ಗುಡ್ಡ ಬಂಡೆಯು
ಬಾಯಿಗಡ್ಡಲಾಗಿದೆ ಮೌನ
ನಡೆದಷ್ಟೂ......... ಆಳ !
ಅಳುವಿನ ರಂಪಿಗೆ ಕರುಳಲ್ಲಿ ತಿಗರಿ,
ಕನಸ ಮರಿಗಳ ಕಾಲು
ಗೂಟದರಮನೆಯಾಳು
ಗಡ್ಡ ಮೀಸೆ ರಪ್ಪೆಗೂದಲು
ಕತ್ತಲೆಯು ಚಿಗುರು
ಬೆಳೆದಷ್ಟೂ......... ಎಳಸು !

○ ○ ○

ಸುಟ್ಟು ತೂತಾದ ಹೊಟ್ಟೆಯಲಿ
ಸೋರದ ಹಸಿವು

ಕಣ್ಣು ತುಂಬಿದ ಕಣ್ಣ ನಿರೀಕ್ಷೆಯ
ನೆತ್ತರದ ಮಳೆಗೆ
ಹುದುಗುತ್ತಿದೆ ಪ್ರಾಣ.
ಎಲ್ಲಿದೆ ನೆನೆಯದ ಗೂಡು ?

○ ○ ○

ಮಿಂಚು ಬಾಲೆ ಮುಖಕ್ಕಿಗಿದು
ಮರೆಯಾಗಿ
ಮೈತುಂಬಿದ ಹಾಲ ಗಡಿಗೆಯು
ತುಳುಕಿ ತುಳುಕದೆ ಹೋಗಿ
ಗುಂಡಿಗೆಯೊಡೆವ ಮುನ್ನ
ಪಂಜಿನ ತೇರು !
ನಾಯ ಹಾಲಲಿ ಮೊಸರು
ಕಡೆಯುವ ತವಕ,
ನೀರ ನರಿಗೆಗೆ ಉರಿಯ
ಇಕ್ಕುವ ತವಕ
ಉಡಹಿಡಿದ ತುಡಿತದೆದೆಮೇಲೆದ್ದ
ಕನಸ ಓರಮಿಡ್ಡನು ಕಂಡು,
ನಕ್ಷತ್ರ, ಸೂರ್ಯ, ಚಂದ್ರರು
ಸೂಳೆಮಾಡಿದ ಒಡಲ ಪಯಣ.

○ ○ ○

ನೀರು ನಿಡಿ ಕಾಣದೆಡೆ
ಕಾಡುಕೋಣದ ಲಗ್ಗೆ
ಮೋಡ ಮಳೆ ಕರೆಯದೆಡೆ
ನವಿಲ ನಾಟ್ಯದ ಬುಗ್ಗೆ
ಇಲ್ಲೊಂದು ಗಳಿಗೆ ತಂಗೋಣವೆ ?
ಬೇಡ ಸಾವಿನ ಸೇನೆ
ಬರುವ ಹೊತ್ತಾಯಿತು !

○ ○ ○

ಇಲ್ಲೆ ; ಹುಲ್ಲೆಯ ಜಿಗಿತ
ಆಕಾಶದುದ್ದಕ್ಕೂ ಪಾತಾಳದಗಲಕ್ಕೂ

ಒಂದೆ ನೆಗೆತ,
ತೊಡೆಮುಟ್ಟಿ ನಡುಮುಟ್ಟಿ
ಇರುಳ ಕೆಸರಲಿ ಮೀನು
ಮುತ್ತಿಟ್ಟ ಕಡೆಯಲ್ಲೆ ಕೆಟ್ಟಗಾಯ !

o o o

ಒಳಗೆಲ್ಲ ಶವದ ಶೃಂಗಾರ
ದೀಪಾಲೆ ಕಂಬದ ತಳದಿ
ಹೆರುವ ನೆರಳು !
ಬೆಳಗಿನೂರಲಿ ಮಾರಿಜಾತ್ರೆಯ ಸುದ್ದಿ
ಇಲ್ಲೊಂದು ಗಳಿಗೆ ತಂಗೋಣವೆ ?
ಬೇಡ , ಸಾವಿನ ಸೇನೆ
ಬರುವ ಹೊತ್ತಾಯಿತು !

o o o

ಕಣ್ಣ ಹಣತೆಯ ಎಣ್ಣೆ ತೀರಿತು
ಬಿಟ್ಟ, ಕೈಬಿಟ್ಟವು
ಎದೆಯಲ್ಲಿ ಹಿಂಸೆ ನೀಲಗಿರಿ
ಕಡಿದಂತೆ ವಸಂತ !
ಹೂ ಕೊರಕಲಲಿ ಗೀಜಗ
ನೂರು ತತ್ತಿಯನಿಟ್ಟು
ನಿಟ್ಟುಸಿರ ಕಾವಲ್ಲೆ ಮರಿಯಾದವು !
ಎಲ್ಲ ಕೊಡವಿದ ಮೇಲು
ತೊಳೆಯಲಾಗದ ಹೊಲಸು
ಹೊಕ್ಕಳಲಿ ಜಡೆಹಕ್ಕಿ
ಕುಕ್ಕುತಿದೆ
ನೂರೆಂಟು ತೊಡೆಗೆ ತೊಡೆಬಿಗಿದೂ
ಪ್ರೀತಿ ಕೊಕ್ಕಲಿ ಉಕ್ಕಿ
ಇಲ್ಲೇ.... ಇದೆ !

o o o

ನೆಲ ಬಿಟ್ಟು ನೆಲ ಹುಡುಕೊ
ಆಟ ನೋಡುವ

ಪೋಲೀಸು ಬೂಟುಗಳು
ತಲೆಯ ತುಂಬ
ನಡೆ.... ನುಸುಳಿ, ನಡೆ.... ನುಸುಳಿ
ಒಳಗಣ್ಣ ಹಳ್ಳದಲಿ ಬೇಗ ಬೇಗ
ಏನಿಲ್ಲಿ ಗುಡುಗು ! ಏನಿಲ್ಲಿ ಸಿಡಿಲು !
ಏಸೊಂದು ಉಲ್ಕೆಗಳು ಸುತ್ತ–ಮುತ್ತ !
ಚಲಿಸಿತೋ ಆಕಾಶ ಅತ್ತಲಿತ್ತ !
ಎಂಥ ಮಳೆ ಬಂತು !
ಹನಿ ಹನಿಯ ಭ್ರೂಣದಲಿ
ಆರದಗ್ನಿಯ ಮರಳು
ಅತ್ತಿಂದಿತ್ತ....ಇತ್ತಿಂದತ್ತ
ಬಾಲವೆತ್ತಿದ ತೋಳದೋಟ
ಹರಾಜಗಿಟ್ಟ ಚಟ್ಟದಂಗಡಿಯಲ್ಲಿ
ಬಟ್ಟ ಬಯಲು !
ಎಲ್ಲ ಒಳಗುದಿಯಲ್ಲಿ
ಇಲ್ಲೊಂದು ಗಳಿಗೆ ತಂಗೋಣವೆ ?
ಬೇಡ ; ಸಾವಿನ ಸೇನೆ
ಬರುವ ಹೊತ್ತಾಯಿತು !

o o o

ಬಸಿರಿಗೆ ಬ್ಯಾಟರಿ ಬಿಟ್ಟು
ಜಲದ ಬಾಯನು ಹುಡುಕಿ
ಕೊಲ್ಲುವ ಬಂದೂಕುಧಾರಿಗಳ
ಉಸಿರ ಹೊಗೆ !
ಒಂದು ಮನೆಗಿನ್ನೊಂದು ಮನೆ
ಮಲ್ಲಯುದ್ಧ !

o o o

ಪಶು ಪಕ್ಷಿ ಕಡೆದವೆ
ಬುದ್ಧ-ಬಸವರ ಪ್ರತಿಮೆ....?
ಭಿತ್ತಿ ಬೆಳೆದವೆ
ಪಾಪ, ಪುಣ್ಯದ ಪಸುಮೆಯಲಿ
ದೇವರ ತೆನೆಯು ?

ಹಿಂಸೆ, ಅಹಿಂಸೆಗಳುಂಟೆ
ಯೇಸು, ಗಾಂಧಿಯರು ಕ್ಷಮಿಸುವಂತೆ ?
ಜಾತಿ ನದಿ ಹರಿಯುವುದೆ
ಎದೆ ಕೊಳೆತು ಅಲೆಯಾಗಿ ಒಡಿಯುವಂತೆ ?
ಅಲ್ಲೊಂದು ಗಳಿಗೆ ತಂಗೋಣವೆ ?
ಬೇಡ ; ಸಾವಿನ ಸೇನೆ
ಬರುವ ಹೊತ್ತಾಯಿತು !
ಬುದ್ಧನೂರಿಗೆ............

o o o

ಮಂಜು

ಹಳದಿ ಮಂಜು ಉಜ್ಜುತ್ತಿದೆ ತನ್ನ ಬೆನ್ನು
ಕಿಟಕಿ ಗಾಜುಗಳ ಮೇಲೆ
ಹಳದಿ ಮಂಜು ತಿಕ್ಕುತ್ತಿದೆ ತನ್ನ ಮುಸುಡಿಯ ಕಿಟಕಿ
ಗಾಜುಗಳ ಮೇಲೆ

ನೆಕ್ಕಿದೆ ನಾಲಿಗೆಯ ಸಂಜೆ ಮೂಲೆ, ಸಂದು ಗೊಂದುಗಳೊಳಗೆ
ಕಾಲ ಕೊಂದಿದೆ ಅಲ್ಲಲ್ಲಿ ಕೊಚ್ಚೆ ಗುಂಡಿಗಳ ಮೇಲೆ
ಒರಗಬಿಟ್ಟದೆ ತನ್ನ ಬೆನ್ನ, ಹೊಗೆ ಗೂಡುಗಳುಗಳಿದ
ಬೂದಿಯ ಮೇಲೆ

ಮಾಳಿಗೆಯಿಂದ ಜಾರಿ, ಇದ್ದಕ್ಕಿದ್ದಂತೆ ಜಿಗಿದಿದೆ
ಕಂಡಿದೆ, ಅದು ಮೃದು ಅಕ್ಟೋಬರ್‌ನ ರಾತ್ರಿ
ಒಮ್ಮೆ ಮುದುಡಿತ್ತು ಮನೆಯ ಸುತ್ತ
ಹಾಗೆ ಮಾಡಿತ್ತು ನಿದ್ದೆ

ಮೂಲ : **ಟಿ. ಎಸ್. ಎಲಿಯಟ್**
ಕನ್ನಡಕ್ಕೆ : **ಆನಂದ**

ಪ್ರಾರ್ಥನೆ

○ ○

ಸಿ. ವಿ. ಶೇಷಾದ್ರಿ

1

ಬಂಡೆಗಳು ಸುಂದರ ವಿಗ್ರಹದ
ಬದುಕಿಗೆ ಬಾಂಬು ಇಡಿಸಿಕೊಂಡವು
ಬಂತು ಬುನಾದಿ ;
ಬುನಾದಿಯೇ — ನಿನ್ನ ಬಂಡೆಯು ಬೆಟ್ಟದ
ಶಿಖರಕೂ
ಈ ಮಂದಿರದ
ಗೋಪುರಕೂ....
ಏನು ವ್ಯತ್ಯಾಸ ?

ಕಲ್ಲುಗಳು ಪೂಜಿಸಿಕೊಳ್ಳುವ
ಪ್ರತಿಭೆಯನ್ನು ಚೂರು ಚೂರು ಮಾಡಿಸಿಕೊಂಡವು
ಜಮಾಯಿಸಿತು ಜಲ್ಲಿ
ಜಲ್ಲಿಯೇ.... ನಿನ್ನ ಕಲ್ಲು ಏನು ಹೇಳುತ್ತದೆ
ಶಿಲ್ಪಿ ಮತ್ತು
ಒಡ್ಡರ ಉಳಿ ಬಗ್ಗೆ ?

ಅವೇ ಕಲ್ಲುಗಳು
ವಿಭೂತಿ ಬಳಿಸಿಕೊಳ್ಳುವ
ಭಾವನೆಯನ್ನು
ಬೂದಿ ಮಾಡಿಸಿಕೊಂಡವು
ಸಿದ್ಧವಾಯ್ತು ಸಿಮೆಂಟು.

ಓ....ಸಿಮೆಂಟೇ....
ಜಲ್ಲಿ ತುಂಬುತಿರುವ ಹುಡುಗನ
ಇಟ್ಟಿಗೆ ಹೊತ್ತಿರುವ ಹರೆಯದ ಹೆಣ್ಣಿನ
ಮಂಚಕ್ಕೆ ಬೆಂಕಿ ಬಿತ್ತೇನು ?
ಮರಳು ಜರಡಿ ಹಿಡಿದಿರುವ ಮುದುಕಿಯ
ಹಸಿಟ್ಟು ಎಲ್ಲಿ ಚೆಲ್ಲಿತು ?

2

ತನ್ನ ನೀರ ನಂಬಿಕೆಯ
ದೋಣಿ ಧೈರ್ಯ
ಬಿಂಬ ಜಂಭ,

ತನ್ನ ಪದರ ಪವಾಡದ
ಮುತ್ತು ರತ್ನ
ಎಲ್ಲ ಮರೆತು
ಮಣ್ಣು ಸುಡಿಸಿಕೊಂಡಿತು,
ಇಟ್ಟಿಗೆಯಾಯಿತು.

ಓ....ಇಟ್ಟಿಗೆಯೇ....
ಕಾಣದೂರಿನ
ಕುಲವಿಲ್ಲದ ಕುಂಬಾರನ
ಮನೆಯಿಲ್ಲದ ಮಡಕೆ ಹೊತ್ತು
ಡಾಬು ಕಳೆದುಕೊಂಡ ಸೊಂಟಗಳು
ಸಿಂಬೆ ಕಳೆದುಕೊಂಡ ತಲೆಗಳು
ಹತ್ತುತ್ತಿರುವ
ತುಂಬಿ ಹರಿಯಬೇಕಾಗಿದ್ದ
ನದಿಯ ದಂಡೆಯ ಮೆಟ್ಟಿಲುಗಳ
ಒಂದೊಂದಾಗಿ ಕಿತ್ತೆಸೆದ ನೆನಪು
ನಿನಗಿಲ್ಲವೇ ?

3

ಆ....ಅಭಿಷೇಕ ಬೇರೆ ಏನೂ ಅಲ್ಲ
ಕರು ಕಳೆದುಕೊಂಡ ಹಸುವಿನ ಹಾಲು,
ಅದರೊಳಗೆ ಇದೆ
ಕೊಳಲು ಕಳೆದುಕೊಂಡ
ದನ ಕಾಯುವವನ ಕಣ್ಣೀರು,
ಹಸಿರು ಕಳೆದುಕೊಂಡ
ಬಯಲ ಬೆವರು.

ಹಸುವೇ....
ಏನು ನಿನ್ನ ಕೊಂಬಿನ ಸಮಾಚಾರ ?
ಹುಲಿಯನ್ನು ಓಡಿಸಲಾಗಲಿಲ್ಲವೇ ದೂರ ?
ಅದಕ್ಕಾಗಿ ಬಂದು ಸೇರಿದೆಯಾ ಊರ ?
ದನ ಕಾಯುವವನೇ....
ನಿನ್ನ ಕೊಳಲ ರಂದ್ರಗಳಲ್ಲಿ
ಬೆರಳು ತೆಗೆದು ಮುಚ್ಚಿದ
ಪುಸ್ತಕಗಳ ಹೆಸರೇನು ?

4

ಹೂಗಳೆಂಬ ಹೆಣಗಳೇ
ಕೊರಳಿನ ಹಾರ
ಚಪ್ಪರದ ಕನಸು ಕಂಡಿದ್ದ
ಗರಿಗಳು
ಹೆಣಗಳನು ಹೊತ್ತಿವೆ.
ಹೆಣಗಳ ಭೃಂಗದಂಗ
ಎಲ್ಲೋ ಕತ್ತರಿಸಿ ಹೋಗಿದೆ.
ಹೋಳು ಹೋಳಾಗಿರುವ
ಹಣ್ಣುಗಳೇ....
ಮರದ ಮುಕ್ತಿ ಎಂದರೇನು ?

5

ನಿನ್ನ ಚಿತ್ರವಾಗಲು
ಕಾಗದವಾಗಬೇಕಾಗಿದ್ದ ಹತ್ತಿ
ಉರಿಯುತಿದೆ ಬೆಂಕಿ ಹತ್ತಿ
ಮೂರು ಕಣ್ಣಿನ ತೆಂಗು
ಏನೂ ನೋಡಲಾಗದೆ
ತಲೆ ಒಡೆದು ಬಿದ್ದಿದೆ.
ನಾನೂ ಹಾಗೇ ಕಣ್ಮುಚ್ಚಿದ್ದೇನೆ
ನಿಧಾನವಾಗಿ ಭಕ್ತಿಗೀತೆ ಕೇಳುತಿದೆ
ಎಲ್ಲಿ....ಹೇಗೆ ಸತ್ತ
ಇದನ್ನು ಬರೆದ ಆ ಬಡ ಕವಿ ?

ತೆರಳುವಾಗೊಮ್ಮೆ ಹಿಂತಿರುಗಿ

○ ○

ಡಾ॥ ಶಶಿಕಲಾ ಸಿ. ಕೆ.

ಅಪ್ಪಾ,
ನೀನೀಗ ಕಳಿಸುತ್ತಿದ್ದರೂ ನನ್ನ ;
ನಿನ್ನೆಲ್ಲ ಸಿಟ್ಟು-ಸೆಡವು
ಆಸೆ-ಹಿಗ್ಗು ತುಂಬಿಕೊಂಡ
ನನ್ನ ಮೈಯಾಗಿನ ನಿನ್ನದೇ ರಕ್ತ,
ಕಿಲಿಕಿಲಿ ನಗುವುದು ನೋಡಿದೆಯಾ ?

ಅವ್ವಾ,
ನಿನ್ನೊಂದು ಹೊಕ್ಕುಳದ ಹೂವ,
ನೀ ಕಿತ್ತಿಟ್ಟ ರಭಸಕ್ಕೆ ;
ನಿನ್ನೆಲ್ಲ ಹರಕೆ, ಅಳಲುಗಳ ಭಾರಕ್ಕೆ ಮುಕ್ಕುರಿದು,
ಎದೆಯಾಗಿನ ರಕ್ತ ಮತ್ತೂ ಕೆಂಪಾಗಿ
ಅಳುವುದು ಕಂಡೆಯಾ ?
ನೀವೀಗ ದಬ್ಬುತ್ತಿದ್ದರೂ ನನ್ನ :
ಅಪ್ಪ ಅವ್ವನ ಕಣ್ಣೊಳಗೆ
ಸಂಭ್ರಮದ ತೇರಲ್ಲಿ ನೋವಿನ ಮೂರ್ತಿ
ಬಿಕ್ಕುವುದ ಗುರುತಿಸದಷ್ಟು
ಮುಗ್ಧೆಯಲ್ಲ ನಿಮ್ಮ ಮಗಳು !

ನಾನೀಗ ಯಾವ ಮನೆಯಂಗಳದ ಹೂವೋ ?
ಯಾರ ಕಣ್ಣಳತೆಗೆ ಬೇವೋ ?
ಯಾರೊಲವಿನ ಮಂದಾರವೋ ?
ಯಾವ ಗುಡಿಗೆ ಕಲಶವೊ ?
ಹೂವೋ ? ಬೇವೋ ?
ಕೋಗಿಲೆಯೊ ? ಕಾಗೆಯೊ ?
ಹೆಬ್ಬಾಗಿಲೋ ? ಹಿಂಬಾಗಿಲೋ ?

ನಿಮ್ಮೀ ಗಾಜಿನ ಗೊಂಬೆಗೇನು ತಿಳಿದೀತು ?
ಬಕುಳದ ಹೂವಂಥ ನಿಮ್ಮ ಪ್ರೀತಿಯ

ಕೋಟೆಯುಷ್ಟೆ ಅವಳ ಸುತ್ತಲೂ ಅಬೇಧ್ಯ !
ನಂಜು ನೋವಿನ ಕಡಲಲ್ಲಿ
ಎಷ್ಟೇ ಮುಳುಗಿದ್ದರೂ,
ನಿಮ್ಮ ಪ್ರೀತಿಯ ಮಡಿಲಲ್ಲಿ
ಯಾವತ್ತಿಗೂ 'ಫೀನಿಕ್ಸ್' ಹಕ್ಕಿ ನಾನು !
ತೆರಳುವಾಗೊಮ್ಮೆ ಹಿಂತಿರುಗಿ ಇಕೋ,
ನಿಮ್ಮೆಡೆಗೆ ಮುಖ ಮಾಡಿದ್ದೇನೆ :
'ಹಾಲುಂಡ ತವರೀಗಿ ಏನೆಂದು ಹಾಡಲಿ ?'
ಎಷ್ಟಂತ ಹರಸಲಿ ? ಏನಂತ ಹಾರೈಸಲಿ ?
"ನನ್ನವ್ವನಂಥ ಅವ್ವ, ನನ್ನಪ್ಪನಂಥ ಅಪ್ಪ,
ಹೊನ್ನ ತೇರಂಥ ತವರು, ಯಾವ ಮಗಳಿಗೂ
ಇನ್ನು ಕನಸಾಗದಿರಲಿ !"

ಭಿನ್ನ ದೇಹದಲಿ ಏಕಜೀವ ಕಾಣುವರು ಕರಗಿ ಮಾಗಿ
ಯಾರೊ ಮೋಹದಲಿ, ಯಾರೊ ಊಹೆಯಲಿ, ಯಾರೊ ಯೋಗಿಯಾಗಿ ॥
ಸವಿಯ ನುಣ್ಣುವರು ಬಾಳನೆಲೆಯ ಬಗೆಬಗೆಯ ಜಾವದಲ್ಲಿ
ಕಾಮಿ ನೋವಿನಲಿ, ಕವಿಯು ಭಾವದಲಿ ಭಕ್ತ ಜೀವದಲ್ಲಿ ॥

—ದ. ರಾ. ಬೇಂದ್ರೆ
(ಕನ್ನಡ ಮೇಘದೂತ)

ಕೊನೆಗೆ ಗೆದ್ದದ್ದು....

ಂ ಂ

ಗೀತಾ ಡಿ. ಸಿ.

ದೂರದ ದ್ವಾರಕೆಯತ್ತಲೇ ಮುಖ
ಮಾಡಿ ಮುರಳಿ ನಾದಕೆ ಕಿವಿ
ಯಾನಿಸುತ್ತ ಕುಳಿತ ರಾಧೆ
ಒದ್ದೆಯೆದೆಯಲ್ಲಿ
ಪ್ರೀತಿ ಮೊಳಕೆ.
ಸದಾ ಆಕಾಶದಾಚೆಗಿನ
ಕಣ್ಣ ಕಾತುರತೆ.

ಸಾಮಾನ್ಯ ಕನ್ಯೆ
ಪಾಪ, ಬರದವನ
ನಿತ್ಯ ನಿರೀಕ್ಷೆಯಲ್ಲೆ
ಸದಾ ನಿಟ್ಟುಸಿರು
ಬಿಡುವುದ ಹೊರತು
ಮತ್ತೇನಿತ್ತು ಅವಳಿಗೆ ?

* * *

ಹೆಣ್ತನದ ಕನಸುಗಳಿಲ್ಲ
ಗುರಿಮುಟ್ಟದ ಬಯಕೆ ಬಾಣ
ಪ್ರೀತಿ ಕನ್ನಡಿ ಬಿದ್ದು ಚೂರು ಚೂರು.
ನೇಯ್ದ ಕನಸು ಕನಸಾಗೇ
ಉಳಿದ ಬಿಕ್ಕು.

ಹತಾಶೆಯಲಿ ನೊಂದು
ಶಿಖಂಡಿಯಾಗಿ ಬದುಕಿದ
ಅಂಬೆಗೆ ಬಿಚ್ಚಲಾಗದೇ ಹೋಯಿತು
ಹಳಹಳಿಕೆಯ ಗಂಟು !

* * *

ಕವಿದ ಮೌನ - ಕುದಿತು
ಸಿಟ್ಟು - ಸೆಡವು
ಬರೀ ನಿಟ್ಟುಸಿರುಗಳೇ........

* * *

ಸಾಮ್ರಾಜ್ಞಿಯ ಸುಖ ವಾಕರಿಕೆ
ಬರಿಸಿ, ನಿಜ ಪ್ರೀತಿಯ ಅರಸಿ
ಹೊರಟವಳು ಸುಖಿಸಿದ್ದು
ಬದಗನ ಇಂಪುದನಿ.
ಬಿನದಕೆ ಹಾಡಿದ ಹಾಡು
ಎದೆಯೊಳಗಿನ ಪಾಡಾಗಿ
ದಡಬಡಗೊಳಿಸಿ
ನಿದ್ದೆಯಲ್ಲೂ ಒದ್ದೆಯಾದವಳಿಗೆ
ಮೊದಮೊದಲು ಸಿಕ್ಕಿದ್ದು
ಉಪ್ಪುನೀರು, ತೀರದ ದಾಹ
ನಿಜ. ಆಮೇಲೆ
ಕನಸಿನಲ್ಲೆಣಸಿದ್ದಂತೆ ಕೇರೆಯಂತೆ
ಹೊರಳುವ ಸುಖ
ಅರಮನೆಯ ಸುಪ್ಪತ್ತಿಗೆಗೆ–
ಲ್ಲಿಂದ ಬರಬೇಕೆಂದು
ಹಂಗಿಸಿದ್ದು ಸುಳ್ಳೆ ?

* * *

ಏನೇ ಆದರೂ
ವಿರಹ – ಬಿಕ್ಕಳಿಕೆಗಿಂತ
ಗೆದ್ದ ಓರೆಗಣ್ಣಿನ
ಸೊಟ್ಟ ನಗುವೇ........

ಸ್ವಾತಂತ್ರ್ಯಕ್ಕೆ ಐವತ್ತು ವರ್ಷ

ರಾಷ್ಟ್ರನಿಷ್ಠೆ

○ ○

ವ್ಯಾಸರಾಯ ಬಲ್ಲಾಳ

ರಾಜ್ಯದ ಆಡಳಿತೆಯನ್ನು ದಕ್ಷತೆಯಿಂದ ನಡೆಸಬೇಕಾಗಿರುವ ಹಲವಾರು ಐಎಎಸ್ ಅಧಿಕಾರಿಗಳ ಮನೆಗೆ ಆದಾಯ ತೆರಿಗೆಯ ಅಧಿಕಾರಿಗಳ ಧಾಳಿ ; ವರಮಾನಕ್ಕನುಗುಣವಿರದ ಕೋಟಿಗಟ್ಟಲೆ ಹಣ ಸಂಪಾದಿಸಿದ ದಾಖಲೆ ; ಈ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿಡಲು ರಾಜ್ಯಪಾಲರ ನಿರ್ಧಾರ. ಭೋಫರ್ಸ್, ಸೈಂಟ್ ಕಿಟ್ಸ್, ಹವಾಲಾ, ಮೇವು, ಆಯುರ್ವೇದ, ಯೂರಿಯಾ, ಎಲ್ಲಾ ಹಗರಣಗಳೇ. ಇವುಗಳ ಮೂಲಕ ಪ್ರತಿಷ್ಠಿತರೆನಿಸಿಕೊಳ್ಳುವ ಯಾರು ಯಾರೋ ಕೊಳ್ಳೆ ಹೊಡೆದ ಹಣದ ಲೆಕ್ಕವೆಲ್ಲ ಕೋಟಿಗಳಲ್ಲಿ. ಇಂದಿರಾ ಗಾಂಧಿಯವರ ಗರೀಬೀ ಹಟಾವೋ' ಮಂತ್ರವನ್ನು ಅಕ್ಷರಶಃ ಪಾಲಿಸಿಕೊಂಡವರು ಆ ಮಂತ್ರವನ್ನು ಉಚ್ಚರಿಸುತ್ತ ಬಂದವರೇ ಎಂದು ಸಾಬೀತುಗೊಳಿಸುವ 'ಅಮೀರ' ವರ್ಗ ಕೋರ್ಟುಗಳ ಬಾಗಿಲು ಕಾಯುವ ಪರಿಸ್ಥಿತಿ ನಮ್ಮ ಸ್ವಾತಂತ್ರ್ಯದ ಐವತ್ತು ವರ್ಷಗಳ ಇತಿಹಾಸಕ್ಕೆ ಹಿಡಿದಿರುವ ಕನ್ನಡಿ. ಸ್ವಿಜರ್‌ಲೇಂಡಿನಲ್ಲಿ ಕೆಲವು ವರ್ಷಗಳ ಹಿಂದೆ ಒಂದು ಪ್ರವಾಸೀ ತಂಡದ ಜತೆಗೆ ಪ್ರಯಾಣಿಸುತ್ತಿದ್ದಾಗ, ಒಂದು ಹೋಟೆಲಿನಲ್ಲಿ ಮೊದಲೇ ಕಾದಿರಿಸಿದ್ದ ಕೋಣೆಗಳನ್ನು ನಮ್ಮ ತಂಡಕ್ಕೆ ಕೊಡಲು ಹೋಟೆಲಿನ ವ್ಯವಸ್ಥಾಪಕರು ಅನುಮಾನಿಸಿದ್ದು, ಎರಡು ದಿನಗಳ ಹಿಂದೆ ಅದೇ ಹೋಟೆಲಿನಲ್ಲಿದ್ದ ಒಂದು ಭಾರತೀಯ ತಂಡದ ಅಸಭ್ಯ ವರ್ತನೆಯಿಂದಾಗಿ. ಅವರ ಆಕ್ಷೇಪ : ಭಾರತೀಯರು ದನಿಯೇರಿಸಿ ಮಾತನಾಡುತ್ತಾರೆ, ಎಲ್ಲೆಂದರಲ್ಲಿ ನೀರು ಚೆಲ್ಲುತ್ತಾರೆ ; ಸಭ್ಯ ನಡವಳಿಕೆ ತಿಳಿಯದಂತೆಯೇ ವರ್ತಿಸುತ್ತಾರೆ ಎಂಬುದಾಗಿತ್ತು. ಒಂದು ತಂಡದ ಆಕ್ಷೇಪಾರ್ಹ ನಡತೆಯಿಂದಾಗಿ ಒಂದು ಜನಾಂಗವನ್ನೇ ಅವಮಾನಿಸುವುದು ಶಿಷ್ಟ ಸಂಸ್ಕೃತಿಯಲ್ಲ ಎಂದು ನಾನೆಂದಿದ್ದೆ. ನಮ್ಮ ತಂಡಕ್ಕೆ ಮತ್ತೆ ಜಾಗ ದೊರಕಿದರೂ, ನನ್ನನ್ನು ಕಾಡುವ ಪ್ರಶ್ನೆ ಭಾರತೀಯರ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳನ್ನು, ರಾಷ್ಟ್ರೀಯವೆನಿಸಬೇಕಾದ ಅಸ್ಮಿತೆಯನ್ನು ಯಾವ ಯಾವ ಮಾನದಂಡಗಳಿಂದ ಅಳೆಯಬೇಕು ಎಂಬುದೇ. ದೇಶದ ಹೊರಗೆ ಹೋಗಬೇಕಾದಾಗ ಪಡೆಯುವ ಪಾಸ್‌ಪೋರ್ಟಿನ ಹೊರತಾಗಿ ನಮಗೆ ಪ್ರಾಮಾಣಿಕವೆನಿಸುವ ಈ ಉಪಖಂಡದ ಸಂಸ್ಕೃತಿಯನ್ನು ಸೂಚಿಸುವ ಯಾವ ಅಸ್ಮಿತೆಯೂ ಇಲ್ಲವೇ. ರಾಷ್ಟ್ರೀಯವೆನಿಸುವ ಸಾಂಸ್ಕೃತಿಕ ಪರಿಕಲ್ಪನೆಗಳೆಲ್ಲ ಪೊಳ್ಳು ಎನ್ನುವ ಬುದ್ಧಿಜೀವಿ ಹಣೆಪಟ್ಟಿ ಕಟ್ಟಿಕೊಂಡ

ವರೂ ನಮ್ಮಲ್ಲಿ ಸಾಕಷ್ಟು ಜನ ಇದ್ದಾರೆ. 'ಸಂಸ್ಕೃತಿ' ಪದಕ್ಕೆ ತಮ್ಮ ತಿಳಿವಳಿಕೆಯ ಮಿತಿಯಲ್ಲೇ ಅರ್ಥ ಹೊರಡಿಸಿ ವೈವಿಧ್ಯತೆ, ಬಹುಮುಖೀ ಸಂಸ್ಕೃತಿಗಳೇ ಭಾರತೀಯ ಅಸ್ಮಿತೆಯನ್ನು ಅರ್ಥಪೂರ್ಣವಾಗಿವೆ ಎನ್ನುವವರೂ ಇದ್ದಾರೆ. ಇವೆಲ್ಲ ಒಂದಕ್ಕೊಂದು ಪೂರಕವಾಗಿ ನಮ್ಮ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳನ್ನು ಬಲಪಡಿಸಬೇಕೇ, ಸಮನ್ವಯವೇ ನಮ್ಮ ಜೀವನದ ತಿರುಳಾಗಿ, ರಾಷ್ಟ್ರೀಯ ಅನನ್ಯತೆಯನ್ನು ಪ್ರತಿಬಿಂಬಿಸಬೇಕೇ ಎಂದು ಅವರು ಹೆಚ್ಚು ಯೋಚಿಸುವುದಿಲ್ಲ. ಭಾರತೀಯ ನಾಗರಿಕತ್ವದ ತಳಹದಿ ಯಾವುದಿರಬೇಕೆಂದೂ ಅವರು ಯೋಚಿಸುವುದಿಲ್ಲ. ನಾವು ಐವತ್ತು ವರ್ಷಗಳ ಹಿಂದೆ, ಆಗಸ್ಟ್ 14, 1947ರ ಮಧ್ಯರಾತ್ರಿಗೆ ಕೇಳಿದ, ಪಂಡಿತ್ ನೆಹರೂ ಅವರು ಮಾಡಿ, ಸಮಗ್ರ ಭಾರತವನ್ನು ಪುಳಕಿತಗೊಳಿಸಿದ 'ನಾವು ಈ ಮಧ್ಯರಾತ್ರಿಗೆ ಭವಿಷ್ಯತ್ತಿನೊಂದಿಗೆ ಸಂಪರ್ಕ ಸಾಧಿಸಲಿದ್ದೇವೆ' ಎಂಬ ಭಾಷಣ, ಈಗ ಇತಿಹಾಸದ, ಪ್ರಾಯಶಃ ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಮರೆತು ಬಿಡಬೇಕಾದ ಸನ್ನಿವೇಶ. ಈ ಐವತ್ತು ವರ್ಷಗಳಲ್ಲಿ ನಾವು ಭವಿಷ್ಯತ್ತನ್ನು ಭೇಟಿಯಾಗಿರುವುದು ಭಾರತದ ರಾಷ್ಟ್ರೀಯವೆನಿಸಬೇಕಾದ ನಾಗರಿಕ ಪ್ರಜ್ಞೆಯಿಂದಲ್ಲ. ವರ್ತಮಾನಕ್ಕಷ್ಟೇ ಅಂಟಿಕೊಂಡ ನಮ್ಮ ಸ್ವಾರ್ಥದ ಪರಿಧಿಯಲ್ಲಿ ಈ ಸ್ವಾತಂತ್ರ್ಯದ ಹೆಸರಿನಲ್ಲಿ ಏನೇನನ್ನು ದಕ್ಕಿಸಿಕೊಂಡರೆ ನಮ್ಮ ಹಾಗೂ ನಮ್ಮವರೆನಿಸಿಕೊಳ್ಳುವವರ ಭವಿಷ್ಯ ಹೇಗೆ ಸುಧಾರಿಸಬಹುದು ಎಂಬ ಏಕೈಕ ಚಿಂತನೆಯಿಂದ.

ಈಗ ಕೆಲವು ವರ್ಷಗಳ ಹಿಂದೆ ಮುಂಬಯಿಯ ದಾದರ್ ವಿಭಾಗದ ಒಂದು ಕಾಲ್ದಾರಿಯಲ್ಲಿ ತರಕಾರಿ ಮಾರುತ್ತಿದ್ದ ಒಬ್ಬ ಮುದುಕನೊಡನೆ ಒಂದು ರೂಪಾಯಿಯ ಸೊಪ್ಪಿನ ಪುಡಿಕಟ್ಟುಗಳನ್ನು ಖರೀದಿಸಿದ್ದೆ. ಆತ ಕಟ್ಟುಗಳನ್ನು ಎಣಿಸುತ್ತಿದ್ದಾಗ 'ನಿನ್ನ ಕಟ್ಟುಗಳ ಲೆಕ್ಕ ಸರಿಯಾಗಿದೆಯೇ ?' ಎಂದು ತುಸು ಅಧಿಕ ಪ್ರಸಂಗದ್ದೆನಿಸಬಹುದಾದ ಪ್ರಶ್ನೆ ಕೇಳಿದ್ದೆ. ಆಗ ಬಂದ ಉತ್ತರವನ್ನು ನಾನು ಈ ಲೇಖನ ಬರೆಯುವಾಗ ನೆನಪಿಸಿಕೊಳ್ಳುತ್ತಿದ್ದೇನೆ. 'ಸಾಬ್ ಹಮ್ ಮಹಾರಾಷ್ಟ್ರಕಾ ಆದ್ಮಿ ಸಾಬ್' 'ನಾನು ಮಹಾರಾಷ್ಟ್ರೀಯ, ಅಂತಹ ಲಾಭಕ್ಕಾಗಿ ವಂಚನೆ ಮಾಡುವವನಲ್ಲ' ಎಂದಿದ್ದ. ಐವತ್ತು ವರ್ಷ ಕಾಲ ಮುಂಬಯಿಯಲ್ಲಿ ಕಳೆದಿದ್ದ ನಾನು ಅವನ ಮಾತಿನಲ್ಲೂ ಸತ್ಯವಿದೆಯೆಂದು ತಿಳಿದಿದ್ದೆ. ಬಹುರಾಷ್ಟ್ರೀಯ ಕಂಪನಿಗಳಿಂದ ಹಿಡಿದು ಪುಟ್ಟ ಚಿಲ್ಲರೆ ತರಕಾರಿ ಮಾರುವವರೂ ವ್ಯಾಪಾರವನ್ನು ಕೈಗೊಳ್ಳುವುದು ಲಾಭೈಕ ದೃಷ್ಟಿಯಿಂದ. ಅದು ಸಾರ್ವಜನಿಕ ಸೇವೆಯಿಂದಲ್ಲ. ಬೇರೆ ಬೇರೆ ಪ್ರಮಾಣದಲ್ಲಿ ವಂಚನೆಯೂ ವ್ಯಾಪಾರ ನೀತಿಯಾಗುವುದಿದೆ. ಇದು ವಿಶ್ವವ್ಯಾಪಿ ವ್ಯಾಪಾರ ನೀತಿಗನುಗುಣವಾಗಿದೆಯಾದ ಕಾರಣ ಒಂದು ವರ್ಗದ ವ್ಯವಹಾರ ನೀತಿಯನ್ನಷ್ಟೇ ಸೂಚಿಸಬಹುದು. 'ನಾನು ಮಹಾರಾಷ್ಟ್ರೀಯ—ನನ್ನ ವ್ಯಾಪಾರ ನೀತಿಯಲ್ಲಿ ವಂಚನೆಗೆ ಸ್ಥಾನವಿಲ್ಲ' ಎಂದ ಒಬ್ಬ ಬಡಪಾಯಿ ತರಕಾರಿ ಮಾರುವವನ ಮಾತು ಸಂಸ್ಕೃತಿ ಸೂಚಕವಾಗಿರುವುದರಿಂದ ಅದು ರಾಷ್ಟ್ರೀಯ ಅನನ್ಯತೆಗೆ ಮಾರಕವಾಗು

ವಂಥದು. ಮುಂಬಯಿಯ ವ್ಯಾಪಾರಿ ವರ್ಗದಲ್ಲಿ ಮಹಾರಾಷ್ಟ್ರೀಯರ ಪಾಲು ಶೋಚನೀಯವೆನಿಸುವಷ್ಟು ಕಡಿಮೆ ಎನ್ನುವುದೂ ಸತ್ಯ. ತುಸು ಸ್ಪಷ್ಟವಾಗಿ ಹೇಳುವುದಾದರೆ ವ್ಯಾಪಾರ ನೀತಿಯಲ್ಲಿ ಪ್ರಾಮಾಣಿಕತೆಗೆ ಬೆಲೆ ಕಡಿಮೆ. ಈ ನೀತಿಯಲ್ಲಿ ಸ್ವಾರ್ಥಕ್ಕಷ್ಟೇ ಪ್ರಾಧಾನ್ಯ. ಹೀಗಿರುವುದರಿಂದ 'ನಾನು ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳೆದವನು' ಎಂದ ಬಡಪಾಯಿ ಚಿಲ್ಲರೆ ವ್ಯಾಪಾರಿ ಹಾಗೆ ಹೇಳಿದಾಗ ನೆನೆಸಿಕೊಂಡ ತನ್ನ ಪ್ರಾಮಾಣಿಕತೆಗೂ ರಾಜ್ಯಕ್ಕೂ ಇರುವ ಸಂಬಂಧವನ್ನು, ನಾವು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದ ಮೇಲೂ ಭಾರತೀಯ ಪರಿಸರದ ಹಿನ್ನೆಲೆಯಲ್ಲಿ ನೆನೆಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆನ್ನುವ ನೋವೇ ನಮ್ಮ ರಾಷ್ಟ್ರೀಯ ಅನನ್ಯತೆಯ ಗುಣಗಳನ್ನು ಐವತ್ತು ವರ್ಷಗಳಾದ ಮೇಲೂ ಶೋಧಿಸುವುದು ಕಷ್ಟದ ಕೆಲಸವೆಂಬ ಚಿಂತನೆಗೆ ಎಡೆ ಮಾಡಿಕೊಟ್ಟಿದೆ.

ದಕ್ಷಿಣ ಕೊರಿಯಾ ಎರಡನೆಯ ಮಹಾಯುದ್ಧದ ಹಾಗೂ, ಐವತ್ತರ ದಶಕದ ಕೊರಿಯಾ ಅಂತರ್ಯುದ್ಧದ ನಂತರ ಕ್ಷಿಪ್ರಗತಿಯಲ್ಲಿ ಅಭಿವೃದ್ಧಿ ಹೊಂದಿದ ಒಂದು ರಾಷ್ಟ್ರ. ಸದ್ಯ ದಕ್ಷಿಣ ಕೊರಿಯಾ ವಾಣಿಜ್ಯ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ನಮ್ಮನ್ನು ನಾಚಿಸಬೇಕಾದಂಥದು. 1997ರ ಆದಿಯಲ್ಲಿ ಅಲ್ಲಿ ನಡೆದ ಕಾರ್ಮಿಕರ ಮುಷ್ಕರವೂ ಕಾರ್ಮಿಕರ ಐಕ್ಯದ ಒಂದು ಅಭೂತಪೂರ್ವ ಘಟನೆ. ಜಾಗತಿಕ ವಾಣಿಜ್ಯ ಕ್ಷೇತ್ರಗಳಲ್ಲಿ ಆಗಿರುವ, ಆಗುತ್ತಿರುವ ಬದಲಾವಣೆಗಳಿಂದಾಗಿ, ಅಲ್ಲಿನ ಸರಕಾರ ತನ್ನ ವರಮಾನದ ದೃಷ್ಟಿಯಿಂದ ರಫ್ತು ಮಾಡುವ ಸರಕುಗಳು ಇದಿರಿಸಬೇಕಾಗಿ ಬರುತ್ತಿರುವ ಬಹುರಾಷ್ಟ್ರೀಯ ಕಂಪನಿಗಳ ಸ್ಪರ್ಧೆಯ ದೃಷ್ಟಿಯಿಂದ, ಕಾರ್ಮಿಕರ ಹಿತಗಳಿಗೆ ಸಂಬಂಧಿಸಿದ ಕಾಯಿದೆಗಳಲ್ಲಿ ಬದಲಾವಣೆ ತರಲು ನಿರ್ಧರಿಸಿ ಕಾಯಿದೆ ರೂಪಿಸಿದಾಗ ಕಾರ್ಮಿಕರು ಎಚ್ಚೆತ್ತು ತಮ್ಮ ಕೆಲಸದ ಭದ್ರತೆಯ ಪ್ರಶ್ನೆಯನ್ನು ಸರಕಾರ ಕಡೆಗಣಿಸಿದೆಯೆಂದು ಮುಷ್ಕರ ಹೂಡಲು ನಿರ್ಧರಿಸಿದರು. ಈ ಮುಷ್ಕರ ಮುಂದುವರಿಯುತ್ತಿದ್ದಂತೆ ಜನವರಿ ತಿಂಗಳ ಕೊನೆಗೆ ಟಿ.ವಿ. ಬಿತ್ತರಿಸಿದ ಸುದ್ದಿಯಂತೆ ದೇಶದ ಸಂದಿಗ್ಧ ವರಮಾನ ಪರಿಸ್ಥಿತಿಯನ್ನು ಗಮನಿಸಿ ಮುಷ್ಕರವನ್ನು ಸನ್ಯಕ್ಕೆ ನಿಲ್ಲಿಸಲಾಗಿತ್ತು. 'ನನ್ನ ಹಕ್ಕುಗಳಿಗಾಗಿ ಹೊಡೆದಾಡುವ ನಾನು ನನ್ನ ದೇಶ ಬದುಕಿ ಉಳಿದರೆ ಮಾತ್ರ ನಾನೂ ಉಳಿದೇನು' ಎಂಬ ಕೊರಿಯಾದ ಸೋಲ್ ನಗರದ ಕಾರ್ಮಿಕರ ನಿಲುವಿನಲ್ಲಿ ನಾನು ರಾಷ್ಟ್ರೀಯ ಅಸ್ಮಿತೆಯನ್ನು ಕಾಣುತ್ತೇನೆ. ವ್ಯಷ್ಟಿ ಸಮಷ್ಟಿಗಳ ಸಂಬಂಧ ಯಾವ ರೀತಿಯದಿರಬೇಕು ಎಂಬ ನಾಗರಿಕ ಪ್ರಜ್ಞೆಯನ್ನೂ ಕಾಣುತ್ತೇನೆ. ರಾಷ್ಟ್ರೀಯ ಅಸ್ಮಿತೆಗೆ ದೇಶದ ಎಲ್ಲ ರಾಜ್ಯಗಳ ಎಲ್ಲ ಭಾಗಗಳ ಕಾರ್ಮಿಕರ ಐಕ್ಯವೂ ಒಂದು ಉದಾಹರಣೆ. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಎಲ್ಲ ಕಾರ್ಮಿಕ ವರ್ಗ ಹಾಗೂ ಕಾರ್ಮಿಕ ಸಂಘಟನೆಗಳು ನೆನಪಿಡಬೇಕಾದದ್ದು ಕಾರ್ಮಿಕರ ಹಿತರಕ್ಷಣೆಗೆ ಸಂಬಂಧಿಸಿದ ಕಾಯಿದೆಗಳೆಲ್ಲ ರೂಪುಗೊಳ್ಳಲು ಸಾಧ್ಯವಾಗಿರುವುದು ನಮ್ಮ ಸ್ವಾತಂತ್ರ್ಯದಿಂದ ಎಂಬುದನ್ನು. ಹೀಗಿರುವುದರಿಂದ

ನಾಡಿನ ಸ್ವಾತಂತ್ರ್ಯ ನಮ್ಮ ಹಿತರಕ್ಷಣೆಯ ಒಂದು ಸಾಧನವೆಂಬ ಸತ್ಯವನ್ನು ನೆನಪಿಸಿಕೊಂಡಾಗ ರಾಷ್ಟ್ರೀಯ ಅಸ್ಮಿತೆಯ ಪ್ರಜ್ಞೆಯ ಮಹತ್ವದ ಅರಿವಾದೀತು. 'ನನ್ನ ದೇಶ ನನಗಾಗಿ ಏನು ಮಾಡಿದೆ ಎನ್ನುವುದಕ್ಕಿಂತಲೂ ನಾನು ನನ್ನ ದೇಶಕ್ಕಾಗಿ ಏನನ್ನು ಮಾಡುತ್ತಿದ್ದೇನೆ ಎನ್ನುವುದು ಮುಖ್ಯ' ಎಂದು ಸಾರಿರುವ ಹಿರಿಯ ಮುತ್ಸದ್ದಿಗಳ ಮಾತು ನಮಗೆ ನೆನಪಿಗೆ ಬರುವುದೇ ಇಲ್ಲ. ಇಂದು ದೇಶದ ಎಲ್ಲ ಕಡೆಗಳಲ್ಲಿ ಖಾಸಗೀಕರಣದ ಮಾತುಗಳು ಕೇಳಿ ಬರುತ್ತಿರುವುದೇಕೆ ಎಂದು ನಾವು ಆಳವಾಗಿ ಯೋಚಿಸಿದಾಗ ಕಂಡುಬರುವ ಸತ್ಯ ಬೊಟ್ಟಿಟ್ಟು ತೋರಿಸುವುದು ನಮ್ಮ ಅಪ್ರಾಮಾಣಿಕವಾದ ಕಾಯಕ ನಿಷ್ಠೆಯನ್ನು. 'ಕಾಯಕವೇ ಕೈಲಾಸ' ಎಂದು ನಾವು ಮಾತಿಗಾಗಿ ಹೇಳಬಹುದು. ವೇದಿಕೆಯ ಮೇಲಿಂದ ಕೂಗಬಹುದು. ಆದರೆ ನಮ್ಮ ನಿತ್ಯಜೀವನದಲ್ಲಿ ನಮ್ಮ ನಮ್ಮ ಸ್ವಾರ್ಥವೇ ಕಾಯಕವೆನಿಸುವಾಗ ಸರಕಾರದ ಭದ್ರತೆಯ ರಕ್ಷಣೆಯಿರುವ ಕೆಲಸಗಳಲ್ಲಿ ಶ್ರದ್ಧೆ, ಕರ್ತವ್ಯ ನಿಷ್ಠೆಗಳಿಗೆ ಮಹತ್ವ ಬರುವುದಿಲ್ಲವೆಂದೇ ನಮ್ಮ ಸಾಮಾಜಿಕ ಹಿತಚಿಂತನೆಯ ದೃಷ್ಟಿಯಿಂದ ಆರಂಭಿಸಿದ ಬಹುಪಾಲು ಉದ್ಯಮಗಳು ರೋಗಗ್ರಸ್ತವಾಗಿರುವುದು ಅಥವಾ ತಮ್ಮ ಬೆಳವಣಿಗೆಗೆ ಅಗತ್ಯವೆನಿಸುವ ಲಾಭಾಂಶವನ್ನು ಪಡೆಯಲು ಅಸಮರ್ಥವಾಗಿರುವುದು.

ನಮ್ಮ ಪಂಚವಾರ್ಷಿಕ ಯೋಜನೆಗಳಿಗೆ ಆದರ್ಶವಾಗಿದ್ದುದು ಅಂದಿನ ಸೋವಿಯತ್ ರಾಜ್ಯದ ಆಡಳಿತ ವ್ಯವಸ್ಥೆ. ನಮ್ಮ ಅರ್ಥವ್ಯವಸ್ಥೆಯನ್ನು ಸರಕಾರೀ ಸ್ವಾಮ್ಯದ ಬೃಹತ್ ಉದ್ಯಮಗಳ ಮೂಲಕ (Commanding heights) ಸಮೃದ್ಧಿಯ ಹಾದಿಯಲ್ಲಿ ಕೊಂಡೊಯ್ಯುವ ಆದರ್ಶ ನಮ್ಮ ಪ್ರಥಮ ಪ್ರಧಾನಿ ಜವಹರಲಾಲ್ ನೆಹರೂರವರಿಗಿತ್ತು. ಉಕ್ಕು, ಎಣ್ಣೆ, ವಿದ್ಯುತ್, ಖನಿಜ ಮುಂತಾದವೆಲ್ಲ ಸರಕಾರದ ಸ್ವಾಮ್ಯದಲ್ಲಿ ದೇಶದ ಪ್ರಗತಿಗೆ ಅತ್ಯಗತ್ಯವಾಗಿರುವ ಪೂರಕ ಸೌಲಭ್ಯಗಳನ್ನು (Infrastructure) ಒದಗಿಸುವಂತಿರಬೇಕು. ದೇಶೀಯ ಉದ್ಯಮಗಳೇ ದೇಶದ ಆರ್ಥಿಕ ಸ್ಥಿತಿಯನ್ನು ಸುಭದ್ರ ರೀತಿಯಲ್ಲಿಡಲು ಸಮರ್ಥವಾಗಿರಬೇಕು ಎಂಬ ವಿಚಾರಗಳೆಲ್ಲ ಸರಕಾರೀ ಸ್ವಾಮ್ಯದ ಉದ್ದೇಶಗಳಲ್ಲಿ ಸೇರಿಕೊಂಡಿವೆ. ಇದಕ್ಕಾಗಿ ತಂತ್ರಜ್ಞಾನದಲ್ಲಿ ಮುಂದುವರಿದ ದೇಶಗಳ ನೆರವು ಅಗತ್ಯವಿತ್ತೆಂದೇ ಸೋವಿಯತ್ ರಶ್ಯಾ, ಜರ್ಮನಿ, ಇಂಗ್ಲೆಂಡುಗಳ ಸಹಕಾರ ಉಕ್ಕಿನ ಕ್ಷೇತ್ರದಲ್ಲಿ ಅಗತ್ಯವೆನಿಸಿ ಆ ರೀತಿಯ ಸಹಕಾರವನ್ನು ದೊರಕಿಸಿಕೊಳ್ಳಲಾಯಿತು. ಎಣ್ಣೆಯ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಹಿಡಿತದಿಂದ ತಪ್ಪಿಸಿಕೊಳ್ಳುವುದು ತುಂಬಾ ಪ್ರಯಾಸದ ವಿಚಾರವಾಗಿತ್ತಾದರೂ ಸೋವಿಯತ್ ರಶ್ಯಾದ ಆರಂಭದ ನೆರವು, ಅಂದಿನ ಭಾರತದ ರಾಜಕಾರಣಿಗಳ ಸಾಹಸ ಪ್ರವೃತ್ತಿ, ಕೆಲವು ನಿಷ್ಣಾತ ಐ.ಎ.ಎಸ್. ಅಧಿಕಾರಿಗಳ ರಾಷ್ಟ್ರದ ಕುರಿತ ಕಾಳಜಿ ಇವೆಲ್ಲ, ಸರಕಾರ ಸ್ವಾಮ್ಯದ ಭಾರತದ ತೈಲೋದ್ಯಮ ಕಳೆದ ಐವತ್ತು ವರ್ಷಗಳಲ್ಲಿ ಸಾಧಿಸಿದ ಬೆರಗುಗೊಳಿಸುವ ಸಾಧನೆಯನ್ನು ಪರಿಚಯಿಸಿವೆ. ಆದರೆ ಇದೇ ರೀತಿಯ ಸಾಧನೆಯಾಗಲೀ ವ್ಯವಹಾರದ

ಯಶಸ್ಸಾಗಲೀ ಹೆಚ್ಚಿನ ಸರಕಾರ ಸ್ವಾಮ್ಯದ ಉದ್ಯಮಗಳಿಗೆ ಬಂದಿಲ್ಲ. ಪ್ರತಿಶತ ಎರಡಕ್ಕಿಂತ ಹೆಚ್ಚಿರದ ಲಾಭಾಂಶ, ನಷ್ಟದಲ್ಲೇ ಮುಂದುವರಿಯುತ್ತಿರುವ ಹಲವಾರು ಉದ್ಯಮಗಳು, ದೇಶವನ್ನು ಸಮೃದ್ಧಿಯ ಹಾದಿಯಲ್ಲಿ ಕೊಂಡೊಯ್ಯುವ ರಾಷ್ಟ್ರದ ಹಾಗೂ ರಾಜ್ಯಗಳ ಬೊಕ್ಕಸಕ್ಕೆ ಹೊರೆಯಾಗುವಂಥ ಪರಿಸ್ಥಿತಿ ಯಾಕೆ ಉದ್ಭವಿಸಿದೆ !

ಸಮುದಾಯದ ಬದುಕಿಗೂ ನಮ್ಮ ಬದುಕಿಗೂ ಹೊಂದಿಕೆ ಇರಬೇಕು ಎನ್ನುವ ತಿಳಿವಳಿಕೆ ಹಾಗೂ ನಾಗರಿಕ ಪ್ರಜ್ಞೆ, ಇವುಗಳ ಕೊರತೆ ಇದಕ್ಕೆ ಮುಖ್ಯ ಕಾರಣ. ಸ್ವಾರ್ಥವು ಸಹಜವೆನಿಸುವ ಒಂದು ಮಾನವ ಪ್ರವೃತ್ತಿ. ಆದರೆ ಈ ಸ್ವಾರ್ಥವನ್ನು ಹಿಡಿತದಲ್ಲಿಡುವ ನೈತಿಕ ಪ್ರಜ್ಞೆ ಮಾಯವಾದಾಗ ಸಮುದಾಯ ಜೀವನಕ್ಕೆ ಅಗತ್ಯವೆನಿಸುವ ಒಂದು ಅಸ್ಮಿತೆ ರೂಪುಗೊಳ್ಳುವುದಿಲ್ಲ. ನಮ್ಮ ಸ್ವಾತಂತ್ರ್ಯದ ಐವತ್ತು ವರ್ಷಗಳ ದೊಡ್ಡ ದುರಂತ ಇದು. ನಾನು, ನನ್ನ ನಾಡು, ನನ್ನ ದೇಶ ಇವು ಹೊಂದಿಕೊಂಡು ರೂಪಿಸುವ ರಾಷ್ಟ್ರೀಯ ಅಸ್ಮಿತೆ ಮಾತ್ರ ರಾಷ್ಟ್ರವನ್ನು ಕಟ್ಟುವ ಹೊಣೆಗಾರಿಕೆಯನ್ನು ನಿರ್ವಹಿಸಬಲ್ಲುದು. 'ಬೀಸಿದ ಮುಂಡೆಗೆ ಮುಕ್ಕಿದ್ದೇ ಲಾಭ' ಎನ್ನುವ ಗಾದೆಯ ಮಾತಿನಂತೆ, ನಮ್ಮ ನಡವಳಿಕೆಯಾದರೆ ಯಾವ ಸಂಸ್ಥೆಯನ್ನೂ ಕಟ್ಟಲಾಗುವುದಿಲ್ಲ. ಒಂದು ರಾಷ್ಟ್ರದ ಸಮುದಾಯ ಜೀವನದಲ್ಲಿ ಪ್ರತಿಫಲಿಸುವ ಸಂಸ್ಕಾರಗಳನ್ನೂ ಅನನ್ಯತೆಯನ್ನೂ ಜಾಹೀರುಪಡಿಸುವ ಅಸ್ಮಿತೆಯನ್ನು ಇತರರಿಗೆ ಪರಿಚಯಿಸಲು ಸಾಧ್ಯವಾಗುವುದಿಲ್ಲ.

ದಕ್ಷಿಣ ಕೊರಿಯಾದ ಸೋಲ್ ನಗರದ ಕಾರ್ಮಿಕ ಮುಷ್ಕರದ ಉದಾಹರಣೆಯನ್ನು ಹಿಂದೆ ಸೂಚಿಸಿದ್ದು ಇದೇ ಕಾರಣಕ್ಕಾಗಿ. ನಮ್ಮ ಕಾಯಕದಲ್ಲಿ ನಿಷ್ಠೆ ಎಲ್ಲಿರಬೇಕು, ಯಾವ ಪ್ರಮಾಣದಲ್ಲಿರಬೇಕು ಎಂಬುದರ ಗೊಡವೆ ನಮಗೆ ಇರದೆ ಹೋಗುವಾಗ ಸಾಮುದಾಯಿಕ ಪ್ರಗತಿಯಾಗಲೀ ನಾವು ಹೆಮ್ಮೆ ಪಟ್ಟುಕೊಳ್ಳಬೇಕಾದ ಅಸ್ಮಿತೆಯಾಗಲೀ ಕನಸಿನ ಮಾತಾಗುತ್ತದೆ. ನಮ್ಮ ನಾಡು 50 ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಅಳೆಯುವ ಮಾನದಂಡಗಳನ್ನು ನಿರ್ಧರಿಸುವಾಗ ಪ್ರಾಮಾಣಿಕವಾದ ಕಾಯಕ ನಿಷ್ಠೆ ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ನಾವು ಯೋಚಿಸುವುದೇ ಇಲ್ಲ. ಉತ್ಪಾದನಾ ಸಾಮರ್ಥ್ಯದ ಪ್ರಗತಿ, ಬಜೆಟ್ ಖೋತಾ, ದಾರಿದ್ರ್ಯ ರೇಖೆಗೆ ಸಂಬಂಧಿಸಿದ ಅಂಕೆ ಸಂಖ್ಯೆಗಳು, ಇವೇ ರಾಷ್ಟ್ರದ ಸಾಮರ್ಥ್ಯದ ಯೋಗ್ಯತೆಯ ಸೂಚಕಗಳಲ್ಲ. ಒಬ್ಬ ಕಾರ್ಮಿಕನ ಅಥವಾ ಕರ್ಮಚಾರಿಯ, ಯಾಕೆ ಒಬ್ಬ ಸಾಮಾನ್ಯ ನಾಗರಿಕನ ಕರ್ತವ್ಯ ನಿಷ್ಠೆ ಆತನ ಕೌಟುಂಬಿಕ ಸ್ವಾರ್ಥದ ಪರಿಧಿಯಿಂದ ಹೊರ ಬರುವುದಿಲ್ಲವಾದರೆ, ಆತನ ಸಮುದಾಯದ ಕುರಿತ ಚಿಂತನೆ ಪ್ರಾಮಾಣಿಕವಾಗಲು ಸಾಧ್ಯವಿಲ್ಲ. ಇನ್ನು ಕೆಲಸ ನಿರ್ವಹಿಸುವ ಹೊಣೆ ಹೊತ್ತ ಅಧಿಕಾರಿಗಳ ಚಿಂತನೆಯೂ ತಮ್ಮ ಕೌಟುಂಬಿಕ ಅಥವಾ ಅಧಿಕಾರ ವರ್ಗದ ಸ್ವಾರ್ಥದಿಂದ ಮುಂದುವರಿಯುವುದಿಲ್ಲವಾದರೆ ಯಾವುದೇ ವ್ಯವಸ್ಥೆಯ

ಯಶಸ್ಸು ರಾಷ್ಟ್ರ ಜೀವನದ ಗೌರವವನ್ನು ಹೆಚ್ಚಿಸುವ ಸಾಧ್ಯತೆ ಕಡಿಮೆ. ಇನ್ನು ಇಂತಹ ಉದ್ಯಮಗಳನ್ನೋ ಅಥವಾ ಯಾವುದೇ ಸಾರ್ವಜನಿಕವೆನಿಸುವ ವ್ಯವಸ್ಥೆಯನ್ನೋ ನಡೆಸಿಕೊಂಡು ಹೋಗುವ ಹೊಣೆ ಹೊತ್ತಿರುವವರ ಚಿಂತನೆ ವ್ಯವಸ್ಥೆಯ ಸ್ವಾರ್ಥದ ಪರಿಧಿಯನ್ನು ದಾಟಿ ಸಮುದಾಯದ ಹಿತವನ್ನೂ ಗಮನಿಸುವುದಿಲ್ಲವೋ ಆಗ ವ್ಯಾಪಕವಾದ, ಸಮಗ್ರ ರಾಷ್ಟ್ರಕ್ಕೆ ಅನ್ವಯಿಸಬಹುದಾದ ಅಸ್ಮಿತೆಯ ಸ್ವರೂಪ ಕಾಣಿಸುವುದೇ ಇಲ್ಲ. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ದೇಶೀಯ ಉದ್ಯಮಗಳು ಬೆಳೆಯಬೇಕು, ಎಲ್ಲ ಕ್ಷೇತ್ರಗಳಲ್ಲೂ ನಾವು ನಮ್ಮ ರಾಷ್ಟ್ರೀಯ ಸಾಧನೆಯ ಹಿರಿಮೆಯನ್ನು ಸಾರಬೇಕು ಎನ್ನುವ ಅಪೇಕ್ಷೆ ಇಂದಿನ ಉದಾರೀಕೃತ ಉದ್ಯಮ ನೀತಿ ಹಾಗೂ ವಿಶ್ವವ್ಯಾಪಾರಾರ್ಹತೆ (globalisation)ಗಳ ಸಂದರ್ಭದಲ್ಲಿ ಯಾವ ರೀತಿ ಚಡಪಡಿಕೆಗೆ ಗುರಿಯಾಗಿದೆ ಎಂಬುದಕ್ಕೆ ಟಿಪ್ಪಣಿ ಅನಗತ್ಯ. ನಾವು ಏನನ್ನಾದರೂ ಹೇಗಾದರೂ ಮಾಡಿದ್ದನ್ನು ಕೊಳ್ಳುವ ಗ್ರಾಹಕ ವರ್ಗದ ಅಜ್ಞಾನದ ಲಾಭವನ್ನು ಪಡೆಯಬೇಕು ಎನ್ನುವ ಸ್ವಾರ್ಥದ್ದೇ ಮೇಲುಗೈಯಾಗಿರುವಾಗ, ಕಾರ್ಮಿಕ, ಅಧಿಕಾರಿ, ಆಡಳಿತೆ ಮೂರು ಹಂತಗಳಲ್ಲೂ ತಮ್ಮ ತಮ್ಮ ಸ್ವಾರ್ಥದ್ದೇ ಮೇಲುಗೈಯಾಗುವಾಗ ರಾಷ್ಟ್ರನಿಷ್ಠೆ ಯಾರಿಗೆ ಬೇಕು.

ಕಾರ್ಮಿಕ ಸಂಘಟನೆ ಅಗತ್ಯವಾಗುವುದು ಅವರ ಹಿತಗಳೆಲ್ಲ ಲಾಭಬಡುಕರ ಶೋಷಣೆಗೆ ಗುರಿಯಾಗುವಾಗ ಪ್ರತಿಭಟಿಸುವ ದಾರಿ ಬೇಕೆಂದು. ಇಲ್ಲಿ ಕಾರ್ಮಿಕ ಸಮುದಾಯದ ಹಿತವೇ ಸಾರ್ವಭೌಮವೆನಿಸುವುದೂ ಸರಿಯೆ. ಖಾಸಗಿ ಒಡೆತನದ ಉದ್ಯಮಗಳಲ್ಲಿ ಆಡಳಿತೆಯ ಸ್ವಾರ್ಥವೇ ಮುಖ್ಯವಾಗುವಾಗ ಇಂತಹ ಪ್ರತಿಭಟನೆ ಅನಿವಾರ್ಯವಾಗಿ ಪ್ರಬಲ ಕಾರ್ಮಿಕ ಸಂಘಟನೆ ಆಡಳಿತೆಯ ಸ್ವಾರ್ಥ ಪ್ರೇರಿತ ಚಟುವಟಿಕೆಗಳನ್ನು ನಿಯಂತ್ರಿಸಲು ಸಹಕಾರಿಯಾಗುವುದಿದೆ. ಆದರೆ ಸರಕಾರ ಸ್ವಾಮ್ಯದ ಉದ್ಯಮಗಳು ಸಮುದಾಯದ ಹಿತದಿಂದ ರೂಪಿಸಲ್ಪಟ್ಟಿರುವಾಗ ಇಲ್ಲಿ ಕಾರ್ಮಿಕರು ಸಮುದಾಯದ ಹಿತವನ್ನು ಅಲಕ್ಷಿಸಿ, ತಮ್ಮ ರಾಷ್ಟ್ರೀಯವೆನಿಸಬಹುದಾದ ಅಸ್ಮಿತೆಯ ಯೋಚನೆಯನ್ನು ಮಾಡದೆ, ಕಾರ್ಮಿಕ ವರ್ಗದ ಸ್ವಾರ್ಥವನ್ನಷ್ಟೇ ಸಂಘಟನೆಯ ಆಯುಧವನ್ನಾಗಿ ಬಳಸುವುದು ಸರಿಯೇ ಎಂಬ ಪ್ರಶ್ನೆಯನ್ನು ಕೇಳದಿರಲಾಗುವುದಿಲ್ಲ.

ರಾಜ್ಯ ಮಟ್ಟದಲ್ಲಿ ಸರಕಾರ ಸ್ವಾಮ್ಯದ ಎರಡು ಪ್ರಮುಖ ಸಂಸ್ಥೆಗಳು ಸಾರಿಗೆ ಮತ್ತು ವಿದ್ಯುತ್ ಉತ್ಪಾದನೆಗೆ ಸಂಬಂಧಪಟ್ಟಂಥವು. ರಾಷ್ಟ್ರಮಟ್ಟದಲ್ಲಿ ನಾಡಿನ ಬ್ಯಾಂಕುಗಳನ್ನೆಲ್ಲ ಸಮುದಾಯದ ಸಾರ್ವತ್ರಿಕ ಹಿತಕ್ಕೆ ಒಳಪಡಿಸಬೇಕು ಎಂದು ಹಿಂದಿನ ಪ್ರಧಾನಿ ಇಂದಿರಾ ಗಾಂಧಿಯವರು ನಿರ್ಧರಿಸಿದ ಬ್ಯಾಂಕುಗಳ ರಾಷ್ಟ್ರೀಕರಣ, ಇವು ಸಮುದಾಯದ ಹಿತವನ್ನು ಯಾವ ರೀತಿ ಸುಧಾರಿಸಿವೆ ಅಥವಾ ಕಡೆಗಣಿಸಿವೆ ಎಂಬ ವಿವೇಚನೆ ನಮ್ಮ ಸ್ವಾತಂತ್ರ್ಯದ 50 ವರ್ಷಗಳು ಕೊನೆಗೊಳ್ಳುತ್ತಿರುವ ಸಂದರ್ಭದಲ್ಲಿ ಪ್ರಸ್ತುತ.

ಸಮುದಾಯದ ಹಿತವೇ ಸಾರ್ವಭೌಮವೆಂದು ಈ ಮೂರರ ಸ್ವಾಮ್ಯವನ್ನು ಸರಕಾರ ವಹಿಸಿಕೊಂಡ ಮೇಲೆ ರಾಷ್ಟ್ರದ ಸಮಗ್ರ ಹಿತದ ಚಿಂತನೆ ದೂರವೇ ಉಳಿದು ಈ ಮೂರರಲ್ಲೂ ಖಾಸಗೀಕರಣದ ಮಾತು ಇಂದು ಕೇಳಿಬರುತ್ತಿರುವುದರ ಕಾರಣ ವೇನು ? ರಾಷ್ಟ್ರ ಹಾಗೂ ರಾಜ್ಯದ ಬೊಕ್ಕಸಗಳಿಗೆ ಹೊರೆಯಾಗುವಂತೆ ಇವು ಕಾರ್ಯ ನಿರ್ವಹಿಸುವ ಅವಸ್ಥೆಯೇಕೆ ಬಂತು ?

ಸರಕಾರ ಸ್ವಾಮ್ಯವಿರುವ ಸಂಸ್ಥೆಗಳಲ್ಲಿ ದುಡಿಯುವ ಕಾರ್ಮಿಕನಿಗೆ ಕೌಟುಂಬಿಕ ಸ್ವಾರ್ಥವನ್ನು ಪೋಷಿಸಲು ಸಹಾಯ ಮಾಡುವ ಎರಡು ಮುಖ್ಯ ಸೌಲಭ್ಯಗಳಲ್ಲಿ ಮೊದಲನೆಯದು ತನ್ನ ಕೆಲಸ ಒದಗಿಸುವ ಭದ್ರತೆ. ಎರಡನೆಯದು ಈ ಭದ್ರತೆಯಿಂದಾಗಿಯೇ ತನ್ನ ದುಡಿಮೆಯಲ್ಲಿ ನಿಷ್ಠೆ ಇದ್ದರೂ ಇಲ್ಲದಿದ್ದರೂ ಸರಿಯೆ, ತನ್ನನ್ನು ಪ್ರಶ್ನೆಗೆ, ಶಿಕ್ಷೆಗೆ, ಅಥವಾ ಕೆಲಸ ಕಳೆದುಕೊಳ್ಳಬಹುದಾದ ಶಿಕ್ಷೆಗೆ, ಒಳಪಡಿಸುವುದು ಸುಲಭವಲ್ಲವೆನ್ನುವ ಧೈರ್ಯ. ಇದಕ್ಕೂ ಹೆಚ್ಚಾಗಿ ತನ್ನ ಸಂಘಟನೆಯ ಶ್ರೀರಕ್ಷೆ ತನ್ನನ್ನು ಎಂತಹ ಸಂಕಟದಿಂದಲೂ ಪಾರುಮಾಡಬಹುದು ಎನ್ನುವ ನಂಬಿಕೆ. ಇಂಥಲ್ಲಿ ಸಂಸ್ಥೆಯ ಹಿತ ಗೌಣವಾಗುತ್ತದೆ. ಈ ಸಂಸ್ಥೆಗಳು ರಾಷ್ಟ್ರೀಯವೆನಿಸುವ ಸಂಸ್ಕಾರಗಳನ್ನು ರೂಪಿಸಬೇಕಾದಂಥವು ಎಂಬ ಚಿಂತನೆಯೂ ಗೌಣವಾಗುತ್ತದೆ. 'ನನ್ನ ದೇಶ ನನಗೆ ಕೊಡಬೇಕಾದುದಷ್ಟೇ ಮುಖ್ಯ—ನಾನು ಪ್ರತಿಯಾಗಿ ದೇಶಕ್ಕೆ ಕೊಟ್ಟರೂ ಕೊಡದಿದ್ದರೂ ನಡೆದೀತು' ಎನ್ನುವ ಜೀವನಕ್ರಮ ಸಹಜವಾಗುತ್ತದೆ.

ಅಭದ್ರತೆಯ ಭಯವಿರುವ ಖಾಸಗೀ ಉದ್ಯಮಗಳಲ್ಲಿ ಪ್ರಬಲ ಕಾರ್ಮಿಕ ಸಂಘಟನೆ ಇದ್ದರೂ ಕಾರ್ಮಿಕರ ಉತ್ಪಾದನಾ ಪ್ರಮಾಣ ಹೆಚ್ಚು ಎನ್ನಲು ಯಾವ ಅಧ್ಯಯನದ ನೆರವೂ ಅನಗತ್ಯ. ಇಲ್ಲಿ ಕಾರ್ಮಿಕರ ಉಸ್ತುವಾರಿ ನಡೆಸಬೇಕಾದ ಅಧಿಕಾರಿ ವರ್ಗವೂ ತಮ್ಮ ಅಭದ್ರತೆಯ ಭಯದಿಂದ ಸ್ವಾರ್ಥದ ರೇಖೆಯನ್ನು ದಾಟಿಯೇ ಕೆಲಸ ನಿರ್ವಹಿಸಬೇಕಾದ ಪರಿಸ್ಥಿತಿಯೂ ಇದೆ. ಆಡಳಿತಕ್ಕಂತೂ ಲಾಭೈಕ ದೃಷ್ಟಿಯ ತನ್ನ ಸ್ವಾರ್ಥವನ್ನು ಪೋಷಿಸಬೇಕಾದ ಪರಿಸ್ಥಿತಿಯಲ್ಲಿ ಕೆಲಸಗಾರರ ಅಭದ್ರತೆಯ ದುಡಿಮೆಯ ಪೂರ್ಣ ಲಾಭ ಪಡೆಯುವ ಪ್ರಬಲ ಸಾಧನವಾಗುತ್ತದೆ. ಇಲ್ಲಿ ನನಗೆ ನೆನಪಾಗುವುದು ಪ್ರಸಿದ್ಧ ಆಂಗ್ಲ ಲೇಖಕ ಆಲಡೌಸ್ ಹಕ್ಸ್ಲಿಯವರ ಮಾತು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ನಡವಳಿಕೆಯನ್ನು ನಿಯಂತ್ರಿಸಿಕೊಳ್ಳುವುದು ತನ್ನ ಹಿಂದೆ ಒಬ್ಬ ಪೋಲೀಸನಿದ್ದಾನೆ ಎಂಬ ತಿಳಿವಳಿಕೆಯನ್ನಿರಿಸಿಕೊಂಡೇ ಎಂದು. ಇದು ಒಂದು ಮನಶಾಸ್ತ್ರೀಯ ಸತ್ಯ.

ನಾವು ನಮ್ಮ ಸ್ವಾತಂತ್ರ್ಯದ ಐವತ್ತು ವರ್ಷಗಳಲ್ಲಿ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಗದಿರುವುದಕ್ಕೆ ಸರಕಾರದ ಹಾಗೂ ಸರಕಾರ ಸ್ವಾಮ್ಯದ ಹೆಚ್ಚಿನ ಉದ್ಯಮಗಳಲ್ಲಿ ಕಾರ್ಮಿಕರು ಹಾಗೂ ಅಧಿಕಾರಿಗಳು ತಮ್ಮ ಸ್ವಾರ್ಥದ ಲಕ್ಷ್ಮಣರೇಖೆಯನ್ನು ದಾಟಲು ಮುಂದಾಗದಿರುವುದೇ ಮುಖ್ಯ ಕಾರಣ. ಕಾರ್ಮಿಕ ಚಳುವಳಿಯ ಆದರ್ಶವಿರುವುದೇ ವಿಶ್ವವ್ಯಾಪಿ ಕಾರ್ಮಿಕ

ಸಂಘಟನೆಗಳ ಬಂಧುತ್ವ ಸಹಕಾರಗಳಲ್ಲಿ. ಆದರೆ ಪ್ರಜಾಪ್ರಭುತ್ವವನ್ನು ಅಂಗೀಕರಿಸಿರುವ ರಾಷ್ಟ್ರಗಳಲ್ಲಿ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳನ್ನು ರೂಪಿಸಲು ಸಾಧ್ಯವಾಗದಾಗ ಕಾರ್ಮಿಕ ಸಂಘಟನೆಗಳೂ ಅವರ ಮೂಲಭೂತ ಸೌಕರ್ಯಗಳ ಹೊರತಾದ ಯಾವ ಆದರ್ಶವನ್ನೂ ಸಾಧಿಸುವುದಿಲ್ಲ. ಪ್ರಜಾಪ್ರಭುತ್ವವೂ ಅದರ ನಿಜವಾದ ಅರ್ಥದಲ್ಲಿ ಯಶಸ್ವಿಯಾಗುವುದಿಲ್ಲ. ಭಾರತದ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಸಂಘಟಿತ ಕಾರ್ಮಿಕರ ಜೀವನಸ್ತರ ಸುಧಾರಿಸಲು ಬಹುಪಾಲು ಸಾಧ್ಯವಾಗಿರುವುದು ಸಂಘಟಿತ ಹೋರಾಟದ ಸ್ವಾರ್ಥದಿಂದ ಹಾಗೂ ನೆಹರೂ ಯುಗದಿಂದ ನಾವು ನೆಚ್ಚಿಕೊಂಡು ಬಂದಿರುವ ಸಾರ್ವಜನಿಕ ಹಿತರಕ್ಷಣೆಯ (welfare state) ರಾಜ್ಯದ ಪರಿಕಲ್ಪನೆಗಳಿಂದ.

ಆದರೆ ಸುದೃಢ ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಾದ ಹೊಣೆಯರಿತ ನಾಗರಿಕ ಪ್ರಜ್ಞೆಯ ಕೊರತೆ ಕಾರ್ಮಿಕ ವರ್ಗದಲ್ಲಿ ಮಾತ್ರವಲ್ಲ, ದೇಶವ್ಯಾಪಿಯಾಗಿ ಎಲ್ಲೆಡೆ ಕಂಡುಬರುತ್ತ ಗುಂಪಿನ, ಜಾತಿಯ, ಸಮೂಹದ ಹಿತಕ್ಕಿಂತ ಹೆಚ್ಚಿನದೆನಿಸುವ ಪ್ರಜ್ಞೆ ಎಲ್ಲಿ ಯಾಕೆ ಬೇಕು ಎಂದು ಕೇಳುವಂತಹ ಪರಿಸ್ಥಿತಿಯನ್ನು ತಂದೊಡ್ಡಿದೆ.

ಸಾರ್ವತ್ರಿಕವಾದ, ಶಿಕ್ಷಣ ಪಡೆದ ಜನ ಸಮುದಾಯದ ನಾಗರಿಕ ಪ್ರಜ್ಞೆ ರಾಷ್ಟ್ರಪ್ರಜ್ಞೆಯನ್ನು ಪೋಷಿಸಬೇಕಾದಂಥದು. ಸಾರ್ವತ್ರಿಕವಾಗಿ ಸಾರ್ವಜನಿಕರಿಗೆ ಅನ್ವಯವಾಗುವ ರಾಷ್ಟ್ರಪ್ರೇಮದ ವಿವೇಚನೆಯನ್ನು ಬದಿಗಿರಿಸಿ ಸಂಘಟನೆಯ ಬಲವುಳ್ಳ ಕಾರ್ಮಿಕ ವರ್ಗದ ರಾಷ್ಟ್ರಪ್ರೇಮವನ್ನು ವಿವೇಚಿಸುವಾಗ ನಾವು ಕಾಣುವುದೇನು ? ರಾಷ್ಟ್ರದ ಹಿತದೃಷ್ಟಿಯಿಂದಲೇ ರಾಷ್ಟ್ರೀಕರಣ ಮಾಡಲಾದ ಬ್ಯಾಂಕಿಂಗ್ ಮತ್ತು ವಿಮಾ ವ್ಯವಸ್ಥೆಗಳಲ್ಲಿ ನಾವು ಸಾಧಿಸಿರುವ ಪ್ರಗತಿಯನ್ನೂ, ನಾವು ಸಾಧಿಸಬಹುದಾಗಿದ್ದ ಪ್ರಗತಿಯನ್ನೂ ವಿವೇಚಿಸಿದಾಗ ಇಂದು ಮತ್ತೆ ಖಾಸಗೀಕರಣದ ಮಾತು ಪ್ರಸ್ತುತವೆನಿಸುವುದೇಕೆ ಎಂದು ಯೋಚಿಸುವಂತಾಗುತ್ತದೆ. ರಾಷ್ಟ್ರನಿಷ್ಠೆಯನ್ನು ಅತ್ಯಂತ ಸಮರ್ಪಕವೆನಿಸುವ ರೀತಿಯಲ್ಲಿ ತಮ್ಮ ಕರ್ತವ್ಯನಿಷ್ಠೆಯಲ್ಲಿ ಪ್ರಕಟಿತ 'ಉತ್ಕೃಷ್ಟತೆ'ಯನ್ನು ಅರಸುವುದು ನಮ್ಮ ಗುರಿ ಎಂದು ತಿಳಿಯದ ಈ ವ್ಯವಸ್ಥೆಗಳ ನೌಕರವರ್ಗ, ತಮ್ಮ ಸ್ವಂತ ಹಾಗೂ ಸಂಘಟಿತ ಕಾರ್ಮಿಕ ವರ್ಗದ ಹಿತಕ್ಕಿಂತ ಹೆಚ್ಚಿನ ಹಿತವಿಲ್ಲವೆಂದು ತಿಳಿಯುತ್ತ ಬಂದಿರುವುದರಿಂದ ಈ ವ್ಯವಸ್ಥೆಗಳು ಸಾಧಿಸಬಹುದಾಗಿದ್ದ ಪ್ರಗತಿಯನ್ನೂ, ರಾಷ್ಟ್ರೀಯ ಸ್ತರದ ಅಸ್ಮಿತೆಯನ್ನೂ ಸಾಧಿಸಿಲ್ಲ. ಈ ಸ್ಥಿತಿಗೆ ಕಾರ್ಮಿಕ ವರ್ಗವಷ್ಟೇ ಕಾರಣವಲ್ಲವೆಂಬ ಮಾತು ನಿಜವಾದರೂ ಇವರ ಕರ್ತವ್ಯನಿಷ್ಠೆ ರಾಷ್ಟ್ರಪ್ರಜ್ಞೆಯ ಹಿನ್ನೆಲೆಯಲ್ಲಿ ಪ್ರಕಟವಾಗಿಲ್ಲವೆನ್ನುವ ಸತ್ಯವನ್ನು ಇದಿರಿಸಬೇಕಾದಾಗ ಮಾತ್ರ ಖಾಸಗೀಕರಣದ ಪ್ರಸ್ತುತತೆ. ರಾಷ್ಟ್ರಚಿಂತನೆಯ ಕರ್ತವ್ಯನಿಷ್ಠೆ ಇವರದಾಗಿದ್ದರೆ ಬೆಳಕಿಗೆ ಬರುತ್ತಲೇ ಇರುವ ನೂರಾರು ವಂಚನೆಯ ಪ್ರಕರಣಗಳು, ಅಧಿಕಾರಿ ವರ್ಗ ಶಾಮೀಲಾಗಿರುವ ಅವ್ಯವಹಾರದ ಪ್ರಕರಣಗಳು, ಅದಕ್ಷ ಕಾರ್ಯನಿರ್ವಹಣೆಯಿಂದ ರೋಸಿ

ಹೋಗಿರುವ ಗ್ರಾಹಕವರ್ಗ ಇಂಥವನ್ನೆಲ್ಲ ಇದಿರಿಸುವ ಪ್ರಸಂಗ ಬರುತ್ತಿರಲಿಲ್ಲ. ಸರಕಾರ ಸ್ವಾಮ್ಯದ ಉದ್ಯಮಗಳಲ್ಲಿ ಭದ್ರತೆ ಸುರಕ್ಷಿತ, ಆ ಕಾರಣ ಕರ್ತವ್ಯನಿಷ್ಠೆ ದುಡಿಮೆಯಲ್ಲಿ ಮಹತ್ವದ ಸ್ಥಾನ ಪಡೆಯುವ ಅಗತ್ಯವಿಲ್ಲವೆಂಬ ತಿಳುವಳಿಕೆ ಇಂತಹ ಸ್ಥಿತಿಯನ್ನು ಪೋಷಿಸುತ್ತದೆ. ಅಧಿಕಾರ ನಿರ್ವಹಿಸಬೇಕಾದವರು ಸರಕಾರದ ಸ್ವಾಮ್ಯದ ಕಾರಣದಿಂದ ಒಳಗಾಗಬೇಕಾದ ರಾಜಕೀಯ ಹಸ್ತಕ್ಷೇಪವೂ ತಮ್ಮ ತಮ್ಮ ಸ್ವಾರ್ಥವನ್ನು ಪೋಷಿಸುವ ಯಾವ ನಿರ್ಧಾರವೂ ತಪ್ಪು ಎನಿಸಿಕೊಳ್ಳಲಾರದು ಎಂದು ತಿಳುವಳಿಕೆಯನ್ನು ಮೂಡಿಸಿ ಸಂಸ್ಥೆಯ ವ್ಯವಹಾರದ 'ಉತ್ಕೃಷ್ಟತೆ' ಒಂದು ಕನಸಿನ ಆದರ್ಶವಾಗಿಯೇ ಉಳಿಯುತ್ತದೆ. ಈಗ ಪ್ರಕಟವಾಗುತ್ತಿರುವ ಖಾಸಗೀಕರಣದ ವಿರೋಧವೂ ಕರ್ತವ್ಯ ನಿಷ್ಠೆಯ ಮೌಲ್ಯಮಾಪನ ಮಾಡುವ ಪರಿಸ್ಥಿತಿಯಲ್ಲಿ ಆಗಿರುವ, ಆಗುತ್ತಿರುವ ಲೋಪದೋಷಗಳಿಂದಾಗಿ ತಮ್ಮ ಸ್ವಾರ್ಥವಷ್ಟೇ ಅಲ್ಲ, ಕೆಲಸದ ಭದ್ರತೆಯೂ ಪ್ರಶ್ನಾರ್ಹವೆನಿಸೀತು ಎಂಬ ಭಯದ ಕಾರಣದಿಂದಾಗಿ. ಇಂದಿನ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ನಡೆಯುತ್ತಿರುವ ವಂಚನೆಯ ಪ್ರಕರಣಗಳನ್ನು, ವ್ಯವಹಾರದಲ್ಲಿ ನಡೆಯುತ್ತಿರುವ ಲಂಚದ ಪ್ರಕರಣಗಳನ್ನು ತಡೆಯುವ ಅಥವಾ ಬಹಿರಂಗಗೊಳಿಸುವ ಸಾಮರ್ಥ್ಯ ಕಾರ್ಮಿಕ ಸಂಘಟನೆಗಳಿಗಿಲ್ಲವೆ ! ಕರ್ತವ್ಯನಿಷ್ಠೆಗೆ ಯಾವ ಕಾರಣದಿಂದಲೂ ಅಪಚಾರವಾಗಬಾರದು ಎಂದು ನೌಕರ ವರ್ಗಕ್ಕೆ ನಿರ್ದೇಶನ ಕೊಡುವ ಸಾಮರ್ಥ್ಯ ಕಾರ್ಮಿಕ ಸಂಘಟನೆಗಳಿಗಿಲ್ಲವೆ ! ಇದೆ. ಆದರೆ ತಮ್ಮ ನೌಕರರಲ್ಲೇ ಆಗುತ್ತಿರುವ ವಂಚನೆಯ ಪ್ರಕರಣಗಳನ್ನು ಶೋಧಿಸಿ ಬೆಳಕಿಗೆ ತರುವ ನೈತಿಕ ಹೊಣೆಗಾರಿಕೆ ಮಾತ್ರ ಇಲ್ಲ. ತಾವು ದುಡಿಯುವ ವ್ಯವಸ್ಥೆ ರಾಷ್ಟ್ರದ ಪ್ರಗತಿಯನ್ನು ಸೂಚಿಸಬಹುದಾದ ಸಾಧನ. ಅದರ ಉತ್ಕೃಷ್ಟ ವ್ಯವಹಾರ ನೀತಿ ರಾಷ್ಟ್ರಕ್ಕೇ ಮಾದರಿಯಾಗಬೇಕು, ನಮ್ಮ ಸ್ವಾರ್ಥ ಏನಿದ್ದರೂ ಅದು ಪ್ರಕಟವಾಗ ಬೇಕಾದುದು ಈ ಹಿನ್ನೆಲೆಯಲ್ಲಿ ಮಾತ್ರ ಎಂಬ ತಿಳುವಳಿಕೆ ಬೆಳೆಯುವಂತಾದರೆ ಖಾಸಗೀಕರಣದ ಮಾತು ಉದ್ಭವಿಸಲಾರದು.

ಇನ್ನು ರಾಜ್ಯಗಳು ಅಧಿಕಾರ ಸೂತ್ರ ವಹಿಸಿಕೊಂಡಿರುವ ಎರಡು ವ್ಯವಸ್ಥೆ ಗಳನ್ನು ಉದಾಹರಣೆಗೆಂದು ತೆಗೆದುಕೊಳ್ಳೋಣ. ಸಾರಿಗೆ ಮತ್ತು ವಿದ್ಯುತ್ ಉತ್ಪಾದನೆ ಮತ್ತು ಸರಬರಾಜು. ನಾವಿಲ್ಲಿ ಗಮನಿಸಬೇಕಾದುದು ಇವೆರಡೂ ಸಾರ್ವಜನಿಕ ಹಿತರಕ್ಷಣೆಯ (welfare state) ಪರಿಕಲ್ಪನೆಗಳಿಂದ ಪ್ರೇರಿತ ವಾದಂಥವು. ಎಂದರೆ, ಈ ವ್ಯವಸ್ಥೆಗಳು ತಮ್ಮ ಕಾರ್ಯವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿಗೆ ನಷ್ಟವನ್ನು ಅನುಭವಿಸಬೇಕಾಗಿ ಬಂದರೂ ಅದು ಸಾರ್ವಜನಿಕ ಹಿತದೃಷ್ಟಿ ಯಿಂದ ಸಹನೀಯ ಎಂಬ ತಪ್ಪು ಕಲ್ಪನೆ. ತಪ್ಪು ಕಲ್ಪನೆಯೆನ್ನಲು ಕಾರಣವಿಷ್ಟೇ. ಸಾರ್ವಜನಿಕ ಹಿತಕ್ಕಾಗಿ ಸರಕಾರ ಕೊಡಮಾಡುವ ಸಹಾಯ (subsidy) ಒಂದಲ್ಲ ಒಂದು ರೀತಿಯಿಂದ ಸಾರ್ವಜನಿಕ ಹಿತಕ್ಕಾಗಿ ಮರಳಲೇಬೇಕು ಎಂಬ ನಿರ್ಧಾರವಿದ್ದು ಅದಕ್ಕಾಗಿ ಅಗತ್ಯವಿರುವ ಉಪಾಯಗಳನ್ನು ಯೋಚಿಸಿಕೊಂಡಾಗ ಮಾತ್ರ ಆ

ಸಹಾಯಕ್ಕಾಗಲೀ ಆದರಿಂದ ಲಾಭ ಪಡೆಯುವ ವ್ಯವಸ್ಥೆಗಾಗಲೀ ಅರ್ಥಬಂದೀತು. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಮ್ಮ ಕೃಷಿರಂಗ ಸ್ವಲ್ಪ ಮಟ್ಟಿಗೆ ಭೂಸುಧಾರಣೆಯ ಕಾರ್ಯಕ್ರಮಗಳಿಂದ, ಹೆಚ್ಚಿಗೆ ಸರಕಾರದ ತೆರಿಗೆಯ ಹಾಗೂ ಸಬ್ಸಿಡಿ ನೀತಿಯಿಂದ ಹಾಗೂ ಕೃಷಿವಿಜ್ಞಾನ ಒದಗಿಸಿರುವ ಸುಧಾರಿತ ಅಂಶಗಳಿಂದ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. 50 ವರ್ಷಗಳಲ್ಲಿ ಆಹಾರ ಉತ್ಪಾದನೆಯಲ್ಲಿ ನಾವು ಸಾಧಿಸಿರುವ ಪ್ರಗತಿ ನಮ್ಮ ಜನಸಂಖ್ಯೆಯಲ್ಲಿ ಆಗುತ್ತಲೇ ಬಂದಿರುವ ಹೆಚ್ಚಳ ವನ್ನು ಗಮನಿಸಿದಾಗ ಅದ್ಭುತವೆನಿಸುವಂಥದು. ಆದರೆ ಈ ಸರಕಾರದ ಸಹಾಯ ದಿಂದ ಉಂಟಾಗಿರುವ ಪ್ರಯೋಜನಗಳನ್ನು ಗಮನಿಸಿ ಆ ಸಹಾಯದ ಅರ್ಧಾಂಶ ವನ್ನಾದರೂ ಸಾರ್ವಜನಿಕ ಹಿತಕ್ಕಾಗಿ ಮರಳಿ ಪಡೆಯಬೇಕು ಎನ್ನುವ ನಿರ್ಧಾರ ವಿರದುದರಿಂದ ಈ ಸಹಾಯ ಪಡೆಯುವ ಕೃಷಿ ಸಮುದಾಯ 'ಸಹಾಯ' ತನ್ನ ಹಕ್ಕು ಎಂಬ ತಪ್ಪು ಕಲ್ಪನೆಯನ್ನು ಬೆಳೆಸಿಕೊಳ್ಳುವಂತಾಗಿ ಸಾರ್ವಜನಿಕ ಬೊಕ್ಕಸಕ್ಕೆ ಇದೂ ಒಂದು ಹೊರೆಯಾಗುತ್ತದೆ. ಇಲ್ಲಿ ನಾವು ನೆನಪಿಡಬೇಕಾದುದು ಕೃಷಿಕ್ಷೇತ್ರ ಇನ್ನೂ ಖಾಸಗಿ ವಲಯದಲ್ಲಿದೆ.

ಸಾರಿಗೆ ಮತ್ತು ವಿದ್ಯುತ್ ಸರಬರಾಜು ವ್ಯವಸ್ಥೆಗಳ ಸ್ಥಿತಿಯಲ್ಲಿ ಇಂದು ಕೇಳು ತ್ತಿರುವ ಖಾಸಗೀಕರಣದ ಮಾತುಗಳು ಯಾಕೆ ಬರುತ್ತಿವೆ ಎಂದು ವಿವರಿಸಲಷ್ಟೇ ಮೇಲಿನ ಉದಾಹರಣೆ. ಕರ್ನಾಟಕ ಸಾರಿಗೆ ಸಂಸ್ಥೆ ಕೋಟಿಗಟ್ಟಲೆ ನಷ್ಟವನ್ನನು ಭವಿಸುತ್ತಿರುವುದರಿಂದ ಖಾಸಗೀಕರಣ ಅದಕ್ಕೆ ಪರಿಹಾರವೆನಿಸಬಹುದು ಎಂಬ ತಿಳುವಳಿಕೆ ಬೆಳೆಯುತ್ತಿರುವುದರಿಂದ ಈ ರೀತಿಯ ಚಿಂತನೆ. ಹಿಂದೆ ಖಾಸಗೀ ವ್ಯವಸ್ಥೆ ಗಳಿಂದ ಸಾರ್ವಜನಿಕ ಹಿತರಕ್ಷಣೆಯಾಗದು, ಅಂತಹ ಆದರ್ಶ ಸರಕಾರದ ಕರ್ತವ್ಯ ನೀತಿಯಲ್ಲಿ ಬರುವುದರಿಂದ ರಾಷ್ಟ್ರೀಕರಣ ಅಗತ್ಯವೆಂದು ಸಾರಿಗೆ ವ್ಯವಸ್ಥೆಯನ್ನು ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಸರಕಾರವೇ ವಹಿಸಿಕೊಂಡಿರುವುದು. ಈಗ ಆಗಿರು ವುದೇನು ? ಸರಕಾರದ ಸ್ವಾಮ್ಯ ಕೆಲಸಗಾರರಿಗೆ ಅವರವರ ವೈಯಕ್ತಿಕ ಹಾಗೂ ಕೌಟುಂಬಿಕ ಸ್ವಾರ್ಥವನ್ನು ಕಾದುಕೊಂಡು ಬರಲು ಕೆಲಸದ ಭದ್ರತೆಯನ್ನು ಒದಗಿ ಸಿರುವುದು. ಖಾಸಗೀ ವಲಯದಂತೆ ಯಾವ ಕೆಲಸಗಾರನನ್ನೂ ಅನ್ಯಾಯ ಅದಕ್ಷತೆ ಗಳಿಗಾಗಿ ಕೆಲಸದಿಂದ ತೆಗೆಯುವುದು ಕಷ್ಟ ಸಾಧ್ಯವೆನ್ನುವಂತಹ ರಕ್ಷಣೆ. ಇದಕ್ಕೆ ಕಾರ್ಮಿಕ ಸಂಘಟನೆಗಳ ಬೆಂಬಲವೂ ಇರುವಾಗ ಈ ವ್ಯವಸ್ಥೆಯನ್ನು ಲಾಭದ ಮಾತಂತಿರಲಿ, 'ಸಾರ್ವಜನಿಕ' ಹಿತಗಳಿಂದಲೂ ರಕ್ಷಿಸುವುದು ಕಷ್ಟದ ಮಾತಾಗು ವಂತೆ ಇಂದಿನ ಪರಿಸ್ಥಿತಿ ಇದೆ. ಈ ವ್ಯವಸ್ಥೆಯನ್ನು ನಿರ್ವಹಿಸುವಾಗ 'ಸೋರಿ' ಹೋಗುವ ಮಾತು ಆಗಾಗ ಕೇಳಿಬರುತ್ತಿದೆ. ಇದನ್ನು ತಡೆಗಟ್ಟುವ ಉಪಾಯಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗಿವೆ ಎಂದು ಯಾರೂ ಯೋಚಿಸುವುದಿಲ್ಲ. ಸುಖ ಪ್ರಯಾಣ, ದಕ್ಷ ಕಾರ್ಯನಿರ್ವಹಣೆ ಇವುಗಳಿಂದ ಯಶಸ್ವಿಯಾಗಿ ಈ ವ್ಯವಸ್ಥೆ ಯನ್ನು ನಿರ್ವಹಿಸುವಂತಾದರೆ, ಆಗಾಗ ದೇಶದ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿ

ಮಾಡಲೇಬೇಕಾದ ಪ್ರಯಾಣದ ದರ ಏರಿಕೆಯನ್ನು ಸಾರ್ವಜನಿಕರು ವಿರೋಧಿಸ ಲಾರರು. ವಿರೋಧಿಸಿದರೂ ನ್ಯಾಯವಾದ ಕಾರಣಗಳನ್ನು ಕೊಟ್ಟು ಈ ವಿರೋಧದ ಕಾವು ತಣ್ಣಗಾಗುವಂತೆ ಮಾಡುವುದು ಸಾಧ್ಯ. ಆದರೆ, ಅಧಿಕಾರದ ಸೂತ್ರ ವಹಿಸಿರುವ ರಾಜಕೀಯ ಶಕ್ತಿಗಳ ರಾಷ್ಟ್ರನಿಷ್ಠೆಗೆ ಹೊರತಾದ ಭ್ರಷ್ಟಚಿಂತನೆ, ಕೆಲಸ ಗಾರರ ಅದಕ್ಷತೆ ಹಾಗೂ ಸಮುದಾಯದ 'ಭ್ರಷ್ಟ' ಚಿಂತನೆ ಇವುಗಳಿಂದ ಸೋರಿ ಹೋಗುವ ವ್ಯವಸ್ಥೆಯ ಆದಾಯವನ್ನು ನಮ್ಮ ರಾಷ್ಟ್ರೀಯವೆನಿಸಬೇಕಾದ ಪರಿಕಲ್ಪನೆ ಗಳಿಂದ ನೋಡುವಾಗ, ಉತ್ಕೃಷ್ಟ ಸೇವೆ, ರಾಷ್ಟ್ರನಿಷ್ಠೆಗೆ ಪೂರಕವೆನಿಸುವ ತಿಳಿವಳಿಕೆ ಇದ್ದು, ಪ್ರಾಮಾಣಿಕವೆನಿಸುವ ಕರ್ತವ್ಯನಿಷ್ಠೆಯನ್ನು ವ್ಯವಸ್ಥೆಯ ಎಲ್ಲ ಹಂತಗಳಲ್ಲೂ ಪಾಲಿಸಿಕೊಂಡು ಬಂದರೆ ಖಾಸಗೀಕರಣದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಾವು ಕಾಣುತ್ತಿರುವ 'ಒಮ್ಮೆ ರಾಷ್ಟ್ರೀಕರಣ ಮತ್ತೊಮ್ಮೆ ಖಾಸಗೀಕರಣ' ಎಂಬ ಆಡಳಿತೆಯ ಇತಿಹಾಸದ ತಿರುವುಗಳನ್ನು ಸಹಿಸ ಬೇಕಾದ ಆಗತ್ಯ ಕಂಡುಬರುತ್ತಿರಲಿಲ್ಲ. ಒಳ್ಳೆಯ ಸಾರ್ವಜನಿಕ ಸೇವೆಗೆ ಮಾದರಿ ಯೆಂದು ನಾನು ಮುಂಬಯಿ ಮಹಾನಗರದ ಸಾರಿಗೆ ವ್ಯವಸ್ಥೆಯಾದ ಬಿ.ಇ.ಎಸ್.ಟಿ. ಸಂಸ್ಥೆಯ ಉದಾಹರಣೆ ಕೊಡಲಿಚ್ಛಿಸುತ್ತೇನೆ. ಈ ಸಂಸ್ಥೆಯ ವ್ಯವಹಾರದ ಲಾಭ ನಷ್ಟದ ಸಂಖ್ಯಾವಿವರ ಈ ಲೇಖನ ಬರೆಯುವ ಸಂದರ್ಭದಲ್ಲಿ ಲೇಖಕನಿಗೆ ದೊರಕಿಲ್ಲ ವಾದರೂ ಈ ಸಾರಿಗೆ ವ್ಯವಸ್ಥೆಯ ಸೇವೆಯ ಉತ್ಕೃಷ್ಟತೆ ಅನುಭವವೇದ್ಯ ವಾಗುವಂಥದು. ಪ್ರತಿವರ್ಷ ಅವರು ಆಚರಿಸುವ ಬಿ.ಇ.ಎಸ್.ಟಿ. ದಿನಾಚರಣೆ ಯಂದು ಸಂಸ್ಥೆ ಜಾಹೀರುಪಡಿಸುವ ವ್ಯವಸ್ಥೆಯ ಸಾಧನೆಯ ವಿವರಗಳು ಅಭಿಮಾನ ಮೂಡಿಸುವಂಥವು. ರಾಜ್ಯ ಸ್ವಾಮ್ಯದ ಈ ವ್ಯವಸ್ಥೆಯಲ್ಲಿ ಟಿಕೇಟು ಪಡೆಯದೆ ಪ್ರಯಾಣಿಸುವುದು ಸಾಧ್ಯವೇ ಇಲ್ಲ. ಸಾಧ್ಯವಾದರೂ ಸಿಕ್ಕಿಬಿದ್ದಾಗ ಅನುಭವಿಸ ಬೇಕಾಗಿ ಬರುವ ದಂಡ ಅವಮಾನಗಳು ಅಸಹ್ಯ ಎನಿಸುವಂತೆ ಅಲ್ಲಿ ಮೇಲ್ವಿಚಾರಣೆ ಇದೆ. ಬಸ್ಸು ನಿಲುಗಡೆಯ ಸ್ಥಾನಗಳಲ್ಲಿ ಹಠಾತ್ತಾಗಿ ಕಾಣಸಿಗುವ ಟಿಕೆಟ್ ಪರಿಶೀಲಕ ಸಿಬ್ಬಂದಿಗೆ ಬಸ್ಸಿನ ಕಂಡಕ್ಟರ್ ವರ್ಗವೂ, ಪ್ರಯಾಣಿಕರೂ ಹೆದರಿಕೊಳ್ಳುವ ಸ್ಥಿತಿ ಉಂಟಾಗಿರುವುದು ಸೇವೆಯ ದಕ್ಷತೆಯ ಕಾರಣದಿಂದಾಗಿ. ಮುಂಬಯಿ ಮಹಾ ನಗರದ ಸಾರಿಗೆ ವ್ಯವಸ್ಥೆ ಪ್ರತಿದಿನ ಲಕ್ಷಗಟ್ಟಲೆ ಜನರ ಪ್ರಯಾಣಕ್ಕೆ ನೆರವಾಗುವ ಸಂಸ್ಥೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಅಲ್ಲಿನ ಕಾರ್ಮಿಕ ವರ್ಗಕ್ಕೂ ಭದ್ರತೆ ಹಾಗೂ ಸಂಘಟನೆಯ ಬಲದ ನೆರವು ಎರಡೂ ಇವೆ. ಸರಕಾರದ ಅಂಗ ಸಂಸ್ಥೆಯ ಈ ವ್ಯವಸ್ಥೆಗೆ ಈ ದಕ್ಷತೆ ಹೇಗೆ ಬಂತು ಎಂದು ಯೋಚಿಸುವಾಗ ಇಲ್ಲಿ ಒತ್ತಾಯಪೂರ್ವಕವಾಗಿಯಾದರೂ ಕರ್ತವ್ಯನಿಷ್ಠೆಯನ್ನು ಪ್ರಚೋದಿಸುವ ಕಾರ್ಯ ನಿರ್ವಹಣಾ ನೀತಿ ಇದೆಯೆಂಬುದನ್ನು ನಾವು ಗಮನಿಸಬೇಕು. ಮುಂಬಯಿಯ ಸಾರಿಗೆ ವ್ಯವಸ್ಥೆಯನ್ನು ಮುಂಬಯಿಯನ್ನು ಸಂದರ್ಶಿಸಿದ ಯಾವ ನಾಗರೀಕನೂ ಅಲ್ಲಗಳೆಯುವುದಿಲ್ಲ. ನಾಗರಿಕ ಪ್ರಜ್ಞೆಯಿಂದ ತಾನಾಗಿಯೇ ಬರಬೇಕಾದ ಕರ್ತವ್ಯ

ನಿಷ್ಠೆ ಇಲ್ಲಿ ಒತ್ತಾಯದಿಂದಲೂ, ಮುಂಬಯಿಯ ಜೀವನಕ್ರಮದಿಂದಲೂ ಬರುತ್ತಿರುವ ಕಾರಣ 'ಅದಕ್ಷತೆ'ಯ ಮಾತು ಅಥವಾ ಖಾಸಗೀಕರಣದ ಮಾತು ಮುಂಬಯಿಯಲ್ಲಿ ಬರುತ್ತಿಲ್ಲ.

ಕರ್ನಾಟಕದ ಸಾರಿಗೆ ವ್ಯವಸ್ಥೆಯಲ್ಲಿ ಏನಾಗುತ್ತಿದೆ? ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಪ್ರಯಾಣಿಕರ, ಬಸ್ಸುಗಳ ಸಂಖ್ಯೆಯ ಪ್ರಗತಿ ಆಗುತ್ತಲೇ ಇದೆಯಾದರೂ ದಕ್ಷ ಕಾರ್ಯ ನಿರ್ವಹಣೆ ಯಶಸ್ವಿಯಾಗಿದ್ದರೆ ಟಿಕೇಟು ಪಡೆಯದೆ ಪ್ರಯಾಣಿಸಲು ಸಾಧ್ಯವಾಗುವ, ಕಂಡಕ್ಟರನಿಗೆ ಸ್ವಲ್ಪ ಹಣ ಕೊಟ್ಟು ಟಿಕೇಟು ಬೇಡದೆ ಪ್ರಯಾಣಿಸಲು ಸಾಧ್ಯವಾಗುವ, ಕಂಡಕ್ಟರರ ದುರ್ವರ್ತನೆಯ ಬಗ್ಗೆ ದೂರುವ, ಹಲವಾರು ಪತ್ರಗಳು ಆಗಿಂದಾಗ ನಮ್ಮ ದೈನಿಕಗಳಲ್ಲಿ ಪ್ರಕಟವಾಗುವ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಕೆಲಸಗಾರರ ವೈಯಕ್ತಿಕ ಹಾಗೂ ಕೌಟುಂಬಿಕ ಸ್ವಾರ್ಥ ವ್ಯವಸ್ಥೆಯಿಂದ ಸೋರಿ ಹೋಗುವ ಹಣಕ್ಕೆ ದಾರಿ ತೋರಿಸುತ್ತಿರಲಿಲ್ಲ. ಇದರಂತೆಯೇ ಅಧಿಕಾರಿ ವರ್ಗದಲ್ಲೂ ಅದಕ್ಕೂ ಮೇಲಿನ ರಾಜಕೀಯ ಹಸ್ತಕ್ಷೇಪದಿಂದಾಗಿಯೂ ಬಸ್ಸುಗಳ ಬಿಡಿ ಭಾಗಗಳ ಖರೀದಿಯಲ್ಲಿ ಕಾರ್ಯ ನಿರ್ವಹಣೆಯ ವಿಧಿವಿಧಾನಗಳಲ್ಲಿ ಸರಕಾರದ ಹಣ ಸೋರಿ ಹೋಗುವುದಷ್ಟೇ ಅಲ್ಲ, ಸಾಧ್ಯವಾಗಬಹುದಾದ ಆದಾಯಕ್ಕೂ ತಡೆ ತರುವ ದಾರಿಗಳ ಕುರಿತು ಕಳವಳ ವ್ಯಕ್ತಪಡಿಸುವ ಅವಕಾಶ ಬರುತ್ತಿರಲಿಲ್ಲ. ಕಾರ್ಯದಕ್ಷತೆ, ಸರ್ಕಾರ ಸ್ವಾಮ್ಯದ ವ್ಯವಸ್ಥೆ ನಿರೀಕ್ಷಿಸಲೇಬೇಕಾದ ಪ್ರಾಮಾಣಿಕವಾದ ರಾಷ್ಟ್ರದ ಹಿತ ನನ್ನ ಹಿತವೂ ಹೌದು ಎನ್ನುವ ನಾಗರಿಕ ಪ್ರಜ್ಞೆ, ಕೆಲಸಗಾರರಿಂದ ಆರಂಭಿಸಿ ಅಧಿಕಾರದ ಎಲ್ಲ ಹಂತಗಳ ತನಕ ವ್ಯಾಪಿಸದೆ ಹೋಗುವಾಗ ಸೋರಲಿಕೆಯ ನಷ್ಟವಷ್ಟೆ ಅಲ್ಲ, ಅದಕ್ಷ ಕಾರ್ಯ ನಿರ್ವಹಣೆಯ ನಷ್ಟವೂ 'ಖಾಸಗೀಕರಣ'ದ ಮಾತುಗಳಿಗೆ ಎಡೆ ಮಾಡಿಕೊಡುತ್ತಿವೆ. ಇದನ್ನು ವಿರೋಧಿಸುವ ಕಾರ್ಮಿಕ ಸಂಘಟನೆಗಳ ಮಾತುಗಳು ಬೆಲೆ ಕಳೆದುಕೊಳ್ಳುವುದು ಇಂತಹ ಸೋರುವಿಕೆಯನ್ನು ತಡೆಗಟ್ಟುವ ಸಾಮರ್ಥ್ಯ ತಮಗಿದ್ದೂ ಅದನ್ನು ನೋಡಿಯೂ ನೋಡದಂತೆ ತಮ್ಮ ನಾಗರಿಕ ಪ್ರಜ್ಞೆಯಲ್ಲೂ ಕೊರತೆ ಇದೆ ಎಂದು ತೋರಿಸಿಕೊಡುವಾಗ. ಬೆಂಗಳೂರಿನ ಶಹರದ ಸಾರಿಗೆಯನ್ನು ನಿರ್ವಹಿಸುವ ಬಿ.ಟಿ.ಎಸ್. ಅಧಿಕಾರಿಗಳು ಮುಂಬಯಿಯ ಬಿ.ಇ.ಎಸ್.ಟಿ. ಸಂಸ್ಥೆಯ ಕಾರ್ಯ ವಿಧಾನದ ಅನುಕರಣೆಯನ್ನು– ಟಿಕೇಟು ಕೊಡುವ ವ್ಯವಸ್ಥೆ, ಪ್ರಯಾಣಿಕರು ಬಸ್ಸನ್ನು ಹತ್ತುವ ಇಳಿಯುವ ರೀತಿ, ಪ್ರಯಾಣಿಸಬಹುದಾದ ಪ್ರಮಾಣಿಕರ ಮಿತಿ, ಟಿಕೇಟು ಪಡೆಯದೆ ಪ್ರಯಾಣಿಸುವವರ 'ಚೆಕಿಂಗ್' ವ್ಯವಸ್ಥೆ ಇವನ್ನೆಲ್ಲ ಏಕೆ ಅನುಸರಿಸುತ್ತಿಲ್ಲವೆಂಬ ಆಶ್ಚರ್ಯ ಈ ಲೇಖಕನಿಗಿದೆ.

ವಿದ್ಯುತ್ ಸರಬರಾಜು ವ್ಯವಸ್ಥೆಯ ಕಾರ್ಯ ನಿರ್ವಹಣೆ ಇನ್ನೊಂದೇ ರೀತಿಯದು. ಹೆಚ್ಚುತ್ತಿರುವ ಜನಸಂಖ್ಯೆ, ಹೆಚ್ಚುತ್ತಿರುವ ಬೇಡಿಕೆಗಳಿಂದಾಗಿ ಉತ್ಪಾದನೆ ಕಡಿಮೆಯಾಗಿ ಈ ವ್ಯವಸ್ಥೆ ಕಂಗೆಡುತ್ತಿದೆ ಎಂಬ ಮಾತು ನಿಜವಾದರೂ ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ವಿದ್ಯುತ್ ಉತ್ಪಾದನೆಗೆ ಕೊಟ್ಟ ಪ್ರಾಶಸ್ತ್ಯ,

ಕಡಮೆ ಎಂಬ ಸತ್ಯವನ್ನು ಗಮನಿಸಿದರೂ ಈ ವ್ಯವಸ್ಥೆಯ ಕಾರ್ಯದಕ್ಷತೆಯ ಬಗ್ಗೆ ಅನುಮಾನ ಮೂಡುವಂತೆ ಸೋರಿ ಹೋಗುತ್ತಿರುವ ವಿದ್ಯುತ್ ಶಕ್ತಿಯ ಗಮನಾರ್ಹ ಅಂಶದ ಬಗ್ಗೆ ಚರ್ಚೆಯಾಗುವ ಪರಿಸ್ಥಿತಿ ಬಂದಿದೆ. ಈ ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾಗುತ್ತಿಲ್ಲವೆಂದು ಖಾಸಗೀಕರಣದ ಮಾತುಗಳೂ ಕೇಳಿಬರುತ್ತಿವೆ. ಕೊಜೆಂಟರ್ಕ್ಸ್ ಯೋಜನೆಗಳಂತಹ ಯೋಜನೆಗಳ ಅನುಷ್ಠಾನ ನಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಸಾಧ್ಯ ಎಂದು ರಾಜಕೀಯ ಸೂತ್ರ ವಹಿಸಿದವರು ಹೇಳುತ್ತಿರುವಾಗ ಪರಿಸರವಾದಿಗಳು ಸೋರಿ ಹೋಗುತ್ತಿರುವ ವಿದ್ಯುತ್ ಉತ್ಪಾದನೆಯ ಗಮನಾರ್ಹ ಅಂಶವನ್ನು ತಡೆಗಟ್ಟಲು ಯಾಕೆ ಸಾಧ್ಯವಾಗುತ್ತಿಲ್ಲ ಎಂದು ಕೇಳುತ್ತಿದ್ದಾರೆ. ಈ ಸೋರಿ ಹೋಗುವ ವಿಧಾನಗಳಾವುವು ? ಸಾಗಾಟದಲ್ಲಿ ನಷ್ಟವಾಗುವ ವಿದ್ಯುತ್, ಇದು ನಮ್ಮ ರಾಜ್ಯದಲ್ಲಿ ಇತರ ರಾಜ್ಯಗಳಿಗಿಂತ ಕಡಿಮೆ ಪ್ರಮಾಣದಲ್ಲಿದೆ ಎಂಬ ಚರ್ಚಾಸ್ಪದವಾದ ಹೇಳಿಕೆಯೊಂದಿದೆ. ಆದರೆ ಸೋರಿ ಹೋಗುವ ಇತರ ವಿಧಾನಗಳನ್ನು ತಡೆಗಟ್ಟುವ ಯೋಗ್ಯ ಕಾರ್ಯ ನೀತಿಯನ್ನು ರೂಪಿಸಿಕೊಂಡಿದ್ದೇವೆ ಎಂದು ಯಾರೂ ಹೇಳುವುದಿಲ್ಲ. ಬಳಕೆದಾರರು ಹಾಗೂ ಕೆಳಸ್ತರದ ಕೆಲಸಗಾರರು ಕೂಡಿಕೊಂಡು ದುರ್ವ್ಯವಹಾರ ನೀತಿಯಿಂದ–ಮೀಟರ್‌ಗಳ ಅಸಮರ್ಪಕ ಬಳಕೆ, ಕಿಂಚಿತ್ ಹಣದಾಸೆಗೆ ನೇರವಾಗಿ ದಾಖಲೆಯಿಂದೆ ವಿದ್ಯುತ್ ಒದಗಿಸುವುದು, ಕೃಷಿಕರಿಗಾಗಿ ಕೊಡುವ ವಿದ್ಯುತ್‌ನ ದುರ್ಬಳಕೆ, ನೌಕರ ವರ್ಗಕ್ಕೆ ದೊರಕುವ ಉಚಿತ ವಿದ್ಯುತ್ ಸೌಲಭ್ಯದ ದುರ್ಬಳಕೆ ಇವೆಲ್ಲ ವಿದ್ಯುತ್ ಹಾಗೂ ಅದರಿಂದ ದೊರಕಬೇಕಾದ ಆದಾಯ ಸೋರಿ ಹೋಗುವ ದಾರಿಗಳು.

ಭಾರತದ ಉತ್ತರದ ರಾಜ್ಯಗಳಲ್ಲಿ ಸೋರಿ ಹೋಗುವ ವಿದ್ಯುತ್‌ನ ಪ್ರಮಾಣ ಇನ್ನಷ್ಟು ಹೆಚ್ಚು ಎಂಬ ವಾದವನ್ನೂ ನಾವು ಕೇಳುತ್ತಿದ್ದೇವೆ. ಎಂದರೆ ಸೋರಿ ಹೋಗಲು ನೆರವಾಗುವುದು ಸಾರ್ವತ್ರಿಕವಾದ ಒಂದು ನೀತಿ ಎಂಬ ಭಾವನೆ ಬಲಿಯಲು ಕಾರಣವಾಗಿರುವುದು ಪ್ರಜಾಪ್ರಭುತ್ವದಲ್ಲಿ ಆ ವ್ಯವಸ್ಥೆಯನ್ನು ಪೋಷಿಸ ಬೇಕಾದ ನಾಗರಿಕ ಪ್ರಜ್ಞೆಯ ಕೊರತೆಯನ್ನೆ ಬಿಂಬಿಸುತ್ತದೆ. ಬೀದಿಯಲ್ಲಿ ಎಂಜಲನ್ನು ಕಂಡ ಕಂಡಲ್ಲಿ ಉಗುಳುವುದೂ ನಮ್ಮ ಮನೆಯೊಳಗೆ ಅದೇ ರೀತಿ ಉಗುಳುವುದೂ ಒಂದೇ ಎಂದು ತಿಳಿದಾಗ ನಾಗರಿಕ ಪ್ರಜ್ಞೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನನ್ನ ರಾಷ್ಟ್ರದ, ನನ್ನ ರಾಜ್ಯದ, ಸಾರ್ವಜನಿಕ ಹಿತ ನನ್ನ ಕರ್ತವ್ಯ ಎಂಬ ತಿಳಿವಳಿಕೆ ಇದ್ದಾಗ ಮಾತ್ರ ಯಾವುದೇ ವ್ಯವಸ್ಥೆಯಲ್ಲಿ ಅಕ್ರಮ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ. ಇದ್ದರೂ ಅವು ಬೇಗನೇ ಬೆಳಕಿಗೆ ಬಂದು ಶಿಕ್ಷೆಯ ದಾರಿ ನೋಡುವ ಪ್ರಕರಣಗಳಾಗುತ್ತವೆ. ಹೀಗಿದ್ದಲ್ಲಿ ಖಾಸಗೀಕರಣ ಒಳ್ಳೆಯದೇ ರಾಷ್ಟ್ರೀಕರಣ ಒಳ್ಳೆಯದೇ ಎಂಬ ಚರ್ಚೆಯೂ ಉದ್ಭವಿಸುವುದಿಲ್ಲ. ಪ್ರಜಾಪ್ರಭುತ್ವವನ್ನು ಪೋಷಿಸಿ ಉಳಿಸಬೇಕಾದ ನಾಗರಿಕ ಪ್ರಜ್ಞೆ, ಒಂದೇ ಪ್ರಾಮಾಣಿಕವಾದ ತಿಳಿವಳಿಕೆಯಿಂದ ಬರಬೇಕು. ಇಲ್ಲವೇ

ಸರ್ವಾಧಿಕಾರ ಪ್ರವೃತ್ತಿಯ ಆಡಳಿತ ವಿಧಿಸಬಹುದಾದ ಶಿಕ್ಷೆಯ ಭಯದಿಂದ ಬರಬೇಕು. ಇವೆರಡೂ ಇರದ ತ್ರಿಶಂಕು ಸ್ಥಿತಿ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಮಗೆ ಅನುಭವ ವೇದ್ಯವಾಗಿದೆ. ನಾಡಿನ ಹಿರಿಯ ಸಾಹಿತಿ ಶಿವರಾಮ ಕಾರಂತರು ಯಾವಾಗಲೂ ಹೇಳುತ್ತಿರುವಂತೆ 'ನಾವು ದೊಡ್ಡವರಾದರೆ ಮಾತ್ರ ನಮ್ಮ ನಾಡು ದೊಡ್ಡದಾದೀತು'.

ಈ ಸಂಚಯದ ಲೇಖಕರು

- **ಎನ್. ಕೆ. ಹನುಮಂತಯ್ಯ**, ನಾಗರಘಟ್ಟ - 572 224 ತಿಪಟೂರು ತಾ॥ ತುಮಕೂರು ಜಿಲ್ಲೆ
- **ಸಿ. ವಿ. ಶೇಷಾದ್ರಿ**, ರಾಮ ಮಂದಿರ, ಹೊಳವನಹಳ್ಳಿ-572 121 ಕೊರಟಗೆರೆ ತಾ॥, ತುಮಕೂರು ಜಿಲ್ಲೆ
- **ಡಾ. ಸಿ. ಕೆ. ಶಶಿಕಲಾ**, 2265/19 ಭಾರತಿ, ಜಯಲಕ್ಷ್ಮೀ ಪುರಂ ಮೈಸೂರು–570 012
- **ಗೀತಾ ಡಿ.ಸಿ.**, ದೊಡ್ಡಹೆಜ್ಜಾಜಿ ಅಂಚೆ, ಬೆಂಗಳೂರು ಗ್ರಾಮಾಂತರ-561204
- **ವ್ಯಾಸರಾಯ ಬಲ್ಲಾಳ**, 'ಉತ್ತರಾಯಣ' 1064, ಕುಮಾರಸ್ವಾಮಿ ಬಡಾವಣೆ ಮೊದಲ ಹಂತ, ಬೆಂಗಳೂರು - 560 078
- **ಸುರೇಶ ಬಿ.**, 1046, 25ನೇ ಮೇನ್, 14ನೇ ಕ್ರಾಸ್, ಬನಶಂಕರಿ 3ನೇ ಹಂತ, ಬೆಂಗಳೂರು - 560 070
- **ರವಿಕುಮಾರ ಕಾಶಿ**, ಯು-32, 4ನೇ ಕ್ರಾಸ್, ಪೈಪ್‌ಲೇನ್, ಮಲ್ಲೇಶ್ವರಂ ಬೆಂಗಳೂರು–560 003

ವ್ಯಾಪಾರೀ ಸಿನಿಮಾಗಳು – ಕಥನ ಸವಾಲುಗಳು

○ ○

ಸುರೇಶ ಬಿ.

ಕಥೆ ಹೇಳುವ ಮತ್ತು ಕಥೆ ಕೇಳುವ ಚಟ ಮನುಷ್ಯನ ಮೈಗೇ ಅಂಟಿಕೊಂಡದ್ದು. ಆಗದೆ ಹೋದದ್ದನ್ನ ಆಗಿದೆ ಎಂತಲೋ, ಆಗಿದ್ದನ್ನು ಮತ್ತಷ್ಟು ವೈಭವೀಕರಿಸುತ್ತಲೋ, ಯಾರೋ ಮಾಡಿದ ಸಾಹಸವನ್ನು ತಾನೇ ಮಾಡಿದೆನೋ ಎಂಬಂತೆ ವರ್ಣರಂಜಿತವಾಗಿ ವಿಸ್ತರಿಸುತ್ತಲೇ ಇರುವ ಮನುಷ್ಯನ ಪ್ರವೃತ್ತಿ ಆದಿಮಾನವನ ಕಾಲದಿಂದ ಉಳಿದುಬಂದಿದೆ. ಈ ಪ್ರವೃತ್ತಿ ಅತಿ ಹೆಚ್ಚಾಗಿದ್ದುದ್ದು ಭಾರತೀಯರಲ್ಲೇನೋ ಎಂಬಂತೆ ವಿಪುಲ ಪುರಾಣ ಕಥೆಗಳು ಅದಕ್ಕೆ ದುಪ್ಪಟ್ಟು ದೇವಾಸು ದೇವತೆಗಳು ಇದ್ದಾರೆ. "ಈ ಪ್ರವೃತ್ತಿಯ ಹಿಂದಿರುವುದು ಸದಾ ಮಿಥ್‌ಗಳನ್ನು ಬಯಸುವ ಮನಸ್ಸು" ಎಂದು ರೋಲಾಂಡ್ ಬಾರ್ಥಸ್ ಅಭಿಪ್ರಾಯಪಡುತ್ತಾನೆ.* ಈ ಮಿಥ್‌ಗಳನ್ನು ಸೃಷ್ಟಿಸುತ್ತವೆ ಎಂಬ ಕಾರಣಕ್ಕಾಗಿಯೇ ಪುರಾಣ ಪ್ರವಚನ, ಹರಿಕಥೆ, ಜಾನಪದ ಕಥನ ಆಟಗಳು, ಕಾವ್ಯ, ಕಾದಂಬರಿ, ನಾಟಕ, ಸಿನಿಮಾಗಳು ಇಂದು ಜನಪ್ರಿಯವಾಗಿವೆ.

"Able to be carried by articulated language, spoken or written, fixed or moving images, gestures and ordered mixture of all these substances Narratives are present . . . . in all clessess, all human groups, have their narratives, enjoyment of which is very often shared by men with different, even opposing cultural backgrounds. Caring nothing for the division of good & bad . . . . . narrative its international. It is simply there, like life itself"* ಎನ್ನುವ ಮಾತು ಕಥನ ಪ್ರಕಾರಗಳ ಉಳಿವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತದೆ. ಜನ, ದೇಶ, ಜಾತಿಯ ಎಗ್ಗಿಲ್ಲದೆ ಕಥನ ಪ್ರಕಾರ ಬದುಕುತ್ತಲೇ ಇರುತ್ತದೆ ಎಂದೂ ತಿಳಿಸುತ್ತದೆ.

ಹಾಗೆಂದರೆ 'ಹೇಗೂ ಬದುಕುವ' ಕಥನವು ವಿಶ್ಲೇಷಣೆ, ಚರ್ಚೆಗೆ ಅನರ್ಹವೆ ಎಂಬ ಅನುಮಾನ ಸಹಜವಾಗಿಯೇ ಹುಟ್ಟುತ್ತದೆ. ಆದರೆ ಭಾರತದಂತಹ

---

* Introduction to the structural analysis of Narrative, ROLAND BARTHS.

ಮೂರನೆಯ ಜಗತ್ತಿನಲ್ಲಿ ಕಥೆ ಹೇಳುವ-ಕೇಳುವ ಸ್ವಭಾವ ಎರಡು ಮಗ್ಗುಲುಗಳನ್ನಲ್ಲದೆ ಅದು ಮೂಡಿಸುವ ಪರಿಣಾಮವನ್ನು ಕುರಿತ ಚಿಂತನೆ ಅತ್ಯಗತ್ಯ. ಹಾಗಲ್ಲವಾದರೆ ಇಂದು ಇಡೀ ಭಾರತವನ್ನೇ (ವಿಶೇಷವಾಗಿ ಮಧ್ಯಮ ಹಾಗೂ ಕೆಳ ವರ್ಗದ ಜನರನ್ನು) ತನ್ನ ಮೋಡಿಗೆ ಸಿಲುಕಿಸಿರುವ ಸಿನಿಮಾದಂತಹ 'ಮನರಂಜನ'* ಮಾಧ್ಯಮದ ಒಳಸುಳಿಗಳು ನಮಗೆ ದಕ್ಕದೆ ಹೋಗಬಹುದು.

ಸಿನಿಮಾ ಎಂಬ ಸುರಾಪಾನ

ಕತ್ತಲ ಕೋಣೆಯ ಒಳಗೆ ಕುಳಿತವ ಅಪ್ಪಿತಪ್ಪಿಯೂ ಅತ್ತಿತ್ತ ನೋಡದೆ ತನ್ನನ್ನೇ ನೋಡುವಂತೆ ಮಾಡುವ ಬೆಳ್ಳಿ ಪರದೆ. ಆ ಪರದೆಯ ಮೇಲೆ ಸಹಜಾಕಾರಕ್ಕಿಂತ ದುಪ್ಪಟ್ಟು ಮುಪ್ಪಟ್ಟು ಹೆಚ್ಚಿರುವ ಮನುಷ್ಯರ ಬಿಂಬಗಳು. ಈ ಬಿಂಬಗಳ ಚಲನೆಗೆ ತಕ್ಕಂತೆ, ಕಿವಿಯನ್ನು ಮುಚ್ಚುವ ಶಕ್ತಿಯನ್ನುಳ್ಳ ಧ್ವನಿ ಪೆಟ್ಟಿಗೆಗಳಿಂದ ಹೊಮ್ಮುವ ಸಂಗೀತ–ಮಾತು. ನಿರಂತರ ಎರಡು-ಎರಡೂವರೆ ಗಂಟೆಗಳ ಕಾಲ ಕುಳಿತವನ ಮೈ ಮನಗಳನ್ನು ಆವರಿಸುವ ಕ್ರಿಯೆ. ಈ ಕ್ರಿಯೆಯನ್ನು ಹಿಡಿದಿರಿಸುವ ಕಥನ, ಆ ಕಥನದ ಹಿನ್ನೆಲೆಗೆ ಒಂದು ಕಥಾವಸ್ತು. ಇದು ಸಿನಿಮಾ ಎಂಬ ಮಾಯಾ ಜಗತ್ತು. ಈ ಮಾಯಾ ಜಗತ್ತಿನ ಅನುಭವ ಪಡೆಯಲು ಪ್ರೇಕ್ಷಕ ನೀಡುವುದು ಅತೀ ಕಡಿಮೆ ಬೆಲೆ. ಜೇಬಿಗೆ ನೋವಾಗದಂತಹ ದರದಲ್ಲಿ ಇಂತಹ ಮತ್ತು ಬರಿಸುವ ಮನರಂಜನೆ ದಕ್ಕುವುದರಿಂದಲೇ ಇಂದು ಸಿನಿಮಾ ಬಹು ಜನಪ್ರಿಯವಾಗಿದೆ. ಅಲ್ಲದೆ ಕೇವಲ ನೂರು ವರ್ಷಗಳ ಹಿಂದೆ ಹೊಸ ತಾಂತ್ರಿಕ ಆವಿಷ್ಕಾರವಾಗಿದ್ದ ಸಿನಿಮಾ ಇಂದು ಸಂಪೂರ್ಣ ಕಥಾ ಪ್ರಕಾರವಾಗಿದೆ. (ಈ ಮಾತಿಗೆ ಅಪವಾದ ಎಂಬಂತೆ ಕೆಲವು ಸಾಕ್ಷ್ಯಚಿತ್ರಗಳು ತಯಾರಾಗುತ್ತಿವೆಯಾದರೂ, ಅಲ್ಲಿಯೂ ಒಂದು ಕಥನ (Narrative) ಇಲ್ಲದಿದ್ದರೆ ಅದು ಸಂವಹನವಾಗದು ಸಾಕ್ಷ್ಯ ಚಿತ್ರದ ಒಡಲಿನಲ್ಲಿರುವ ಗಂಭೀರ ವಿಷಯವನ್ನು ತಿಳಿಸಲು ಸ್ಥೂಲ, ಸರಳ ಕಥೆಯೊಂದರ ಅವಶ್ಯಕತೆ ಇರಲೇಬೇಕು ಎಂಬುದು ಪ್ರಖ್ಯಾತ ಸಾಕ್ಷ್ಯಚಿತ್ರ ತಯಾರಕ ಜೋರಿಸ್ ಇವಾನ್ಸ್‌ನ ಅಭಿಪ್ರಾಯ. *) ಕಥಾಚಿತ್ರ ಎಂದು ಕರೆಸಿಕೊಳ್ಳದ ಜಾಹೀರಾತು ಚಿತ್ರಗಳು ಸಹ ಇಂದು ಕಿರುಕಥೆಯಿಲ್ಲದೆ ನೆನಪಿನಲ್ಲಿ ಉಳಿಯದು ಎಂಬ ಅಭಿಪ್ರಾಯ ಏವೆ. ಇದಕ್ಕೆ ಉದಾಹರಣೆ ಎಂಬಂತೆ ಆಟದ ಕೊನೆಯ ಚೆಂಡಿನಲ್ಲಿ ಸಿಕ್ಸರ್

---

*ಸಿನಿಮಾವನ್ನು ಮನರಂಜನಾ ಮಾಧ್ಯಮ ಎಂದಷ್ಟೇ ಹೇಳಲಾಗದು. ಅದು ಕಲಾ ಮಾಧ್ಯಮವೂ ಹೌದು. ಆದರೆ ನಮ್ಮಲ್ಲಿನ ಪ್ರಧಾನವಾಹಿನಿಯ ಚಲಚ್ಚಿತ್ರಗಳು ಹೆಚ್ಚು ಜನರನ್ನು ತಲುಪುತ್ತಿರುವುದರಿಂದ, ಹಾಗೂ ಅವುಗಳ ಅನುವಾದ ಇದೊಂದೇ ಮೌಲ್ಯವಾದುದರಿಂದ ಹೀಗೆ ಸಮರ್ಥನೆ.

Joris Ivans & Chaina

ಎತ್ತಿ ಗೆಲ್ಲುವ ಹುಡುಗನಿಂದಾದ ಆನಂದಕ್ಕೆ ಎಗ್ಗಿಲ್ಲದೆ ಕುಣಿವ ಹುಡುಗಿಯುನ್ನುಳ್ಳ ಕ್ಯಾಡ್‌ಬರೀಸ್ ಜಾಹೀರಾತು, ಮನೆಯುವರಿಗೆ ರೈಲಿನಲ್ಲಿ ಬರುವೆನೆಂದು ತಿಳಿಸಿ, ರೈಲು ಸಿಗದೆ ಸ್ಕೂಟರಿನಲ್ಲಿ ಬರುವ ಯುವಕನಿರುವ ಬಜಾಜ್‌ನ ಜಾಹೀರಾತು, ಹುಡುಗಿಯೊಬ್ಬಳು ಯಾರೊಡನೆಯೋ ಆಡುವ ಮಾತನ್ನು ತನ್ನೊಂದಿಗೇ ಆಡುತ್ತಿದ್ದಾಳೆ ಎಂದುಕೊಂಡು ಇಕ್ಕಟ್ಟಿನಲ್ಲಿ ಸಿಲುಕುವ ಮುದುಕನಿರುವ ಮೋಬೈಲ್ ಫೋನಿನ ಜಾಹೀರಾತು ಮುಂತಾದುವನ್ನು ನೆನೆಯಬಹುದು. ಒಟ್ಟಂದದಲ್ಲಿ ಇಂದು ಕಥೆ, ಇಲ್ಲದ ಸಿನಿಮಾಗಳಿಲ್ಲ. ಇಂತಹ ಕಥೆಗಳಿಗೆ ಅಲಂಕಾರದಂತೆ ಕೆಲಸಮಾಡುವ ಕಥನದಲ್ಲಿ ಎದುರಾಗುವ ಸವಾಲುಗಳನ್ನು, ವಿಶೇಷವಾಗಿ ಪ್ರಧಾನವಾಹಿನಿ ಚಿತ್ರದಲ್ಲಿ ಎದುರಾಗುವ ಸವಾಲುಗಳನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲು ಯತ್ನಿಸಿದ್ದೇನೆ.

ಆರಂಭದಲ್ಲಿ.....

ಲ್ಯೂಮಿಯೇರ್ ಸಹೋದರರು ತಮ್ಮ ಚಿತ್ರಗಳನ್ನು ಪ್ರದರ್ಶಿಸಿದ ಕಾಲದಲ್ಲಿ ರೈಲು ತಮ್ಮ ಮೇಲೆ ಬರುತ್ತಿದೆ ಎಂದು, ಕಾರ್ಖಾನೆಯಿಂದಾಚೆಗೆ ಬರುತ್ತಿರುವ ಕಾರ್ಮಿಕರ ದಂಡು ತಮ್ಮನ್ನು ತುಳಿದೀತು ಎಂದು ಜನ ಹೌಹಾರಿದ್ದರಂತೆ, ಪ್ರದರ್ಶನ ಮಂದಿರದಾಚೆಗೆ ಓಡಿದ್ದರಂತೆ.* ಹೀಗೆ 'ಬಿಂಬ'ಗಳ ಮೂಲಕವೇ ಪ್ರೇಕ್ಷಕರನ್ನೆಲ್ಲ ಸಮೂಹ ಸನ್ನಿಗೆ ಒಳಪಡಿಸಬಲ್ಲ ಸಾಧ್ಯತೆ ಇದೆ ಎಂಬುದನ್ನು ಕಂಡುಕೊಂಡ, ಆ ಕಾಲದ ಮನರಂಜನಾ ಮೇಸ್ತ್ರಿಗಳು ತಟ್ಟನೆ ಸಿನಿಮಾ ತಯಾರಿಸಲಾರಂಭಿಸಿದರು. ಭಾರತದಲ್ಲಿ ಜನಪ್ರಿಯತೆಯ ಮುಂಚೂಣಿಯಲ್ಲಿದ್ದ ವೃತ್ತಿ ರಂಗಭೂಮಿ ತನಗೆ ಸ್ಪರ್ಧೆಯಾಗುತ್ತಿರುವ ಈ ಹೊಸ ಮಾಧ್ಯಮ ಎಂತದ್ದು ಎಂದು ಚಿಂತಿಸುತ್ತ ಇರುವಾಗಲೇ ಸಿನಿಮಾ ರಂಗಭೂಮಿಯನ್ನು ಓವರ್‌ಟೇಕ್ ಮಾಡಿಯಾಗಿತ್ತು. ಆ ಕಾಲದ ಪಾಶ್ಚಾತ್ಯ ಮೂಕಿ ಚಿತ್ರಗಳಲ್ಲಿ ಹಾಸ್ಯ ಪ್ರಧಾನ ಅಂಶವಾಗಿದ್ದರೆ, ಭಾರತದ ಮೂಕಿ ಚಿತ್ರಗಳು ಭಾರತೀಯ ಪುರಾಣಗಳನ್ನು ತೋರತೊಡಗಿದವು. ಬಾಲಕೃಷ್ಣನ ಚಮತ್ಕಾರಗಳು ತೆರೆಯ ಮೇಲೆ ಸಿನಿಮಾ ತಂತ್ರದಿಂದಾಗಿ ವಾಸ್ತವ ಎಂಬಂತೆ ಕಂಡೊಡನೆ ಜನ ತೆರೆಗೇ ನಮಸ್ಕರಿಸತೊಡಗಿದರು, ಗಂಧದ ಕಡ್ಡಿ ಹಚ್ಚಿ ಆರತಿ ತೆಗೆಯಲಾರಂಭಿಸಿದರು.* ಇನ್ನು ಸಿನಿಮಾಗೆ ಮಾತಿನ ಶಕ್ತಿಯೂ ದಕ್ಕಿಬಿಟ್ಟಾಗ ಈ ಸಮೂಹ ಸನ್ನಿ ಮತ್ತೂ ಗಾಢವಾಯಿತು. ವೃತ್ತಿ ರಂಗಭೂಮಿಯ ನಟ–ತಾಂತ್ರಿಕ ವರ್ಗ ಸಿನಿಮಾಗೆ ವಲಸೆ ಹೋಗಲಾರಂಭಿಸಿತು. ಪೌರಾಣಿಕ ನಾಟಕಗಳು ಯಥಾವತ್ತಾಗಿ ತೆರೆಯ ಮೇಲೂ ಕಾಣಿಸತೊಡಗಿದವು. [ಬರೀ ಕಥೆಯಷ್ಟೇ ಅಲ್ಲದೆ

---

* ಸಿನಿಮಾ ಮತ್ತು ಪ್ರೇಕ್ಷಕ - ಸತೀಶ್ ಬಹಾದ್ದೂರ್ – ಅಕ್ಷರ ಪ್ರಕಾಶನ.

* The Beginning - an Article in the Souvenir on 60 years of Cinima.

ನಟನೆಯೂ ಯಥಾವತ್ತಾಗಿ ನಾಟಕದಂತೆಯೆ ತೆರೆಯ ಮೇಲೆ ಕಾಣಿಸಿಕೊಂಡದ್ದರಿಂದಾಗಿ ನಮ್ಮ ಚಿತ್ರಗಳ ನಟನೆಯಲ್ಲಿ ಕೃತಕತೆ ಭದ್ರವಾಗಿ ತಳಊರಿಬಿಟ್ಟಿತ್ತು. ಅಂತೆಯೇ ಇಂದಿಗೂ ನಮ್ಮ ಚಿತ್ರಗಳಲ್ಲಿ ನಟನೆ-ಭಾಷಾ ಬಳಕೆ ನಾಟಕೀಯವಾಗಿಯೇ ಉಳಿದಿದೆ.] ಈ ಪೌರಾಣಿಕ ಚಿತ್ರಗಳ ಪ್ರವಾಹದಿಂದ ಕವಲೊಡೆದು ಸಮಕಾಲೀನ ಸಾಮಾಜಿಕ ಬದುಕನ್ನು ಕುರಿತ ಕನ್ನಡ ಚಿತ್ರಗಳು ಕಾಣಿಸಿಕೊಂಡದ್ದು ಮೊದಲ ಮೂಕಿ ಚಿತ್ರ (1936) ಬಂದು ಹದಿನೈದು ವರ್ಷಗಳಾದ ನಂತರ. ಈ ಬದಲಾವಣೆ ಬಂದದ್ದೂ ಸಹ ಯಾವುದೋ ಸಾಮಾಜಿಕ ಕಥೆಯುಳ್ಳ ಪಾಶ್ಚಾತ್ಯ ಚಿತ್ರದ ಯಶಸ್ಸು ಕಂಡನಂತರವೇ. ಒಂದರ್ಥಕ್ಕೆ ನಮ್ಮ ಚಿತ್ರ ತಯಾರಕರು ಲಾಭವನ್ನು ಅರಸುತ್ತ, ಮತ್ತೆಲ್ಲೊ ಗೆದ್ದ ಕುದುರೆಗೆ ದುಡ್ಡು ಕಟ್ಟುವ ಚಟದವರಾಗಿ ಉಳಿದುಬಿಟ್ಟರು. ದೇಶಕ್ಕಿದ್ದ ದಾಸ್ಯ ತೊಲಗಿತಾದರೂ ಇವರ ಮಿದುಳಿನೊಳಗೆ ಹಿಡಿದಿದ್ದ ದಾಸ್ಯ ತೊಲಗಲೇ ಇಲ್ಲ. (ಯಾವುದೋ ಭಾಷೆಯಲ್ಲಿ ಯಶಸ್ವಿಯಾದ ಚಿತ್ರಗಳ ಪುನರ್ ನಿರ್ಮಾಣದ ನಿರ್ಧಾರದಲ್ಲಿ ಇಂದೂ ಸಹ ಈ ದಾಸ್ಯ ಕಾಣುತ್ತಿದೆ.)

ಇದು ಪ್ರಧಾನ ವಾಹಿನಿಯ ಸ್ಥಿತಿಯಾದರೆ ಇದಕ್ಕೆ ವಿರುದ್ಧ ದಿಕ್ಕಿನಲ್ಲಿ ಈಸಲು ಪ್ರಯತ್ನಿಸಿದ ಪ್ರಯೋಗಾತ್ಮಕ, ಕಲಾತ್ಮಕ ಇತ್ಯಾದಿ ಬಿರುದಾಂಕಿತ ಚಿತ್ರ ಚಳವಳಿ 70ರ ದಶಕದ ಆರಂಭದಲ್ಲಿ ಕನ್ನಡ ಚಿತ್ರರಂಗದಲ್ಲೂ ಕಾಣಿಸಿಕೊಂಡಿತು. ಇಲ್ಲಿ ಕಥಾ ವಸ್ತುವನ್ನು ವಾಸ್ತವ ನೆಲೆಯಲ್ಲೇ ಇರಿಸುವ, ಕಥನವನ್ನು ತಂತ್ರ-ಚಮತ್ಕಾರಗಳಿಲ್ಲದೆ ಸರಳ ರೇಖೆಯಾಗಿ ಇರಿಸುವ ಪ್ರಯತ್ನಗಳಾದವಾದರೂ ಒಟ್ಟು ಕಥನ ಶೈಲಿಗೆ ಇದ್ದ ನೀರಸ ಸ್ಥಿತಿಯಿಂದಾಗಿ ಈ ಚಿತ್ರಗಳು ಜನಮನವನ್ನು ಗೆಲ್ಲಲೇ ಇಲ್ಲ. ಹೀಗಾಗಿ ಇಂಥಾ ಪ್ರಯತ್ನಗಳು ಇಂದು ಜೀವಂತಿಕೆ ಕಳಕೊಂಡಿವೆ, ಅಲ್ಲದೆ ಇಂಥಾ ಪ್ರಯತ್ನಗಳಿಗೆ ಹಣ ತೊಡಗಿಸಲು ನಿರ್ಮಾಪಕರೂ ದೊರೆಯುತ್ತಿಲ್ಲ.

ಈ ಸ್ಥಿತಿಯಲ್ಲಿ ಸಮಕಾಲೀನ 'ವ್ಯಾಪಾರಿ' ಸಿನಿಮಾ ವಾಸ್ತವೇತರ ನೆಲೆಯಲ್ಲಿ ನಿಂತು, ಕೃತಕ ಬಣ್ಣಗಳಿಂದ ಕೂಡಿದ ಚಿತ್ರಗಳನ್ನು ತಯಾರಿಸುತ್ತಲೇ ಸುಖಿಸುತ್ತಿದೆ. ನೋಡುಗರು ಸಹ ಶ್ರೀಮಂತ ಕನಸಿನ ಲೋಕ ದೊರಕಿದರೆ ಕಥನ, ಕಥಾವಸ್ತು ಸಹ ಅನಗತ್ಯ ಎಂಬಂತೆ ಚಿತ್ರಮಂದಿರಗಳಿಗೆ ಮುಗಿಬೀಳುತ್ತಿದ್ದಾರೆ. (ಆದ್ದರಿಂದಲೇ 'ಸಿಪಾಯಿ', 'ಘರಾನ ಮೊಗುಡು' ಮುಂತಾದ ಚಿತ್ರಗಳು, ಒಳಸತ್ವ ಎಂಬುದು ನಾಪತ್ತೆಯಾಗಿದ್ದರೂ ಯಶಸ್ವಿಯಾಗಿ ನಿರ್ಮಾಪಕನಿಗೆ ಲಾಭ ತರುತ್ತಿವೆ.)

ಸರಳೀಕರಣ

ಪರಿಸ್ಥಿತಿ ಹೀಗಿರುವಾಗ ನಿರ್ದೇಶಕ–ಲೇಖಕರ ತಂಡ ಅಸಹಾಯಕವಾಗುತ್ತದೆ. ತನ್ನೆದುರಿನ ಪ್ರೇಕ್ಷಕರನ್ನು ಹಿಡಿಯಲು ಫಾರ್ಮುಲಗಳನ್ನು ರೂಪಿಸಿ, ಅಳತೆಯನ್ನು ಮೀರದ ಚಿತ್ರಗಳನ್ನು ತಯಾರಿಸಲು ಆರಂಭಿಸುತ್ತದೆ. ಇದು 'ನಾಮ ಹಲವು ರೂಪ ಒಂದೆ' ಎಂಬ ಮಾತಿಗೆ ಸರಿಯಾಗುವಂತೆ ಚಿತ್ರಗಳು ಸಾಲು ಸಾಲಾಗಿ ಬರಲು ದಾರಿ

ಯಾಗುತ್ತದೆ. ಇಂಥಾ ವಾತಾವರಣದಲ್ಲಿ ಹೊಸದನ್ನು ಮಾಡಲು ಪ್ರಯತ್ನಿಸು ವವರು ಎದುರಿಸುವ ಸವಾಲುಗಳು ವಿಚಿತ್ರವಾದದ್ದು.

ಜನರಿಗೆ ಸರಳವಾಗಿ ಅರ್ಥವಾಗುವ ಕಥೆಯನ್ನು ಹುಡುಕಲಾರಂಭಿಸಿ, ಕಥನ ವನ್ನು ಸರಳವಾಗಿರಿಸಿ, ಬದುಕಿನ ಸಂಕೀರ್ಣತೆಯ ಯಾವ ಭಾಗವೂ ಚಿತ್ರದಲ್ಲಿ ಉಳಿಯದಂತಹ ಪಾತ್ರವೊಂದನ್ನ ತಯಾರಿಸಿಬಿಡುತ್ತಾರೆ. ಉದಾಹರಣೆಗಾಗಿ 'ಪುಟ್ನಂಜ', 'ಸಿಪಾಯಿ' ಕನ್ನಡ ಚಿತ್ರಗಳನ್ನು ಗಮನಿಸೋಣ. [ನಾನೇ ಈ ಚಿತ್ರಕ್ಕೆ ಸಂಭಾಷಣೆ ಒದಗಿಸಿದವನು ಎಂಬುದು ನನ್ನ ಮಾತಿಗೊಂದಿಷ್ಟು ಸರಕನ್ನೊದಗಿಸ ಬಹುದು ಎಂದೇ ಈ ಉದಾಹರಣೆಯನ್ನಾರಿಸಲು ಕಾರಣ.]

ಇವೆರಡೂ ನಾಯಕನಿಗಾಗಿ ಹೆಣೆದ ಕಥೆಗಳು. ಆ ನಾಯಕನಾದರೊ ನ್ಯಾಯಪರ, ಸದ್ಗುಣಶಾಲಿ, ಪುರುಷೋತ್ತಮ ರಾಮನ ಪಡಿಯಚ್ಚು, ಕೆಟ್ಟದನ್ನು ಕಂಡರೆ ಕೋಪಿಸಿಕೊಂಡು, ನಿಯತ್ತಿನವರನ್ನು ಕಾಪಾಡುವವನು, ಕೆಟ್ಟ ಚಟ ಗಳೆಂಬುದು ಅವನ ಬಳಿಯಲ್ಲಿ ಸುಳಿಯುವುದೂ ಇಲ್ಲ ['ಸಿಪಾಯಿ'ಯ ನಾಯಕ ಸಾರಾಯಿ ಕುಡಿಯುತ್ತಾನೆ, ಬೀಡಿ ಸೇದುತ್ತಾನೆ. ಆದರೆ ತಾನು ಊಳುವ ಭೂಮಿ ಯಲ್ಲಲ್ಲ. ಅಲ್ಲಿಗೆ ಬೂಟುಗಾಲಿಟ್ಟು ಬಂದವರಿಗೂ ಆತ ಬಾಂಬ್ ಎಸೆಯುವವನು ಎಂಬ ಸಮಜಾಯಿಷಿ ಎರಡೆರಡು ಬಾರಿ ಚಿತ್ರದಲ್ಲಿ ಬರುತ್ತದೆ] ಅಂದರೆ ಅವನು ಸಾಮಾನ್ಯ ಮನುಷ್ಯನಲ್ಲ ಎಂದಾಯಿತು. ಹಾಗಾದಾಗ ಆತ ದೇವರಾಗಬೇಕಾಗು ತ್ತದೆ. ಆಗ ಕಥೆ ನೋಡುಗನಿಗೆ ಸಾಮಾಜಿಕವೊ, ಪೌರಾಣಿಕವೊ ಎಂಬ ಗೊಂದಲ ವಾಗಿ ಬಿಡಬಹುದೆಂಬ ಭಯದೊಡನೆ ಆತ ಸುಂದರ ಹುಡುಗಿಯನ್ನು ಪ್ರೇಮಿ ಸುವುದು, ಆ ಪ್ರೇಮಕ್ಕೆ ಆಸ್ತಿಯೋ ಅಂತಸ್ತೊ ತಡೆಯಾಗುವುದು, ಆ ತಡೆಗಳನ್ನು ಮೆಟ್ಟಿ ಆತ ನಿಲ್ಲುವುದು ಇತ್ಯಾದಿ ವಿವರಗಳನ್ನು ಕಥೆಯೊಳಗೆ ಅಡಗಿಸುತ್ತಾರೆ.

'ಪುಟ್ನಂಜ' ಚಿತ್ರದಲ್ಲಿ ನಾಯಕ ಪಂಚಾಯ್ತಿಯ ಅಧ್ಯಕ್ಷ, ಸಾವಿರಾರು ಎಕರೆಗಳ ಭೂ ಒಡೆಯ, (ಇವನಿಗೆ ಟೆನನ್ಸ ಆ್ಯಕ್ಟ್ ತಟ್ಟಲಿಲ್ಲವೆ ಎಂದು ಕೇಳಬೇಡಿ), ಮನೆ ಯೊಳಗೆ ಕಾಲಿಡುವ ಮೊದಲು ನೇಗಿಲಿಗೆ ನಮಿಸುವವನು, ಅವನ ಮನೆಯೊ, ಅದನ್ನು ರೈತನ ಮನೆ ಅನ್ನುವುದಕ್ಕಿಂತ ಪಾಳೇಗಾರನ ಅರಮನೆ ಎನ್ನಬಹುದು. ಇಂತಹ ವ್ಯಕ್ತಿಗೆ ಅಮೇರಿಕೆಯಲ್ಲಿ ಓದಿ ಬಂದಿರುವ ಮಗಳನ್ನು ಮದುವೆಯಾಗುವ ಹಂಬಲ. ಆದರೆ ಅತ್ತೆಗೆ ಈತ ಹಳ್ಳಿಗಮಾರ, ಈತನಿಗೆ ಮಗಳನ್ನು ಕೊಡಬಾರ ದೆಂದು ತಾಖೀತು ಮಾಡುತ್ತಾಳೆ. ಮಾವನಿಗೆ ನಾಯಕನೇ ಸರಿ ಎನಿಸುತ್ತದೆ. ಹೆಂಡತಿಗೆ ಹೆದರಿ ಎದುರು ಮಾತಾಡದವನು ಮಗಳನ್ನು ಮೆಲ್ಲಗೆ ಒಪ್ಪಿಸುತ್ತಾನೆ, ಮದುವೆ ಆಗಿ ಹೋಗುತ್ತದೆ. ಅಲ್ಲಿಂದಾಚೆಗೆ ಪಾಶ್ಚಾತ್ಯ ಭಾರತೀಯ ಸಂಸ್ಕೃತಿಗಳ ತಿಕ್ಕಾಟದಿಂದಾಗಿ ಗಂಡ - ಹೆಂಡತಿ ಬೇರಾಗುತ್ತಾರೆ. ಇದೇ ಸಮಯವೆಂದು ಅತ್ತೆ ಮಗಳಿಂದ ವಿಚ್ಛೇದನ ಕೊಡಿಸುವ ಯತ್ನ ಮಾಡುತ್ತಾಳೆ. ನಾಯಕ ಪಾಠ ಕಲಿಸು ತ್ತೇನೆ ಎಂದು ಹೆಂಡತಿಯ ತವರಿಗೆ ನುಗ್ಗಿ ಮಾನಭಂಗ ಮಾಡುತ್ತಾನೆ. ಆದರೂ

ಬಗ್ಗದ ಹುಡುಗಿ ತನ್ನ ಬಸಿರಲ್ಲಿರುವುದನ್ನು ಕೊಟ್ಟೇನು ತಾನು ಬರಲಾರೆ ಎನ್ನುತ್ತಾಳೆ. ನೊಂದು ನಾಯಕ ತನ್ನ ಗೂಡು, ಅಲ್ಲ ಅರಮನೆ ಸೇರುತ್ತಾನೆ. ನಾಯಕನ ಅಜ್ಜಿ ತಾನೇ ಪಾಠ ಕಲಿಸುವೆನೆಂದು ನಾಯಕಿಗೆ ಬಸಿರಿನ ಕಾಲದಲ್ಲಿ (ಅರ್ಜುನನಿಗೆ ಕದನಕ್ಕೆ ಮುನ್ನ ಕೃಷ್ಣ ಗೀತೆಯನ್ನು ಹೇಳಿದಂತೆ) ಭಾರತೀಯ ಸಂಸ್ಕೃತಿಯೇ ಉತ್ಕೃಷ್ಟ ಎಂದು ತಿಳಿ ಹೇಳುತ್ತಾಳೆ. ಮಗು ಹೊತ್ತ ನಾಯಕಿ ನಾಯಕನ ಮನೆಗೆ ಹೊರಳಿ ಬರುತ್ತಾಳೆ. ಬರುವ ಮುನ್ನ ತನ್ನ ತಾಯಿಗೆ ತಪ್ಪದೆ ತಾಟಕಿ ಎಂಬ ಹೆಸರಿಟ್ಟು, ಬಯ್ದು, ಬರುತ್ತಾಳೆ. ಕೊನೆಗೆ ಭಾರತೀಯ ಸಂಸ್ಕೃತಿಯ ಆದರ್ಶಪ್ರಾಯ ನಾಯಕ ತನ್ನ ಹೆಂಡತಿಯೊಡನೆ ಸುಖವಾಗಿರುತ್ತಾನೆ. (ಅಮೆರಿಕಾದಲ್ಲಿ ಓದಿದ ಹುಡುಗಿಗೆ ಸ್ವಂತ ಬುದ್ಧಿ ಇಲ್ಲವೆ ? ಅಮೆರಿಕಾ ಸಂಸ್ಕೃತಿ ಎಂದರೆ 'ಲಬೋಲಬೋ' ಎಂದು ಚೀರಿ ಕುಣಿಯುವುದೇ ? ಭಾರತೀಯ ಸಂಸ್ಕೃತಿ ಎಂದರೆ ಹೆಣ್ಣು ಗಂಡನಿಗೆ ತಗ್ಗಿ ಬಗ್ಗಿ ನಡೆಯುವುದಷ್ಟೇನೆ ? ಎಂದೆಲ್ಲಾ ಮೂಲಭೂತ ಪ್ರಶ್ನೆಗಳನ್ನು ಕೇಳದಿರಿ. ಇದು ವ್ಯಾಪಾರೀ ಸಿನಿಮಾ) ಭಾರತೀಯ ಚಿತ್ರರಂಗದ ಈವರೆಗಿನ ಇತಿಹಾಸದಲ್ಲಿ ಇಂತಹ ಅತ್ತೆಯೊಡನೆ ಅಳಿಯನ ಜಗಳ, ಪೊಗರಿನ ಹೆಣ್ಣನ್ನು ತಿದ್ದುವ ಗಂಡನ ಸಾವಿರಾರು ಕಥೆಗಳು ಬಂದಿರಬಹುದು. ಆದರೂ ಮತ್ತೆ ಇಂತಹ ಚಿತ್ರ ಆಗುತ್ತದೆ. (ಈ ಚಿತ್ರವನ್ನು ಹಲವರು ರೀಮೇಕ್ ಎಂದುಬಿಟ್ಟರು. ಇದೊಂದು ಸ್ವತಂತ್ರ ಚಿತ್ರ. ಇದರಲ್ಲಿನ ಸನ್ನಿವೇಶಗಳು ಮಾತ್ರ ಸಾವಿರಾರು ಇಂತಹದೇ ಕಥೆಯನ್ನುಳ್ಳ ಚಿತ್ರದಿಂದ ಹೆಕ್ಕಿಟ್ಟದ್ದು. ಆದ್ದರಿಂದ ಇದನ್ನು ಯಾವುದೋ ಒಂದು ಚಿತ್ರದ ರೀಮೇಕ್ ಎಂದರೆ ಇನ್ನುಳಿದ ಸಾವಿರ ಚಿತ್ರಗಳ ತಯಾರಕರಿಗೆ ಅನ್ಯಾಯ ಮಾಡಿದಂತೆ ಎನ್ನಬಹುದು.)

ಇಂತಹ ಚರ್ವಿತ ಚರ್ವಣದಂತಿರುವ ಕಥೆಯಲ್ಲಿ ಹೊಸತು ಮಾಡಲು ಸಾಧ್ಯವಿರುವುದು ಕಥನ ಶೈಲಿ, ಮಾತಿನ ಬಳಕೆ ಮತ್ತು ಹೊಸ ಸನ್ನಿವೇಶ ಸೃಷ್ಟಿಯಿಂದ ಮಾತ್ರ ಸಾಧ್ಯ. ಅದಕ್ಕಾಗಿಯೇ ಚಿತ್ರದ ಆರಂಭದಲ್ಲಿ 'ಪ್ರವೇಶವಿಲ್ಲ' /ಎಂಬ ಬೋರ್ಡಿರುವ ರಸ್ತೆಯಲ್ಲಿ ಬೈಕು ಓಡಿಸುತ್ತಾ ಬರುವ ಅನಕ್ಷರಸ್ಥ ನಾಯಕನಿಂದ ನಗರದ ವಾಹನ ಸಂಚಾರಕ್ಕೆ ಆಗುವ ಅಡ್ಡಿ–ಆತಂಕ, ಎರಡನೆಯ ಅರ್ಧದಲ್ಲಿ ಅತ್ತೆ ಕಳಿಸಿದ ಬಾಡಿಗೆ ಗೂಂಡಾಗಳನ್ನು ರಸ್ತೆಯಲ್ಲಿ ಸಾಗುತ್ತಿರುವ ಕಾರಿನೊಳಗೆ ಕುಳಿತೇ ಸದೆಬಡಿದು, ಆ ಕಾರನ್ನು ಪುಡಿಮಾಡಿ ಅತ್ತೆಗೆ ಹಿಂದಿರುಗಿಸುವ ನಾಯಕ ಮುಂತಾದ ಸನ್ನಿವೇಶಗಳನ್ನು ಸಂಯೋಜಿಸಿರುವ ಇವು ಬೌದ್ಧಿಕ ಕಸರತ್ತಿಗಾಗಿ ಮಾಡಿದ್ದಲ್ಲಿ ಇವುಗಳ ಹಿಂದೆ ಸಾಹಸಪ್ರಿಯರನ್ನು ರಂಜಿಸುವುದನ್ನು ಬಿಟ್ಟು ಬೇರೆ ಉದ್ದೇಶವೂ ಇಲ್ಲ. ಸಿನಿಮಾ ಹಾಲಿನ ಮುಂದಿನ ಸಾಲಿನಲ್ಲಿ ಕೂರುವ ವೃತ್ತಿ ರಂಗಭೂಮಿ ಕಾಲದಲ್ಲಿ ನಾಲ್ಕಾಣೆ ಪ್ರಭುಗಳು ಎಂದು ಕರೆಸಿಕೊಳ್ಳುತ್ತಿದ್ದವರೇ ಈ ದೃಶ್ಯಗಳಿಗೆ ಕಾರಣ. ಇದಕ್ಕೆ 'ಸಿನಿಮಾ' ಭಾಷೆಯಲ್ಲಿ ಪುನರಾವರ್ತಿತ ಪ್ರೇಕ್ಷಕನಿಗಾಗಿ ಎಂದೆನ್ನುತ್ತಾರೆ. ಈತ ಈಗ ಬೆಳೆದಿದ್ದಾನೆ. ಮುಂದಿನ ಸಾಲನ್ನು ಬಿಟ್ಟು ಮಹಡಿ, ಎರಡನೆಯ ದರ್ಜೆ

ಯನ್ನೂ ಆಕ್ರಮಿಸುತ್ತಿದ್ದಾನೆ. ಅವನಲ್ಲಿ ಆಗಿರುವ ಈ ಬದಲಾವಣೆಗೆ ಮೊದಲು ಮಹಡಿಯಲ್ಲಿ ಕೂರುತ್ತಿದ್ದವರು ಇಂದು ಸಿನಿಮಾ ಹಾಲಿಗೆ ಬರದೆ ಮನೆಯಲ್ಲೇ ಟಿ.ವಿ.ಯ ಚಾನೆಲ್‌ಗಳ ಬಟನ್ ಬದಲಿಸುತ್ತಿದ್ದಾರೆ ಎಂಬುದು ಮತ್ತು ಕನ್ನಡ ಚಿತ್ರಗಳಿಗಿರುವ ತೆರಿಗೆ ವಿನಾಯಿತಿಗಳು ಕಾರಣವೆಂದು ಬಹುಕಾಲದಿಂದ ಚಿತ್ರವಿತರಣೆಯಲ್ಲಿ ತೊಡಗಿರುವ ಕೆ. ವಿ. ಗುಪ್ತ ಅವರು ಹೇಳುತ್ತಾರೆ. ಈ ಬದಲಾವಣೆಗೆ ಕಳೆದ ಹತ್ತು ವರ್ಷಗಳಿಂದ ನಮ್ಮ ಜನರ ಬದುಕಿನ ರೀತಿಯಲ್ಲಿ ನುಗ್ಗುತ್ತಿರುವ ಪಾಶ್ಚಾತ್ಯೀಕರಣ ಮತ್ತು ದುಂದುವೆಚ್ಚ ಮಾಡಿಯಾದರೂ ಪಕ್ಕದ ಮನೆಯವರಿಗೆ ಕಾಣುವಂತೆ ಮಹಡಿಯ ಮೆಟ್ಟಿಲೇರುತ್ತೇನೆ ಎಂಬ ಭಾವ ಕಾರಣವಾಗಿದೆ ಎಂದು ಸಮಾಜಶಾಸ್ತ್ರ ಓದಿ ಈಗ ಪೂರ್ಣಾವಧಿ ಚಿತ್ರ ವ್ಯವಹಾರದಲ್ಲಿ ತೊಡಗಿರುವ ವಿ. ಎಚ್. ಸುರೇಶ್ ಹೇಳುತ್ತಾರೆ. ಯಾರು ಸರಿ ಎಂದು ಚಿಂತಿಸುವುದಕ್ಕಿಂತ ಮಹಡಿಯಲ್ಲಿ ಕೂರುತ್ತಿರುವವನ ಮಾನಸಿಕ ಸ್ಥಿತಿಗೆ ತಕ್ಕ ಸನ್ನಿವೇಶ ಇರುವುದು ಸರಿ ಎಂದು ಮೊದಲು ತಿಳಿಸಿದಂತಹ ಸನ್ನಿವೇಶಗಳನ್ನು ಸಿನಿಮಾದಲ್ಲಿ ಸೇರಿಸಲಾಗುತ್ತದೆ.

ಇಂತಹ ಹೊಸತುಗಳಲ್ಲದೆ ಕೃತಿಯೊಂದು ಪ್ರೇಕ್ಷಕನಿಗೆ ತಲುಪುವ ಬಗೆ ಕುರಿತು ಮಾತನಾಡುತ್ತಾ lingustic message, literal message, symbolic message, ಎಂಬ ಮೂರು ಘಟ್ಟಗಳನ್ನು ಗುರುತಿಸುವ ರೋಲ್ಯಾಂಡ್ ಬಾರ್ಥೆಸ್ ನಂತೆ ಪ್ರತಿ ಚಿತ್ರದಲ್ಲೂ, ವಿಶೇಷವಾಗಿ ಕನ್ನಡ ಚಿತ್ರಗಳಲ್ಲಿ ಸಿನಿಮಾ ಭಾಷೆಗಿಂತ ಹೆಚ್ಚಿನ ಪ್ರಾಧಾನ್ಯ ಮಾತಿನ ಭಾಷೆಗಿರುವುದನ್ನು ನೆನೆಯಬಹುದು. (ಇದಕ್ಕೆ ನಮ್ಮ ಚಿತ್ರ ನಿರ್ದೇಶಕರಿಗೆ ದೃಶ್ಯಗಳ ಮೂಲಕವೇ ಕಥೆಯೊಂದನ್ನು ನಿರೂಪಿಸುವ ಶಕ್ತಿ ತೀರಾ ಕಡಿಮೆ ಎನ್ನುವುದು ಕಾರಣ) 'ಪುಟ್ನಂಜ'ದ ಮಟ್ಟಿಗೆ ಈ ಅನಿವಾರ್ಯವನ್ನು ನೀವು ಆ ಚಿತ್ರದ ಸಂಭಾಷಣೆಗಳ ಆಡಿಯೋ ಕೇಳಿದರೂ ಗಮನಿಸಬಹುದು. ಇಡೀ ಕಥೆ ಮಾತಿನಿಂದಲೇ ತಿಳಿಯುತ್ತದೆ, ರೇಡಿಯೋ ನಾಟಕದಂತೆ. ಇದು ಈಚಿನ ಅನೇಕ ಕನ್ನಡ ಚಿತ್ರಗಳ ಸಮಸ್ಯೆಯೂ ಹೌದು. ಇದರಿಂದಾಗಿಯೇ ನಮ್ಮ ಚಿತ್ರಗಳಲ್ಲಿ ಸಂಭಾಷಣಾ ಲೇಖಕರಿಗೆ ವಿಶೇಷ ಸ್ಥಾನ. ಅವರು ಪಾತ್ರಗಳಿಂದ ಆಡಿಸುವ ಮಾತುಗಳಲ್ಲೇನಾದರೂ ಹೊಸದು ಸಿಗುತ್ತದೋ ಎಂದು ನಿರ್ದೇಶಕ-ನಿರ್ಮಾಪಕರು ಕಾಯುತ್ತಾರೆ. 'ಪುಟ್ಟಂಜ'ದಲ್ಲಿ ಈ ಹೊಸದನ್ನು ತಂದದ್ದು ಗ್ರಾಮೀಣ ಕನ್ನಡ. ಸ್ಪಷ್ಟವಾಗಿ ಮಂಡ್ಯದ ಸುತ್ತಮುತ್ತಲಿನದ್ದು, ದುರ್ಗದ ಸುತ್ತಮುತ್ತಲಿನದ್ದು ಎಂದು ಗುರುತಿಸಲಾಗದಂತಹ ಗ್ರಾಮ್ಯ ಭಾಷೆ. ಅದನ್ನು ಸ್ಪಷ್ಟವಾಗಿ ಅಗತ್ಯವಿರುವಷ್ಟು ನಾಟಕೀಯವಾಗಿ ಹೇಳುವ ಉಮಾಶ್ರೀಯಂತಹ ನಟಿಯೂ ಆ ಭಾಷೆಗೆ ಜೀವ ಕೊಟ್ಟಿದ್ದಾರೆ. ಹೀಗಾಗಿ 'ಪುಟ್ನಂಜ'ದಂತಹ ಸಿನಿಮಾದಲ್ಲಿ ಸುಲಭವಾಗಿ ಹೊಸದೊಂದು (ಚಿತ್ರ ಬಿಡುಗಡೆಯಾದ ಕಾಲಕ್ಕೆ ಮಾತ್ರ ಹೊಸದು. ಏಕೆಂದರೆ ಈ ಮೊದಲು 'ಚಂದವಳ್ಳಿಯ ತೋಟ', 'ಬಂಗಾರದ ಮನುಷ್ಯ', 'ಅಣ್ಣ-ತಂಗಿ'ಯಲ್ಲಿ ಈ ಪ್ರಯೋಗ ಆಗಿದೆ) ದೊರಕಿತು.

ಇನ್ನು ಬಾರ್ಥೆಸ್ ಸೂಚಿಸುವ ಎರಡು ಮತ್ತು ಮೂರನೆಯ ಸಂವಹನ ಸೂಚಿಗಳಾದ literal ಮತ್ತು symbolicಗಳಲ್ಲಿ, ಎರಡನೆಯದನ್ನು ನಮ್ಮ ವ್ಯಾಪಾರೀ ಚಿತ್ರಗಳ ನಿರ್ದೇಶಕರು ಸಂಪೂರ್ಣ ಬಳಸುವುದಿಲ್ಲ. ಪೋಲ್ಯೊಂಡಿನ ಯಾನೆಸ್ಕೊನಂತೆ ಅವರು ಆಧುನಿಕ ಬದುಕನ್ನೋ ಅಥವಾ ಪಾತ್ರವೊಂದರ ಒಳದನಿಯನ್ನೋ ತಿಳಿಸಲು ದೃಶ್ಯದಲ್ಲಿಯ ಒಂದು ಸಂಕೇತವನ್ನು ಸೃಷ್ಟಿಸಲು ಪ್ರಯತ್ನಿಸುವುದಿಲ್ಲ. ಅವರೇ ಹೇಳುವಂತೆ "ಇವೆಲ್ಲವೂ ನಮ್ಮ ಪ್ರೇಕ್ಷಕನ ಮಟ್ಟವನ್ನು ಮೀರಿದ್ದು. ಆತನಿಗೆ ಹಾವು ಎಂದಾಗ ಹಾವು ತೋರಿಸಬೇಕು. ಹಾವು ಮತ್ತಾವುದೋ ಭಾವಕ್ಕೆ ಸಂಕೇತವಾಗಿ ಬಳಕೆಯಾದರೆ ಅವನಿಗೆ ತಿಳಿಯುವುದಿಲ್ಲ. ಅದಕ್ಕಾಗಿಯೇ ನಮ್ಮ ಚಿತ್ರಗಳು ಸರಳವಾಗಿರುತ್ತವೆ.* "

ಈ ಸರಳರೇಖಾತ್ಮಕ ಕಥೆಗೆ ಅಲ್ಲಲ್ಲಿ ತಿರುವುಗಳನ್ನು ನೀಡುವ ಪ್ರಯೋಗ ಈಚೆಗೆ ಆರಂಭವಾಗಿದೆ. (ಓಂ, ನಮ್ಮೂರ ಮಂದಾರ ಹೂವೆ ಮುಂತಾದ ಚಿತ್ರಗಳು) ಈ ತಿರುವುಗಳು ಸಹ ಪ್ರೇಕ್ಷಕನ ಕುತೂಹಲವನ್ನು ಚಿತ್ರ ಮುಗಿಯುವವರೆಗೆ ಕಾಪಾಡಲೆಂದೇ ಮಾಡಿದ್ದು ಎನ್ನುತ್ತಾರೆ. (ಈ ಮಾತಿನ ಹಿಂದೆಯೂ ನಮ್ಮ ಪ್ರೇಕ್ಷಕರ ಬುದ್ಧಿಮಟ್ಟ ಕಮ್ಮಿ ಎಂಬ ಧೋರಣೆಯನ್ನು ಗಮನಿಸಿ)

ನಾಯಕ ಮಣಿಗಳು

ಈ ಮಧ್ಯೆ ನಾಯಕನ ಪಾತ್ರವನ್ನು ಮೊದಲ ಬಾರಿಗೆ ತೆರೆಯ ಮೇಲೆ ಕಾಣಿಸಲು ಮಾಡುವ ಕಸರತ್ತು ಇನ್ನೊಂದು ಮುಖ್ಯ ಸವಾಲು. ಪ್ರತಿ ನಾಯಕನಿಗೂ ತನ್ನದೇ ಆದ ಅಭಿಮಾನಿ ವೃಂದವಿರುತ್ತದೆ.

ವಿಶೇಷವಾಗಿ ಸ್ಲ್ಯಾಬ್ ಪದ್ಧತಿಯ ತೆರಿಗೆಗಳು ಜಾರಿಗೆ ಬಂದನಂತರ ಅತಿ ಕಡಿಮೆ ಅವಧಿಯಲ್ಲಿ, ಅತಿ ಹೆಚ್ಚು ಚಿತ್ರಮಂದಿರಗಳಲ್ಲಿ ಸಿನಿಮಾವನ್ನು ಓಡಿಸಿ ಲಾಭ ಪಡೆಯುವ ಅಭ್ಯಾಸ ಬಂದಿದೆ.* ಹೀಗೆ ಬಿಡುಗಡೆಯಾದ ಚಿತ್ರಗಳನ್ನು ಕಾಪಾಡುವವರು ಅಂಧಾಭಿಮಾನಿಗಳು. ಅವರಿಗಾಗಿ ಈ ನಾಯಕನ ತೆರೆಯ ಪ್ರವೇಶ ವಿಶೇಷವಾಗಬೇಕು. 'ಸಿಪಾಯಿ' ಚಿತ್ರದಲ್ಲಿ ಚಿರಂಜೀವಿಯ ಪಾತ್ರ ತೆರೆಯ ಮೇಲೆ ಪೂರ್ಣ ಪ್ರಮಾಣದಲ್ಲಿ ಕಾಣಿಸುವ ಮುನ್ನ ಆತನ ಬೆನ್ನು, ಕಾಲು, ಕೈ, ಚಪ್ಪಲಿ, ಕನ್ನಡಕ ಪೂರ್ಣ ಹಿಂಬದಿ ಹೀಗೆ ಅನೇಕಾನೇಕ ಚಿತ್ರಿಕೆಗಳು ಬರುತ್ತವೆ. ಆತ ಪೂರ್ಣವಾಗಿ ಕಾಣುವ ಚಿತ್ರಿಕೆ ಬರುವ ಮುನ್ನ ಆತನ ಪಾತ್ರದ ಹೆಸರು ಹೇಳುವ ಮತ್ತೊಂದು

---

*ಪ್ರಸಿದ್ಧ ಕನ್ನಡ ಚಿತ್ರ ನಿರ್ದೇಶಕರಾದ ದೊರೆ-ಭಗವಾನ್ ಜೋಡಿಯ ಭಗವಾನ್ ಅವರು ದೂರದರ್ಶನ ಸಂದರ್ಶನದಲ್ಲಿ ಹೇಳಿದ ಮಾತು.

*Devotion & Defence in far activity—S. V. Srinivas Internal of Arts & India (Jan '96, issue 29)

ಪಾತ್ರ ತನ್ನನ್ನು ಆವರಿಸಿಕೊಂಡ ಗೂಂಡ ಒಬ್ಬನಿಗೆ ಒದ್ದು ದೂರ ತಳ್ಳುತ್ತದೆ. ಆ ಗೂಂಡ ಬೀಳುವುದು ಹೂವಿನ ಬುಟ್ಟಿಗಳನ್ನಿಟ್ಟ ಹಲಗೆಯ ಮೇಲೆ. ಅವನು ಬಿದ್ದೊಡನೆ ಬುಟ್ಟಿಗಳು ಮೇಲೆ ಚಿಮ್ಮುತ್ತವೆ. ಚಿರಂಜೀವಿಯ ಪೂರ್ಣ ಚಿತ್ರಿಕೆಯನ್ನು ಕೆಳಕೋನದಿಂದ ಮೇಲ್ನೋಟಕ್ಕೆ ಸಾಗುತ್ತಾ ಕ್ಯಾಮೆರಾ ಸೆರೆಹಿಡಿದಾಗ ಬುಟ್ಟಿಯಿಂದ ಚೆಲ್ಲಬಹುದಾದ ಹೂವಿಗೆ ನಾಲ್ಕರಷ್ಟು ಹೂವು ಆತನ ಮೇಲೆ ಮಳೆಯಂತೆ ಸುರಿಯುತ್ತದೆ. ಈ ಸಂದರ್ಭ ತೆರೆಯ ಮೇಲೆ ಬಂದಾಗ ಚಿರಂಜೀವಿಯ ಅಭಿಮಾನಿಗಳ ಅವುಟ ಶಿಳ್ಳೆಗಳಿಂದಾಗಿ ಇಡೀ ಚಿತ್ರಮಂದಿರವೇ ಶಬ್ದಸಾಗರವಾಗಿ ಬಿಡುತ್ತದೆ. ಇಂತಹ ಸಂಕಲನದ ಹಿಂದಿರುವುದು ಅಭಿಮಾನಿಗಳನ್ನು ಉಳಿಸುವ ಯತ್ನ. (ಅವರ ಬೌದ್ಧಿಕ ಮಟ್ಟವನ್ನು ಬೆಳೆಸುವ ಯತ್ನವಲ್ಲ.) ಎಂ.ಜಿ.ಆರ್. ಅವರು ತಮ್ಮ ಚಿತ್ರಜೀವನದುದ್ದಕ್ಕೂ ಅಭಿನಯಿಸಿದ ಒಟ್ಟು ಚಿತ್ರಗಳಲ್ಲಿ ಶೇಕಡ 70 ರಲ್ಲಿ ಆತನ ಪಾತ್ರ ಪರಿಚಯವಾಗುವುದು ಹೆಂಗಸಿನ ಮಾನಭಂಗ ಯತ್ನದಲ್ಲಿರುವ ಗೂಂಡಾನ ಮುಸುಡಿಗೆ ಗುದ್ದುವ ಮೂಲಕ. ಇದಕ್ಕೆ ಆತನ ರಾಜಕೀಯ ವರ್ಚಸ್ಸು ಬೆಳಸಿಕೊಳ್ಳುವ ಉದ್ದೇಶದೊಂದಿಗೆ, ಆ ನಾಯಕಮಣಿಯ ಪಾತ್ರ ಸ್ತ್ರೀ ರಕ್ಷಕ ಎಂಬ ಇಮೇಜ್ ಬೆಳಸುವುದೂ ಕಾರಣವಾಗಿರುತ್ತದೆ.

ಹೀಗೆ ಅನೇಕಾನೇಕ ಸರಳೀಕರಣಗಳೊಂದಿಗೆ ತಯಾರಾಗುವ ನಮ್ಮ ವ್ಯಾಪಾರೀ ಚಿತ್ರಗಳಲ್ಲಿ ಆಕಸ್ಮಿಕ ಎಂಬಂತೆ ಒಂದೋ ಎರಡೋ ಉತ್ತಮ ಸನ್ನಿವೇಶ ಅಥವಾ ಚಿತ್ರಿಕೆಗಳು ದೊರೆಯುತ್ತವೆ. 'ಸಿಪಾಯಿ'ಯ ನಾಯಕಿ ಮೊದಲ ಬಾರಿ ಸೀರೆ ಯುಟ್ಟಾಗ ಪಡುವ ಸಂಭ್ರಮ, ಆದನ್ನಾತ ವ್ಯಕ್ತಪಡಿಸುವ ರೀತಿ ಇಂತಹ ಅಪರೂಪಗಳಲ್ಲೊಂದು. ಇನ್ನು ಅದೇ ಪಾತ್ರಕ್ಕೆ ಗುಡುಗನ್ನು ಕಂಡರೆ ಇರುವ ಭಯವನ್ನು ತಿಳಿಸಲು – ಆಕೆಗೆ ಉಲ್ಟಾ ಸೀರೆಯನ್ನುಡಿಸಿ, ಆಕೆಯ ಪ್ರತಿಬಿಂಬವನ್ನು ಕನ್ನಡಿಯಲ್ಲಿ ಸೆರೆಹಿಡಿದು ಆ ಕನ್ನಡಿಗೆ ಆಧಾರವಾಗಿರುವ ಕಬ್ಬಿಣಕ್ಕೆ ಸ್ಪ್ರಿಂಗ್‌ಗಳನ್ನು ಹಾಕಿ, ಆ ಕನ್ನಡಿಯ ಫ್ರೇಮನ್ನು ಅಲುಗಿಸಿ ತೆರೆಯ ಮೇಲೆ ಕ್ಯಾಮೆರಾ ಅಲುಗಿಸದೆ ಗುಡುಗನ್ನು ಉಂಟುಮಾಡಿದ ತಂತ್ರ ಹೊಸದು. ಇಂತಹ ಸಣ್ಣಪುಟ್ಟ ಹೊಸತುಗಳನ್ನು ಗುರುತಿಸಿ, ಪ್ರೋತ್ಸಾಹಿಸಿದಾಗ ಪ್ರಾಯಶಃ 'ವ್ಯಾಪಾರಿ' ಚಿತ್ರ ತಯಾರಕರು ಮತ್ತಷ್ಟು ವಿಭಿನ್ನವಾಗಿ ಯೋಚಿಸಬಲ್ಲರೇನೋ....

ಆದರೆ ಅದೇ ಪುರಾಣ ಪುರುಷರಾದ ರಾಮ, ಕೃಷ್ಣ, ಕರ್ಣರಿಗೆ ಚಡ್ಡಿ–ಪ್ಯಾಂಟು ತೊಡಿಸಿ ಸಮಕಾಲೀನರೆನ್ನುವ ಪರಿಪಾಠ ಹೋಗಲು ಸಂಪೂರ್ಣ ಹೊಸ ಚಿಂತಕರು ಕನ್ನಡ ಚಿತ್ರರಂಗಕ್ಕೆ ಇಂದು ಬರಬೇಕಾದ ಅವಶ್ಯಕತೆಯಿದೆ. ಅಥವಾ ರೊಲೂಂಡ್ ಬಾರ್ಥಸ್ ಲೇಖಕನ ಸಾವು ಎಂಬ ಲೇಖನದಲ್ಲಿ ಹೇಳುವಂತೆ ಎಲ್ಲ ಮಾಧ್ಯಮಗಳ ಅಂತಿಮ ಗುರಿ ಪ್ರೇಕ್ಷಕನಾದ್ದರಿಂದ ಆತನ ಬೌದ್ಧಿಕ ಮಟ್ಟವನ್ನು ಏರಿಸಲೆಂದೇ ಪ್ರಯತ್ನ ಆಗಬೇಕಿದೆ, ಮಲೆಯಾಳ ಚಿತ್ರರಂಗದಲ್ಲಿನ ವ್ಯಾಪಾರಿ ಚಿತ್ರಗಳು ನಮ್ಮ ಚಿತ್ರಗಳಿಗಿಂತ ಭಿನ್ನವಾಗಿರುವುದಕ್ಕೆ ಅವರು ನಿರಂತರವಾಗಿ ಉತ್ತಮ

ಬೌದ್ಧಿಕ ಮಟ್ಟದ ಚಿತ್ರಗಳನ್ನು ತಯಾರಿಸಿ ಪ್ರೇಕ್ಷಕರನ್ನು ಸಿದ್ಧಪಡಿಸಿದ್ದು ಕಾರಣವಾಗಿದೆ. ನಮ್ಮಲ್ಲಿಯೂ ಅಂತಹ ಪ್ರಯತ್ನ ನಿರಂತರವಾಗಿ ಆಗಬೇಕು. ಆಗ ನಿರ್ಮಾಪಕ-ನಿರ್ದೇಶಕರ ಆಳತೆಗೋಲಲ್ಲಿ ಸಿಕ್ಕು ಅದೇ ಪಾಠವನ್ನು ಬೇರೆ ಬೇರೆ ಅಚ್ಚಿನಲ್ಲಿ ನೋಡುತ್ತಾ ಮಂದಬುದ್ಧಿಯವರಾಗುತ್ತಿರುವ ನಮ್ಮ ಪ್ರೇಕ್ಷಕ ಚುರುಕಾಗುತ್ತಾನೆ. ಆತ ಚುರುಕಾದಾಗ ಕೇವಲ ನಮ್ಮ ಚಿತ್ರಗಳಲ್ಲ, ನಮ್ಮ ಸಮಾಜ, ನಮ್ಮ ರಾಜಕೀಯವೂ ವಿಭಿನ್ನ ದಾರಿ ಹಿಡಿಯುತ್ತದೆ. ❖



ಬಿ. ಕೆ. ಎಸ್. ವರ್ಮಾರವರ ರೇಖಾಕೃತಿ

ನವ್ಯೋತ್ತರ ಕಲೆ ಮತ್ತು ಭಾರತೀಯ ಸಂದರ್ಭ

○ ○

ರವಿಕುಮಾರ ಕಾಶಿ

ಕಲೆ ಎಂದೂ ನಿಂತ ನೀರಲ್ಲ, ಬದಲಾವಣೆಯೇ ಕಲೆಯ ಜೀವಾಳ. ನವ್ಯೋತ್ತರ ಕಲೆ ಸಹ, ನವ್ಯ ಕಲೆಗೆ ಎದುರುತ್ತರವಾಗಿ ಬಂದಿದೆ. ಆದ್ದರಿಂದ ನವ್ಯೋತ್ತರದ ಆಶಯ, ಧೋರಣೆಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ನವ್ಯ ಕಲೆಯ ಬಗ್ಗೆಯೂ ಸ್ವಲ್ಪ ತಿಳಿದುಕೊಳ್ಳುವ ಅಗತ್ಯವಿದೆ. ಕಲೆ ಕಾಲ, ಪ್ರದೇಶಗಳ ಪ್ರಭಾವ ದಿಂದ ಹೊರಗುಳಿಯುವುದು ಸಾಧ್ಯವಿಲ್ಲವಾದ್ದರಿಂದ ಇದು ಇನ್ನಷ್ಟು ಅವಶ್ಯ.

ನಾನಿಲ್ಲಿ 'ನವ್ಯ ಕಲೆ' ಎಂದು ಕರೆದಿರುವುದು ಸರಿಸುಮಾರು 1907 ರಿಂದ ಐವತ್ತುವರುಷ ನಾಲ್ಕೈದು ದಶಕಗಳ ಕಾಲಮಾನದಲ್ಲಿ ಯುರೋಪಿನಲ್ಲಿ ಮತ್ತು ಅಮೆರಿಕದಲ್ಲಿ ಚಾಲ್ತಿಗೆ ಬಂದ ಅನೇಕ ಇಸಂ/ಕಲಾ ಪಂಥಗಳನ್ನು 1907ರಲ್ಲಿ ಆರಂಭ ವಾದ ಕ್ಯೂಬಿಸಮ್‌ನಿಂದ ಹಿಡಿದು ಅಬ್‌ಸ್ಟ್ರಾಕ್ಟ್ ಎಕ್ಸ್‌ಪ್ರೆಷನಿಸಂವರೆಗಿನ ಕಾಲ ವನ್ನು 'ನವ್ಯ ಕಲೆ' ಅಥವಾ 'ಆಧುನಿಕ ಕಲೆ' ಎಂದು ಗುರುತಿಸಬಹುದು.

ನವ್ಯಕಲೆಗೆ ಇದ್ದಂತಹ ಪ್ರಮುಖ ಧೋರಣೆಯೆಂದರೆ ಕಲಾವಿದನ ಅದ್ವಿತೀಯ ಪ್ರತಿಭೆ/ Geniusನಲ್ಲಿ ಇದ್ದಂತಹ ನಂಬಿಕೆ, ಮುಂಚೂಣಿ ಕಲಾವಿದರ/ಕಲಾಪಂಥಗಳು ಆರಂಭವಾದದ್ದು ಈ ನಂಬಿಕೆಯಿಂದ. ಅದುವರೆಗೆ ಕಲೆಯಲ್ಲಿ, ಸೌಂದರ್ಯಶಾಸ್ತ್ರ ದಲ್ಲಿ ಬೇರೂರಿದ್ದ ಸಂಪ್ರದಾಯಗಳ ವಿರುದ್ಧ ಎದ್ದ ಹೋರಾಟ ಇದಾಗಿತ್ತು. ನವ್ಯಕಲೆ ಐದು ದಶಕಗಳ ತನ್ನ ಅಸ್ತಿತ್ವದುದ್ದಕ್ಕೂ ಪ್ರಭುತ್ವದ ವಿರುದ್ಧ, ಕಲಾರಸಿಕರು ಅಲ್ಲಿಯ ತನಕವೂ ಯಾವುದನ್ನು ಕಲೆ ಎಂದು ನಂಬಿದ್ದರೋ ಆ ನಂಬಿಕೆಗಳ ವಿರುದ್ಧ ಕಾರ್ಯ ನಡೆಸಿದ್ದರಿಂದ ಕಲಾವಿದ ಸಮಾಜದಿಂದ ಬೇರೆಯಾದ ಒಂಟಿ ಜೀವಿಯಾದ. ಹಾಗೂ ಆ ಸಂದರ್ಭದಲ್ಲಿ ಸಂಪ್ರದಾಯವನ್ನು ತೃಣಮೂಲವಾಗಿ ತಿರಸ್ಕರಿಸಿದಾಗ ಕೆಲವು ಒಳ್ಳೆಯ ಅಂಶಗಳೂ ಸಹ ನವ್ಯಕಲೆಗೆ ಲಭಿಸಲಿಲ್ಲ. ಅದು ಹೇಗೆ ನವ್ಯೋತ್ತರದ ಕಾಲದಲ್ಲಿ ಮರಳಿ ಬಂತು ಎಂಬುದನ್ನು ಮುಂದೆ ನೋಡೋಣ.

ಪ್ರಾದೇಶಿಕತೆ, ಸಾಂಪ್ರದಾಯಿಕತೆ ಇತ್ಯಾದಿಗಳಿಂದ ಕಳಚಿಕೊಂಡ ನವ್ಯಕಲೆ ಜಾಗತಿಕವಾಗಿ ಬೆಳೆಯಿತು. ಈ ರೀತಿಯ ವಿಸ್ತಾರದಿಂದಾಗಿ ನವ್ಯಕಲೆಗೆ ಅಪಾರವಾದ ಹರವು ದೊರೆಯಿತಾದರೂ, ವಿಶ್ವದ ಅನೇಕ ಕಡೆಗಳಲ್ಲಿ ಒಂದೇ ರೀತಿಯ 'ಅಂತರ ರಾಷ್ಟ್ರೀಯ ಶೈಲಿ' ಎಂದು ಕರೆಸಿಕೊಳ್ಳುವ ಕಲೆ ಮೂಡಿಬಂತು. ಸ್ಥಳೀಯ ಸೊಗಡು ಗಳ ಸ್ಮೃತಿಯೇ ಇಲ್ಲದ ದೃಶ್ಯಭಾಷೆ ಇದಾಗಿತ್ತು. ಜೊತೆಗೇ ಆ ಕಾಲಕ್ಕೆ ಯುರೋಪಿನ ವಸಾಹತುಶಾಹಿ ವ್ಯವಸ್ಥೆ ಪ್ರಬಲವಾಗಿ ಅಲ್ಲಿನ ವಾಣಿಜ್ಯ/ಅರ್ಥ

ವ್ಯವಸ್ಥೆಗಳು ಕುದುರಿದ್ದರಿಂದಲೂ ಯೂರೋಪಿನ ಕಲೆಗೆ ಹೆಚ್ಚಿನ ಮಾನ್ಯತೆ ದೊರಕಿತು. ಯೂರೋಪಿನ ಉತ್ತಮ ಕಲಾವಿದರುಗಳು World Masterಗಳೇ ಆಗಿಬಿಟ್ಟರು.

ಸಂಪ್ರದಾಯ, ಜನಪದೀಯ ಮೂಲ, ಸಾಮಾನ್ಯ ಜನರ ಅಭಿರುಚಿಗಳನ್ನು ತಿರಸ್ಕರಿಸಿದ ನವ್ಯಕಲೆಗೆ ಐವತ್ತರ ದಶಕದ ವೇಳೆಗೆ ವಿರೋಧ ಆರಂಭವಾಯಿತು. ಎಲ್ಲ ವೈಶಿಷ್ಟ್ಯತೆಗಳನ್ನು ದಬ್ಬಿ ಅಂತರರಾಷ್ಟ್ರೀಯ ಶೈಲಿಗೆ ಇಸ್ತ್ರಿ ಮಾಡುವ ಈ ವಿಧಾನವನ್ನು ಅನೇಕ ಕಲಾವಿದರು ಒಪ್ಪಲಿಲ್ಲ. ಈ ಶತಮಾನದ ಮೊದಲ ದಶಕದಲ್ಲಿ 'ನವ್ಯ'ವೆನಿಸಿದ್ದ ಕಲೆ ಐವತ್ತರ ದಶಕದ ವೇಳೆಗೆ ತಾನೇ ಒಂದು ಸಂಪ್ರದಾಯವಾಗಿ ಬಿಟ್ಟಿತ್ತು. ನವ್ಯಕಲೆ ನಂಬಿದ್ದ Avant garde ತತ್ವದಿಂದಾಗಿ ಉಚ್ಚ ಅಭಿರುಚಿ/ನೀಚ ಅಭಿರುಚಿ, ಉಚ್ಚ, ನೀಚ, ಕಲೆ ಎಂಬ ತೀವ್ರ ತರತಮಗಳು ಸೃಷ್ಟಿಯಾಗಿದ್ದವು. ನವ್ಯೋತ್ತರದ ಕಲಾವಿದರು ನವ್ಯಕಲೆ ಯಾವುದನ್ನು ನೀಚ ಅಭಿರುಚಿ ಎಂದು ತಿರಸ್ಕರಿಸಿತ್ತೋ ಅದನ್ನೇ ತಮ್ಮದಾಗಿಸಿಕೊಂಡು ಕಲಾ ಸೃಷ್ಟಿಗೆ ತೊಡಗಿದರು.

ಅರವತ್ತರ ದಶಕದಲ್ಲಿ ಅಮೆರಿಕದಲ್ಲಿ ಹುಟ್ಟಿಕೊಂಡ ಪಾಪ್ ಕಲೆ ಒಂದು ಪ್ರಮುಖ ನವ್ಯೋತ್ತರ ಹೆಜ್ಜೆ. ಆ್ಯಂಡಿ ವರ್ಹೋಲ್, ರಾಬರ್ಟ್ ರೋಷನ್ ಬರ್ಗ್, ರಾಯ್ ಲಿಚ್‌ಟನ್ ಸ್ಟೀನ್ ಮುಂತಾದ ಕಲಾವಿದರು ನವ್ಯಕಲೆ 'ಕೀಳು' ಎಂದು ತಿರಸ್ಕರಿಸಿದ್ದ ಜಾಹೀರಾತು ಮಾಧ್ಯಮದಿಂದ ಅನೇಕ ಅಂಶಗಳನ್ನು ಪಡೆದುಕೊಂಡು ಕೃತಿ ರಚಿಸಿದರು. ಕಲಾವಿದ ಸಮಾಜದಿಂದ ಬೇರೆಯಾಗಿ ನಿಂತ ಒಂಟಿ ಜೀವಿಯಲ್ಲದೆ ಸಾಮಾನ್ಯ ಜನರ ಅಭಿರುಚಿಗೆ ಸ್ಪಂದಿಸುವ, ಅದರ ಜನಪ್ರಿಯ ಭಾಷೆಯಿಂದ ಪ್ರಭಾವಿತವಾಗುವ, ಅದೇ ಪ್ರವಾಹದ ಒಂದು ವಿಶಿಷ್ಟ ಬಿಂದು ಎಂಬ ನಂಬಿಕೆ ಬೆಳೆಯಿತು. ಸುತ್ತಲ ಜನಪದದ ಕಲೆಯಿಂದಲೇ ಅಲ್ಲದೇ ಮರೆತುಹೋಗಿದ್ದ ಅನೇಕ ಸಂಪ್ರದಾಯಗಳಿಗೆ ಕಲಾವಿದರು ಎಚ್ಚರಾಗಿ ಅದರಿಂದ ಹಲವು ಅಂಶಗಳನ್ನು 'ಎರವಲು' ಪಡೆದುಕೊಂಡರು. ವೈಯಕ್ತಿಕ ಇತಿಹಾಸಗಳ ಜೊತೆಗೇ ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಗುರುತುಗಳು, ಕೊಂಡಿಗಳೂ ಕಲೆಯಲ್ಲಿ ಮರುಕಳಿಸಿದುವು. ನವ್ಯೋತ್ತರದ ಕಲಾವಿದರು ಅನೇಕ ಆಕರಗಳಿಂದ ತಮ್ಮ ಪ್ರಭಾವವನ್ನು ಸ್ವೇಚ್ಛೆಯಿಂದ ಪಡೆದುಕೊಳ್ಳುವಂತಾದ್ದರಿಂದ 'ಮಿಶ್ರಣ ಕಲೆ' 'Eclectic Art' ಉತ್ಪನ್ನವಾಯಿತು.

ಜರ್ಮನಿಯ ಜೋಸೆಫ್ ಬಯ್ಸ್‌ನಂತಹ ಕಲಾವಿದರು ಕಲೆಯ 'ಮಾಧ್ಯಮ'ವನ್ನೇ ಒಂದು ಭಾಷೆಯಾಗಿ ಬಳಸಿದರು. ಅನೇಕ ಅಸಂಪ್ರದಾಯಿಕ ವಸ್ತುಗಳನ್ನು ಕಲೆಯ ಚೌಕಟ್ಟಿನೊಳಕ್ಕೆ ನವ್ಯೋತ್ತರದ ಕಲಾವಿದರು ತಂದರು. ಹೀಗಿದ್ದರೆ ಇದು ಚಿತ್ರಕಲೆ, ಇಂತಿದ್ದರೆ ಶಿಲ್ಪ ಎಂಬ ಕರಾರುವಕ್ಕಾದ ವಿವರಣೆಗಳು ವಿಭಜನೆಗಳು ಮಾಯವಾಗಿ ; ಚಿತ್ರಶಿಲ್ಪದ ಸೀಮೆಗಳೇ ತೆಳುವಾಗಿ ಬಿಟ್ಟವು.

ಕಲಾವಿದನ ದೇಹವನ್ನೇ ಮಾಧ್ಯಮವಾಗಿ, ರಂಗಮಂಚದ ಅಂಶಗಳನ್ನು

ಅಳವಡಿಸಿಕೊಂಡ Happeningಗಳು ಬಂದವು. 'ಸ್ಥಾಪನಾ ಕಲೆ' Installation Art ಪ್ರಾರಂಭವಾಯಿತು. ನಶ್ವರವಾದ, ಬೇಗ ನಶಿಸಿಹೋಗುವ ಮಾಧ್ಯಮಗಳನ್ನು ಬಳಸಿ, ಯಾರೂ ಕೊಳ್ಳಲಾಗದಂತಹ ಕೃತಿಗಳ ಸೃಷ್ಟಿಯಲ್ಲಿ ನವ್ಯೋತ್ತರದ ಕಲಾವಿದರು ತೊಡಗಿದರು. ಸಾಂಪ್ರದಾಯಿಕ ದೃಶ್ಯಭಾಷೆಗಿಂತ ಕಲಾವಿದನ ನಿಶ್ಚಯ ಹಾಗೂ ವಿಚಾರಗಳೇ ಮುಖ್ಯವಾದ 'Conceptual Art' ಸಹ ಪರಿಪಾಠಕ್ಕೆ ಬಂತು. ಹೆನ್ರಿ ಜೋರ್‌ನರ್, ರಾಬಿನ್ ಶೋರ್ಸ್, ಜಾರ್ಜ್ ಬಸೆಲಿಟ್ಸ್, ಅನ್ಸ್‌ಲೆಮ್ ರೇಫರ್, ಎ. ಆರ್. ಪೆಂಕ್, ಜೂಲಿಯನ್ ಶ್ನಾಬೆಲ್, ಭಾರತೀಯ ಮೂಲದ ಆನೀಷ್ ಕಪೂರ್ ಇವರೆಲ್ಲಾ ಪ್ರಖ್ಯಾತ ನವ್ಯೋತ್ತರ ಕಲಾವಿದರು.

ಭಾರತಕ್ಕೆ ನವ್ಯಕಲೆ ಪ್ರವೇಶವಾದದ್ದು ವಸಾಹತುಶಾಹಿ ಅನುಭವದ ಮೂಲಕವೇ. ಬ್ರಿಟಿಷರು ಬರುವ ಮುನ್ನ ನಮ್ಮ ಕಲೆ ಸಂಪ್ರದಾಯದಿಂದ ಸಂಪೂರ್ಣ ಬೇರ್ಪಟ್ಟಿರಲಿಲ್ಲ. ಜನಪದ ಕಲೆ ಜೀವಂತವಾಗಿತ್ತು. ಚಿಕಣಿ ಚಿತ್ರಕಲೆ ಇತ್ಯಾದಿ ಸಂಪ್ರದಾಯಗಳು ಶತಮಾನಗಳ ಕಾಲ ತಡೆಯಿಲ್ಲದೆ ತನ್ನ ಸುತ್ತಮುತ್ತಲ ಪ್ರಭಾವಗಳನ್ನು ಅರಗಿಸಿಕೊಳ್ಳುತ್ತಾ ಬಂದಿತ್ತು. ಆದರೆ ಬ್ರಿಟಿಷರ ವಸಾಹತುಶಾಹಿ ಆಳ್ವಿಕೆ ಬರೀ ರಾಜಕೀಯ ರೂಪದ್ದಾಗಿರದೆ ನಮ್ಮ ಸಂಸ್ಕೃತಿಗೂ ಕೈಹಾಕಿ ಇಲ್ಲಿನ ಸಂಪ್ರದಾಯದ ಬಗ್ಗೆ ನಮಗೆ ಕೀಳರಿಮೆ ಉಂಟುಮಾಡಿತು. ನಮ್ಮ ಕಲಾವಿದರು ಬ್ರಿಟೀಷರ ಅಗತ್ಯಗಳನ್ನು ಪೂರೈಸುವ ಕುಶಲಕರ್ಮಿಗಳಾಗಿಬಿಟ್ಟರು. ನೋಡು ನೋಡುತ್ತಾ ನಮ್ಮ ಕಲೆಗೆ ನಾವೇ ಪರಕೀಯರಾದೆವು. ತೀವ್ರಗತಿಯಲ್ಲಿ ಬೆಳೆದ ಈ ಪರಕೀಯತೆಗೆ ದೇಶೀ ಜನರ ಪ್ರತಿಭಟನೆ ಎರಡು ಪ್ರಮುಖ ಹಾದಿ ತುಳಿಯಿತು. ಒಂದು ಹಾದಿ ಸಂಪ್ರದಾಯವನ್ನು ಸಂಪೂರ್ಣ ತಿರಸ್ಕರಿಸಿ ಪ್ರಗತಿಪಥವನ್ನು ಒಪ್ಪಿಕೊಂಡು ಪರಕೀಯರ ಆಟದ ಮೈದಾನದಲ್ಲೇ ಅವರನ್ನು ಸೋಲಿಸುವ ಪ್ರವೃತ್ತಿ ತೋರಿತು. (PAG Bombay) ಮತ್ತೊಂದು ಹಾದಿ ಈ ಕೀಳರಿಮೆಯನ್ನು ನೀಗಿಕೊಳ್ಳುವ ಮಾರ್ಗದಲ್ಲಿ ನಮ್ಮ ಸಂಪ್ರದಾಯವನ್ನು ಜಾಲಾಡುವ, ಅದನ್ನೂ ಸುಧಾರಿತ ಸ್ವರೂಪದಲ್ಲಿ ಮುಂದೆ ತರುವ ಯತ್ನವಾಯಿತು. ಚಿಂತಕ ಆನಂದ ಕುಮಾರ ಸ್ವಾಮಿಯವರು ಪ್ರತಿಪಾದಿಸಿದ, ಬೆಂಗಾಲಿ ಶೈಲಿ ಒಪ್ಪಿಕೊಂಡ ರೀತಿ ಇದು. ಈ ರೀತಿ ಯೋಚಿಸಿದವರು ಮುಂದಿಟ್ಟ ವಾದವೆಂದರೆ ಭಾರತೀಯ ಜೀವನ ದರ್ಶನ, ಕಲೆ ಆಧ್ಯಾತ್ಮಿಕ ಸ್ವರೂಪದ್ದು. ಹಾಗಾಗಿ ಅದು ಪಾಶ್ಚಿಮಾತ್ಯರ ಭೌತಿಕವನ್ನೇ ಆಧರಿಸಿದ ಜೀವನ ದೃಷ್ಟಿಗಿಂತ ಒಂದು ಕೈಮೇಲು ಎಂಬ ವಿಚಾರ. ಇದು ವಾಸ್ತವದಲ್ಲಿ ವಸಾಹತುಶಾಹಿ ದೃಷ್ಟಿಯಲ್ಲಿ ಭಾರತವನ್ನು / ಪೌರ್ವಾತ್ಯವನ್ನು ಅಭ್ಯಾಸ ನಡೆಸಿದ ಎಲ್ಲ ಪಂಡಿತರ ರಮ್ಯ (Romantic) ಧಾಟಿ. ಇದನ್ನೇ ನಾವು ಅಕ್ಷರಶಃ ಇಂದಿಗೂ ನಂಬಿಕೊಂಡಿದ್ದೇವೆ. ಆಧ್ಯಾತ್ಮವನ್ನು ಉಳಿದಂತೆ ಇತರ ಕ್ಷೇತ್ರಗಳಲ್ಲಿ ಗಣಿತ, ತಂತ್ರಜ್ಞಾನ, ವಿಜ್ಞಾನ ಮುಂತಾದ ಶಾಸ್ತ್ರದಲ್ಲಿನ ಭಾರತದ ಸಾಧನೆಯನ್ನು ಗೌಣವಾಗಿಸಿದ ನಮ್ಮ ಭೌತಿಕ ಪ್ರಗತಿಯನ್ನೂ ಅಲ್ಲಗಳೆಯುವ ಹಾಗೂ

ಪೌರ್ವಾತ್ಯತೆಯನ್ನೂ (Oriental) ರಮ್ಯವಾಗಿ ಕಾಣುವ ಚಾಳಿ ಇದು. ಪರಕೀಯತೆ ತಂದ ಅಸುರಕ್ಷತತೆಯಿಂದ ಭಾರತದ ಸಂಸ್ಕೃತಿಗಳೆಲ್ಲವನ್ನೂ ಒಂದು ಮಾಡಿ ಸರಳೀಕರಿಸಿದ ಭಾರತದ ಸಂಸ್ಕೃತಿ, ಕಲೆಯ ಸೂತ್ರವೊಂದನ್ನು ನಾವು ಒಪ್ಪಿಕೊಂಡೆವು. ವಸಾಹತು ಆಳ್ವಿಕೆಯ ಪರಕೀಯರು ಕಟ್ಟಿಕೊಟ್ಟ ಭಾರತದ ರಾಷ್ಟ್ರೀಯ ಕಲ್ಪನೆ, ಅದರ ಸಾಂಸ್ಕೃತಿಕ ಆಕಾರಕ್ಕೆ ಕಲಾವಿದರು ಪ್ರತಿಕ್ರಿಯಿಸಿದರು. ಸ್ವಾತಂತ್ರ್ಯಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯಾನಂತರದ ಒಂದೆರಡು ದಶಕಗಳ ತನಕವೂ ಕಲೆಯಲ್ಲಿ ಭಾರತೀಯತೆಯನ್ನು ಗುರುತಿಸಿಕೊಳ್ಳುವ ಈ ಸಂಘರ್ಷ ಮುಂದುವರೆಯಿತು.


ಹಾಗಾಗಿ ನಾವು ನವ್ಯಕಲೆ / ನವೋತ್ತರ ಕಲೆ ಪದಗಳನ್ನು ಯೂರೋಪಿನ ಸಂದರ್ಭದಲ್ಲಿ ಬಳಸುವುದಕ್ಕೂ, ಭಾರತೀಯ ಸಂದರ್ಭದಲ್ಲಿ ಬಳಸುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ನಮ್ಮ ಕೆಲವು ಕಲಾವಿದರು ಯೂರೋಪಿನ ನವ್ಯಕಲೆಯ ಒಂದೋ ಎರಡೋ ಅಂಶಗಳನ್ನು ತಮ್ಮದಾಗಿಸಿಕೊಂಡು ಬೆಳೆದವರು. ಹಾಗೂ ಇನ್ನೂ ಕೆಲವರು ಸಂಪ್ರದಾಯದ ಕೆಲವು ಅಂಶಗಳನ್ನು ಅಳವಡಿಸಿಕೊಂಡರು. ಎಂಬತ್ತರ ದಶಕದ ಕೊನೆಯ ವೇಳೆಗೆ ನಾವು ತನ್ನತನವನ್ನು ಗುರುತಿಸಿಕೊಳ್ಳುವಲ್ಲಿ ವಸಾಹತುಶಾಹಿ ಆಳ್ವಿಕೆ ತಂದ ಅಭಿಪ್ರಾಯಗಳಿಂದ ದೂರವಾಗಿ ಒಂದು ಪ್ರೌಢ ಹಂತವನ್ನು ತಲುಪಿದೆವು. ಅಂತಲೇ ಯೂರೋಪು ಮತ್ತು ಭಾರತೀಯ ಸಂದರ್ಭದ ನವ್ಯೋತ್ತರ ಚಾಲನೆಗಳನ್ನು ಸಮ ಸಮ ಎಂಬಂತೆ ಕಾಣಲಾಗದು. ನವ್ಯೋತ್ತರದ ಭಾರತೀಯ ಅವತಾರವನ್ನು ಸಧ್ಯದ ಸ್ಥಿತಿಯಲ್ಲೇ ಒಂದು ಶೈಲಿಯಾಗಿ ದೀರ್ಘವಾಗಿ ಚರ್ಚಿಸುವುದಾಗಲೀ, ಒಂದು ಗಂಭೀರ ತಾತ್ವಿಕ ನೆಲೆಯಾಗಲೀ ಪರಿಗಣಿಸುವುದು ಕಷ್ಟವಾಗಬಹುದು. ಸದ್ಯಕ್ಕಂತೂ ನಮ್ಮಲ್ಲಿ ನವ್ಯೋತ್ತರ ಎಂದು ಗುರುತಿಸಲ್ಪಡುವ ಕಲೆ, ಶಿಲ್ಪಕಲೆ, ಪಾಶ್ಚಾತ್ಯ ತತ್ವಗಳನ್ನು ನಮ್ಮ ಹವಾಮಾನಕ್ಕೆ ತಕ್ಕುದಾಗಿ ಅಳವಡಿಸಿಕೊಳ್ಳುತ್ತಾ ತನ್ನ ನೆಲೆಗಳನ್ನು ಕಂಡುಕೊಳ್ಳಲು ಯತ್ನಿಸುತ್ತಿದೆ. ಪಶ್ಚಿಮದಲ್ಲಿಯಂತೆಯೇ ನಮ್ಮಲ್ಲೂ ಚಿತ್ರ / ಶಿಲ್ಪದ ರೂಢಿಗಳ ಸೀಮೆಗಳನ್ನು ದಾಟುವ ಪ್ರಯತ್ನ ನಡೆದಿದೆ.

ವಿವಾನ್ ಸುಂದರಂ ಎಂಬತ್ತರ ಮಧ್ಯಭಾಗದಿಂದಲೇ ಈ ದಿಶೆಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರವಾಸ ಮಾಡಿರುವ ವಿವಾನ್ ಅಲ್ಲಿನ ಇತ್ತೀಚಿನ ನವ್ಯೋತ್ತರದ ಥಳಕುಗಳನ್ನು ತಮ್ಮ ಕೃತಿಗಳಲ್ಲಿ ತರುವ ಪ್ರಯಾಸ ನಡೆಸಿರುವುದು ವಿದಿತ. ಅವರು ಎಂಬತ್ತರ ಮಧ್ಯಭಾಗದಲ್ಲಿ ಇಜ್ಜಲು, ಕಸ, ಕಡ್ಡಿ ಮುಂತಾದ್ದನ್ನು ಪಾರದರ್ಶಕ ಪಟ್ಟಿಗಳಲ್ಲಿ ತುಂಬಿ ನಶಿಸಿಹೋಗುತ್ತಿರುವ ಪರಿಸರದ ಬಗ್ಗೆ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿದರು. ವಿವಾನ್ 1991ರಲ್ಲಿ ಕುವೈತ್ ಯುದ್ಧದ ನಂತರ ಎಂಜಿನ್ ಆಯಿಲ್‌ಗಳನ್ನು ಬಳಸಿ ಯುದ್ಧದ ಸಾವು-ನೋವು ರಾಜಕೀಯಗಳ ಬಗ್ಗೆ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸಿದರು. 1992ರಲ್ಲಿ ದೆಹಲಿಯ ತಮ್ಮ Installationನಲ್ಲಿ 'ಪ್ರವಾಸ'ದ ಬಗ್ಗೆಯೇ ಅನೇಕ ಬಡಗಿಗಳು,

ಕುಶಲ ಕರ್ಮಿಗಳು, ಕವಿ, ವಾಸ್ತುಶಿಲ್ಪಿಗಳು ಒಡಗೂಡಿ Collabarative ಕಲೆ ಸೃಷ್ಟಿಸಿದರು. ತೀರ ಇತ್ತೀಚೆಗೆ ಮುಂಬೈನಲ್ಲಿ 94ರಲ್ಲಾದ ಮತೀಯ ದಂಗೆಗಳ ನಂತರ ದಂಗೆಯಲ್ಲಿ ಸತ್ತ ಒಬ್ಬ ಅನಾಮಿಕನ ವಾರ್ತಾಚಿತ್ರವನ್ನೇ ಕೇಂದ್ರವಾಗಿಟ್ಟು ಇಡೀ ಒಂದು Installation ಮುಂಬೈನ ಬೈಖಲ್ಲಾದ ಒಂದು ಗೋಡೌನ್‌ನಲ್ಲಿ ಮಾಡಿದ್ದರು. ಒಂದರ್ಥದಲ್ಲಿ ವಿವಾನ್ ಇತ್ತೀಚಿನ ಭಾರತೀಯ ಒಲವುಗಳ ಮುನ್ಸೂಚಕರೆನ್ನಬಹುದು. ಅದೇ ರೀತಿ ಗೋಗಿ ಸರೋಜ್ ಪಾಲ್ ಅಮ್ಸರ್ಟ ಡಮ್ಮಿನ 'ಡಾಕ್ಯುಮೆಂಟಾ ಕ್ಯಾಸೆಲ್' ಎಂಬ ಅಂತರರಾಷ್ಟ್ರೀಯ ಪ್ರದರ್ಶನದಲ್ಲಿ ನಮ್ಮ ಪೂಜಾಗೃಹವನ್ನು ಆಧರಿಸಿದ Installation ಮಾಡಿದ್ದಾರೆ, ಅದೇ ಪ್ರದರ್ಶನ ದಲ್ಲಿ ಭೂಪೇನ್ ಕಕ್ಕರ್ ಪಾನ್‌ಬೀಡಾ ಅಂಗಡಿಗಳ ಮಾದರಿಯ Installation ಮಾಡಿದ್ದರು. ಅದೇ ರೀತಿ ಮುಂಬೈನ ಕೃಷ್ಣಮಾಚಾರಿ ಬೋಸ್ ಪುಸ್ತಕಗಳನ್ನು ಬಳಸಿ Installation ಮಾಡಿದಲ್ಲದೆ ಪುಸ್ತಕರೂಪದ ಕುರ್ಚಿ, ಮೇಜು, ಕಪಾಟು ಗಳನ್ನು ಸಹ ವಿನ್ಯಾಸ ಮಾಡಿದ್ದರು. ಅಲ್ಲದೆ ನಲಿನಿ ಮಲಾನಿ, ಬಿ. ವಿ. ಸುರೇಶ್, ರೇಖಾ ರೊಡ್ವಿತಿಯಾ, ರಿಮ್‌ಜನ್, ವೇದ್ ನಯ್ಯಾರ್, ಇಂದ್ರೋ ಪ್ರಮಿತ್ ರಾಯ್, ಶೀಲಾ ಗೌಡ, ಪುಷ್ಪಮಾಲಾ ಇತ್ಯಾದಿ ಕಲಾವಿದರು ತಮ್ಮ ಕೆಲವು ಕೃತಿ ಗಳಲ್ಲಿ ಸ್ಥೂಲವಾಗಿ ನವ್ಯೋತ್ತರ ಎಂದು ಕರೆಯಬಹುದಾದ ಹಾದಿ ಹಿಡಿದಿದ್ದಾರೆ. ಈ ದಾರಿಯಲ್ಲಿ ಅಪಾಯಗಳಿಲ್ಲವೆಂದಲ್ಲ. ಹೆಚ್ಚಿನ ಕೃತಿಗಳು ದೃಶ್ಯಕ್ಕಿಂತ ಶಬ್ದಕ್ಕೆ ಹೆಚ್ಚು ಒತ್ತು ಕೊಡುತ್ತಾ ಪ್ರತಿಮಾನಗಳು ಇನ್ನಷ್ಟು ವೈಯಕ್ತಿಕವಾಗುತ್ತಾ ನಡೆದಿವೆ. ಅನೇಕ ಕೃತಿಗಳು ಮಾರುಕಟ್ಟೆಯಿಂದ ಬಿಡಿಸಿಕೊಳ್ಳುವ ವೈಚಾರಿಕತೆ ಯಿಂದ ಹೊರಟು ಗ್ಯಾಲರಿಯ ತೆಕ್ಕೆಯಲ್ಲೇ ಬೀಳುವ ವಿಪರ್ಯಾಸಗಳೂ ಇವೆ.

ಇದರೊಂದಿಗೆ ಸಮಕಾಲೀನ ಕಲೆ ದೊಡ್ಡ ರೀತಿಯಲ್ಲಿ ಎದುರಿಸಲೇಬೇಕಾ ಗಿರುವ ಸಾಂಸ್ಕೃತಿಕ ಸಂಕರ ಇಂದು ಉದ್ಭವವಾಗಿದೆ. ಉದಾರ ಆರ್ಥಿಕ ನೀತಿ, ಕಂಪ್ಯೂಟರ್, ಇಂಟರ್‌ನೆಟ್ ಹಾಗೂ ಸ್ಯಾಟೈಲೈಟ್ ಟಿ.ವಿ. ಇವುಗಳು ನಮ್ಮ ಸಮಾಜಕ್ಕೆ ಅನೇಕ ಪ್ರಭಾವಗಳನ್ನು ಶಕ್ತಿಯುತವಾಗಿ ಹೇರುತ್ತಿದೆ. ಕೆಲವರಂತೂ ಈ ಸ್ಥಿತಿಯನ್ನು ನವ-ವಸಾಹತುಶಾಹಿ ಎಂದೇ ಕರೆದಿದ್ದಾರೆ. ಉದಾರತೆ ತಂದಿರುವ ಈ ಅಸುರಕ್ಷತೆ ಮತ್ತೊಮ್ಮೆ ನಮ್ಮನ್ನು ಭಾರತೀಯ ಗುರುತಿನ ಹುಡುಕಾಟದಲ್ಲಿ ನಮ್ಮ ಸಾಂಸ್ಕೃತಿಕ ಗಡಿಗಳನ್ನು ಕುಬ್ಜವಾಗಿಸಿಕೊಂಡು ನಮ್ಮ ಸಂಸ್ಕೃತಿ, ಕಲೆ ಒಂದು ಸ್ಥಿರವಾದ ಸ್ಥಾವರವೆಂಬಂತೆ ವರ್ತಿಸಲು ಪ್ರೇರೇಪಿಸಬಹುದು. ಆದರೆ ಸಂಸ್ಕೃತಿ ಬದಲಾಗುತ್ತಲೇ ಇರುವ ವಿದ್ಯಮಾನ (ಜಂಗಮ) ಎಂಬುದನ್ನು ಅರಿತುಕೊಂಡಾಗ ನಮ್ಮ ಸಾಂಪ್ರದಾಯಿಕ, ಸಮಕಾಲೀನ ಕಲೆ ಎರಡಕ್ಕೂ ಹೊಸ ಚಾಲನೆ ಸಿಕ್ಕೀತು. ಸಾಂಪ್ರದಾಯಿಕ ಕಲೆ ತನ್ನ ನಿಶ್ಚಿತ ಕಟ್ಟುಪಾಡುಗಳಿಂದ ಹೊರಬರಲು ಸಾಧ್ಯ ವಾದೀತು ಹಾಗೂ ಸಮಕಾಲೀನ ಕಲಾವಿದರು ಈ ನವ್ಯೋತ್ತರದ ದಿನಗಳಲ್ಲಿ ಸಾಂಪ್ರದಾಯಿಕ ಕಲೆಯ ಬಗ್ಗೆಗಿನ ತಮ್ಮ ಅಸಡ್ಡೆಯನ್ನು ಬದಿಗೆ ಸರಿಸಿ ದಶಕಗಳ ಕಾಲ

ಕಳೆದುಹೋಗಿದ್ದ, ಮರೆತುಹೋಗಿದ್ದ ಕೊಂಡಿಗಳನ್ನು, ಸಾಂಸ್ಕೃತಿಕ ಸ್ಮೃತಿಗಳನ್ನು ಮತ್ತೊಮ್ಮೆ ಪಡೆಯಲು ಸಾಧ್ಯವಾಗಬೇಕು. ಇದು ಶತಮಾನದ ತಿರುವಿನಲ್ಲಿರುವ ಭಾರತೀಯ ಕಲೆಗಿರುವ ಒಂದೇ ಭರವಸೆ.



ಪುಸ್ತಕ ಪರಿಚಯ

○ ○

ಡಿ. ವಿ. ಪ್ರಹ್ಲಾದ್

ಕಟ್ಟುವೆವು ನಾವು (ಲೇಖನಗಳು) ಲೇ : ವ್ಯಾಸರಾಯ ಬಲ್ಲಾಳ
ಪ್ರ : ಗೀತಾ ಬುಕ್ ಹೌಸ್, ಮೈಸೂರು ಬೆಲೆ-ರೂ. ೫೦/-

ಹಿರಿಯ ಲೇಖಕರಾದ ವ್ಯಾಸರಾಯ ಬಲ್ಲಾಳರು ಈವರೆಗೂ ತಮ್ಮ ಸೃಜನಶೀಲ ಕೃತಿಗಳ ಮೂಲಕ ಹೆಚ್ಚು ಪರಿಚಿತರು. 'ಕಟ್ಟುವೆವು ನಾವು' ಬಲ್ಲಾಳರ ವೈಚಾರಿಕ ಜಗತ್ತಿನ ತೀವ್ರವಾದ ಸಾಮಾಜಿಕ ಚಿಂತನೆಗಳನ್ನು ಹಿಡಿದಿಟ್ಟ ಕೃತಿಯಾಗಿದೆ. ಬಲ್ಲಾಳರು ಸ್ವಾತಂತ್ರ್ಯದ ಹೋರಾಟವನ್ನು ಕಂಡವರು. ಜೊತೆಗೆ ಸ್ವಾತಂತ್ರ್ಯೋತ್ತರದ ಭಾರತದ ಬದುಕನ್ನೂ ಅನುಭವಿಸಿದವರು. ಅವರ ಪತ್ರಿಕಾ ವೃತ್ತಿಗೊಂದು ನಿಮಿತ್ತವಾದ ಲೇಖನ ('ಯಾವ ಬೆಲೆ ಶಾಂತಿಗಾಗಿ'–1947)ದಿಂದ ಆರಂಭಿಸಿ ಈಚಿನ 96ರವರೆಗಿನ ವಿವಿಧ ಪ್ರಸಂಗಗಳಲ್ಲಿ ಬೇರೆ ಬೇರೆ ವಿಷಯಗಳಿಗೆ ಅವರು ಸ್ಪಂದಿಸಿದ ಆಲೋಚಿಸಿದ ದಿಕ್ಕು ಇಲ್ಲಿ ದಾಖಲಾಗಿದೆ.

'ಕಟ್ಟುವೆವು ನಾವು' ಪುಸ್ತಕದ ಹದಿನಾರು ಲೇಖನಗಳಲ್ಲೂ ಎದ್ದು ಕಾಣುವುದು ಬಲ್ಲಾಳರು ನಮ್ಮ ಸಾಮಾಜಿಕ ಸಮಸ್ಯೆಗಳನ್ನು, ಗೊಂದಲಗಳನ್ನು ಕುರಿತು ನಡೆಸಿರುವ ಚಿಂತನ-ಮಂಥನವೆ. ಮೀಸಲಾತಿಯ ಬಗ್ಗೆಯಾಗಲೀ, ಅಧಿಕಾರದ ದಂಡಶಕ್ತಿ ಕುರಿತ ನಮ್ಮಲ್ಲಿರುವ ದಾಸ್ಯದ ಮನೋಭಾವ ಕುರಿತಾಗಲೀ ಅಥವಾ ಬುದ್ಧಿಜೀವಿಗಳ ಸೋಗಲಾಡಿತನದ ಸಾಮಾಜಿಕ ಕಾಳಜಿ ಬಗ್ಗೆಯಾಗಲೀ ಬಲ್ಲಾಳರು ತರುಣ ಧ್ವನಿಯಲ್ಲಿ ನಿರ್ಭೀತಿಯಿಂದ ಚರ್ಚಿಸುತ್ತಾರೆ. ಅವರು ಈ ಪುಸ್ತಕದಲ್ಲಿ ಮಂಡಿಸುವ ಅನೇಕ ವಿಷಯಗಳು ಚರ್ಚೆಗೆ ಅರ್ಹವೆ. ಆದರೆ ಅಂಥಾದ್ದೊಂದು ಚರ್ಚೆ ಆರಂಭವಾದಲ್ಲಿ ಈ ಕೃತಿಯ ಸಾಂದರ್ಭಿಕತೆ ಹೆಚ್ಚು ಅರ್ಥಪೂರ್ಣವಾಗಬಹುದು.

ಒಟ್ಟು ಸೃಜನಶೀಲ ಕೃತಿಗಳಲ್ಲಿ ಬಿಂಬಿತವಾಗಿರುವ ವ್ಯಾಸರಾಯ ಬಲ್ಲಾಳರ ಸಾಮಾಜಿಕ ಕಾಳಜಿ ಚಿಂತನೆಗಳಿಗೆ ಈ ಗದ್ಯಬರಹದ ಮೂಲಕ ಅದಕ್ಕೊಂದು ಹಿನ್ನೆಲೆ Background ದೊರಕಿಸಿಕೊಡುತ್ತದೆ. ಸ್ವಾತಂತ್ರ್ಯದ ನಂತರದ ಭಾರತದ ಮನಸ್ಸುಗಳು ತಾನು ತನ್ನ ಆತ್ಮಾವಲೋಕನ ಮಾಡಿಕೊಳ್ಳಬೇಕಾದ, ನಡೆದು ಬಂದ ದಾರಿಯ ಬಗೆಗೆ ಕಣ್ಣು ಹೊರಳಿಸಬೇಕಾದ ಕೆಲಸಕ್ಕೆ ಮೊಟುಗೋಲು ಈ ಪುಸ್ತಕ ಆಗುತ್ತದೆ.

ನೆನ್ನ ಹಿಮಾಲಯ (ಪ್ರವಾಸ ಕಥನ) ಲೇ : ಓ. ಎಲ್. ನಾಗಭೂಷಣಸ್ವಾಮಿ
ಪ್ರ : ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ, ಬೆಲೆ : ರೂ. ೪೦/-

ನನ್ನ ಹಿಮಾಲಯ ಪುಸ್ತಕವನ್ನು ಒಂದು ಪ್ರವಾಸ ಕಥನದ ಚೌಕಟ್ಟಿಗೆ ಸೇರಿಸಲು ಆಗುವುದಿಲ್ಲವೇನೋ. ಓ. ಎಲ್. ನಾಗಭೂಷಣಸ್ವಾಮಿ ತಾವು ವಿಭಿನ್ನ ಪ್ರಸಂಗಗಳಲ್ಲಿ ಸಂದರ್ಶಿಸಿದ ಹಿಮಾಲಯ ತಮ್ಮೊಳಗೆ ಮಡುಗಟ್ಟಿದ್ದನ್ನು, ಆ ಅನುಭವದ ಬೆಳಕಿನಲ್ಲಿ ತಾವು ಅನ್ವೇಷಿಸಿಕೊಂಡ ತಮ್ಮ ಮನಸ್ಸನ್ನು ಬಿಡಿಸಿಡುತ್ತಾರೆ. ಇದು ಏಕಕಾಲಕ್ಕೆ ಸೃಜನಶೀಲ ಕೃತಿಯ ಪರಿಣಾಮವನ್ನೂ ಹೊಂದಿ, ಆತ್ಮಕಥೆಯೂ ಆಗಿ, ಒಂದು ವಿಶಿಷ್ಟ ಕೃತಿಯಾಗಿದೆ.

ನಮ್ಮ ಬಹುಪಾಲು ಪ್ರವಾಸ ಕಥನಗಳಲ್ಲಿ ಎದ್ದುಕಾಣುವ ಶುಷ್ಕತೆ ಇಲ್ಲಿಲ್ಲ. ಯೆಶಿನ್ ಸಿದ್ಧಾಂತದ ಹಾಗೆ ಇದರ ಪ್ರವಾಸ ಹೊರಗಿನ ಜಗತ್ತಿನದ್ದು ಬರಿಯ ನೆಪವಾದರೆ ನಿಜವಾದ ಯಾನ ನಡೆಯುವುದು ಅಂತರಂಗದ ಜಗತ್ತಿನಲ್ಲಿ. ಅಲ್ಲಿ ಉದ್ಭವಿಸುವ, ವಿಸ್ತರಿಸುವ ಆಳ ಅಗಲಗಳನ್ನು ಪರಿಕ್ರಮಿಸುವ, ಮರುಹುಟ್ಟು ಪಡೆಯುವ ಹಿಮಾಲಯ ಬೇರೆಯದ್ದೇ ಆಗಿರುತ್ತದೆ. ಅದಕ್ಕೆ ಈ ಪುಸ್ತಕ ಓದುವಾಗ ಡೈರಿಯೊಂದನ್ನು ಓದಿದ ಅನುಭವ ಕೊಡುತ್ತದೆ. ಡೈರಿ ಓದುವುದು ಅಪಾರ ಕುತೂಹಲ-ಅವಸರಗಳನ್ನು ಬೇಡುತ್ತದೆ. ಕಂಡದ್ದನ್ನು-ಅನುಭವಿಸಿದ್ದನ್ನು ಅಷ್ಟೇ ತೀವ್ರವಾಗಿ ಹೇಳಬೇಕೆನ್ನುವ ಓ.ಎಲ್.ಎನ್.ರ ತೀವ್ರ ಪ್ರಾಮಾಣಿಕತೆ ಈ ಪುಸ್ತಕದ ಹೆಗ್ಗಳಿಕೆ. ಹಾಗೇ ಹೇಳುತ್ತೇನೆ, ಹೇಳಬೇಕು ಎನ್ನುವ ತೀವ್ರವಾದ ಎಚ್ಚರ ಕೂಡಾ ಇದಕ್ಕೊಂದು ತೊಡಕಾಗಿಯೂ ಕಾಣುತ್ತದೆ.

ಯದುಗಿರಿಯ ಅಂಗಳದಿಂದ ಪು.ತಿ.ನ. ಸಾಹಿತ್ಯ ಕುರಿತ ಅಭಿನವ ಪತ್ರಿಕೆಯ ಸಂಚಿಕೆ ವಾರ್ಷಿಕ ಚಂದಾ ರೂ. ೫೦/-

ಕನ್ನಡದ ಕಾವ್ಯ ಜಗತ್ತಿನಲ್ಲಿ ತಮ್ಮದೇ ಆದ ಅನನ್ಯತೆ ಸಾಧಿಸಿರುವ ಪು.ತಿ.ನ. ರನ್ನು ಕುರಿತು ಈವರೆಗೂ ನಡೆದಿರುವ ಚರ್ಚೆ ಬಲು ಅಲ್ಪ ಪ್ರಮಾಣದ್ದು. ನಮ್ಮ ಮೊದಲ ಸಾಲಿನ ಕೆಲವು ಲೇಖಕರನ್ನುಳಿದು ಇತರರ ಬಗ್ಗೆ ದಾಖಲಿತವಾಗಿರುವ ವಿಮರ್ಶೆ-ಚರ್ಚೆಗಳ ಪ್ರಮಾಣ ಕಡಿಮೆ ಎಂದೇ ಹೇಳಬಹುದು. ಅಭಿನವದ ಗೆಳೆಯರ ಈ ದಿಕ್ಕಿನ ಪ್ರಯತ್ನ ಗಮನಾರ್ಹ.

ಪ್ರಾಕಾರ-ಪ್ರಾಂಗಣ ಎನ್ನುವ ಎರಡು ವಿಭಾಗಗಳಲ್ಲಿ ಮೊದಲನೆಯದರಲ್ಲಿ ಪುತಿನರವರ ಸಾಹಿತ್ಯ ಕುರಿತು ಇತರರ ಬರಹಗಳು, ಎರಡನೆಯ ಭಾಗದಲ್ಲಿ ಪುತಿನ ರವರ ಆಯ್ದ ಕೆಲವು ಬರಹಗಳು ಹಾಗೂ ಸಂದರ್ಶನಗಳಿವೆ. ಅಹಲ್ಯೆ ನಾಟಕ ಕುರಿತ ಕೆ. ವಿ. ಅಕ್ಷರ ಮತ್ತು ಜಿ. ರಾಜಶೇಖರ ಅವರ ಬರಹಗಳು ಒಂದು ವಿಭಿನ್ನ ಚರ್ಚೆಯ ಆರಂಭ ಬಿಂದುವಾಗಿದೆ. ವೀಣಾ ದೊರೆಸ್ವಾಮಿ ಅಯ್ಯಂಗಾರರ ಬರಹ, ನೀಲತ್ತಹಳ್ಳಿ ಕಸ್ತೂರಿ, ಎಸ್. ಮಂಜುನಾಥ ಮತ್ತು ಗೋವಿಂದ ಹೆಗಡೆ ಅವರ ಪ್ರತಿಕ್ರಿಯೆಗಳು ಕುತೂಹಲಕರವಾಗಿದೆ. ಸಂಪಾದಕರ ಸ್ವಯಂ ಹೇಳಿಕೆಯಿಂದಲೂ ಭಿನ್ನ ನೆಲೆಯಲ್ಲಿ ಈ ಪುಸ್ತಕ ಪುತಿನ ಕುರಿತು ಚರ್ಚಿಸಿದೆ. ಈ ಸುಂದರ ಪುಸ್ತಕದ ಒಂದೇ ಕೊರತೆ ಪಾಯಸದೊಳಗೆ ಕಲ್ಲು ಸಿಕ್ಕಹಾಗೆ ಅನೇಕ ಅಚ್ಚುದೋಷಗಳು.

ಹನಿಗವನಗಳು

—ಸಂದೀಪ್ ನಾಯಕ

ಒಂದು ಮೋಡ

ಚಳಿಯಲ್ಲಿ ಚಂದ್ರನಿಗಾಗಿ
ಒಂದೇ ಒಂದು
ಹರಿದ ನಿಲುವಂಗಿ

ದಾಹ

ಸಮುದ್ರದ ಎದುರು
ನನಗೆ ಬಾಯಾರಿಕೆ–
ಎಲ್ಲಿದೆ ನೀರು ?

ಒಬ್ಬ ನರ್ತಕಿ

ಧಕ್ಕೆಗೆ ತೆಕ್ಕೆ ಹಾಕಿ
ಮೆಲ್ಲಗೆ ಏರಿಳಿವ ದೋಣಿ :
ಕಡಲ ತಡಿಯಲ್ಲೊಬ್ಬಳು ನರ್ತಕಿ

ಕಳಕೊಂಡದ್ದು

ಎಲ್ಲ ನಿನ್ನಲ್ಲೆ ಇರುವಾಗ
ನಾನು ಎಲ್ಲೆಡೆ
ಅರಸುವುದಾದರೂ ಏನನ್ನು ?
ಬರಿ ನಿನ್ನನ್ನು !

ಮೊಗ್ಗು

ಬೆಳ್ಳಂ ಬೆಳಗು
ಒಣ ಕೊಂಬೆಗೆ
ಮಳೆ ಹನಿಗಳ ಮೊಗ್ಗು

ಸಿಕ್ಕಿದು

ನೆಲ ಅಗೆದಗೆದು
ರಾಶಿ ಮಣ್ಣ
ಹೊರ ಹಾಕಿದರೂ
ಸಿಗಲಿಲ್ಲ ಚಿನ್ನದದಿರು
ಬಂದದ್ದು ಬರಿ ನೀರು

 No. MAG(2) PRB-DECL 309/94-95

ಸಂಚಯ·೧೦

ಈ ಸಂಚಯದಲ್ಲಿ

SANCHAYA (Bi-Monthly) Edited Printed & Published by D. V. Prahlad, 24/D 17th Main, Muneshwara Block, G.E.F. P.O. Bangalore-560 026 Ph : 6671332